ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ)—ನಂಜನಗೂಡು ಸಬ್‌ಡಿವಿಜನ್ ಏರಿಯಾ ಈ ಪರಿಸ್ಥಿತಿ ಗೊಳಪಟ್ಟಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಂಸ್ಥಾನದ ಇತರ ಭಾಗಗಳೂ ಈ ಪರಿಸ್ಥಿತಿಗೊಳಪಟ್ಟಿವೆ. ಅದರಲ್ಲಿ ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ ಇನ್ನೂ ಕೆಲವು ಭಾಗಗಳೂ ಸೇರುತ್ತವೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮೈಸೂರು ಜಿಲ್ಲೆಯ ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ಮುಂತಾದ ತಾಲ್ಲೂಕುಗಳಲ್ಲಿ ಜೋಳದ ಫಸಲು ವಿಶೇಷ ನಷ್ಟವಾಗಿರುವುದರಿಂದ ಆ ಭಾಗವನ್ನೂ ಸಹ ಸ್ಕೇರ್ಸಿಟಿ ಏರಿಯಾದೊಳಗೆ ಸೇರಿಸಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಯೋಚನೆ ಮಾಡಲಾಗುತ್ತದೆ.

ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಈ ಕೆಲವು ಬಯಲು ಸೀಮೆ ಪ್ರದೇಶಗಳು ಯಾವಾಗಲೂ ಬರಗಾಲ ಪರಿಸ್ಥಿತಿಯಲ್ಲಿರುವ ಕಾರಣ ಲಿಬರಲೈಜ್ಡ್ ಸ್ಕೀಂ ರೂಲ್ಸ್ ಪ್ರಕಾರ ಬಾವಿಗಳನ್ನು ಒಂದು ಕೋಟಿ ಚಿಲ್ಲರೆ ಖರ್ಚಿನಲ್ಲಿ ಕಟ್ಟಿ ಕೊಟ್ಟರೆ ಅದರಿಂದ ಪ್ರಯೋಜನವಾಗುತ್ತದೆಯಲ್ಲವೇ ? ಆದ್ದರಿಂದ ಸುಮ್ಮನೆ ತಡ ಮಾಡದೆ ಕೂಡಲೇ ಪರ್ಮನೆಂಟ್ ಸ್ಕೀಂ ಮಾಡಲು ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಈಗಾಗಲೇ ಆ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಒಂದು ಪರ್ಮನೆಂಟ್ ಸ್ಕೀಂ ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ. ಈಗ ಸದ್ಯಕ್ಕೆ ಲಿಬರಲೈಸ್ಡ್ ಸ್ಕೀಂ ಪ್ರಕಾರ ಕೆಲವು ಕಡೆಗಳಲ್ಲಿ ಬಾವಿಗಳನ್ನು ಜಾಗ್ರತೆಯಾಗಿ ಹೆಚ್ಚು ತೆಗೆಯುತ್ತೇವೆ.

ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು).—ದಕ್ಷಿಣ ಕನ್ನಡ ಜಿಲ್ಲೆಯಿಂದ ಬರಗಾಲದ ಕ್ಷಾಮ ನಿವಾರಣೆಗೋಸ್ಕರವಾಗಿ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ತುಂಬಾ ಮನವಿಗಳು ಮತ್ತು ಅರ್ಜಿಗಳು ಬಂದಿವೆ. ಈಗ ಕೇವಲ 23 ಅಂಗಡಿಗಳು ಮಾತ್ರ ಇವೆ. ಕಳೆದ ವರ್ಷ 80 ಅಂಗಡಿಗಳು ಇದ್ದುವು. ಆದ್ದರಿಂದ ಬರಗಾಲದ ಪ್ರದೇಶಗಳಲ್ಲಿ ಹೆಚ್ಚಿಗೆ ಆಹಾರ ಪದಾರ್ಥಗಳು ಮುಂದೆ ದೊರೆಯುವ ಹಾಗೆ ಹೆಚ್ಚಿಗೆ ಅಂಗಡಿಗಳನ್ನು ತೆರೆಯುವ ಸಂಭವವುಂಟೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ದಕ್ಷಿಣ ಕನ್ನಡ ಜಿಲ್ಲೆಗೆ ಈಗಾಗಲೇ ಒಂದು ಸಾವಿರ ಟನ್ ಅಕ್ಕಿ ಮೂವ್ ಆಗುತ್ತಿದೆ. ಕೊಚ್ಚಿನ್ ಮುಂತಾದ ಪ್ರದೇಶಗಳಿಂದ ಅದು ಬರುತ್ತಿದೆ. ಲೀನ್ ಪೀರಿಯಡ್‌ನೊಳಗೆ ಬೇಕಾದಷ್ಟು ಆಹಾರ ಪದಾರ್ಥಗಳು ದೊರೆಯುವ ಹಾಗೆ ವ್ಯವಸ್ಥೆ ಮಾಡಿದೆ. ಅಲ್ಲದೆ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ಚೆನ್ನಾಗಿ ಬೆಳೆ ಬರುತ್ತದೆ. ಆಗ ಇನ್ನಷ್ಟು ಡಿಪೋಗಳನ್ನು ತೆರೆಯುವುದಕ್ಕೆ ಏರ್ಪಾಡು ಮಾಡುತ್ತೇವೆ.

Mr. SPEAKER.—Now the debate will continue.

From the lists sent to me I find that there are a very large number of members who want to speak. Is the House agreeable to have a continuous session without any break for Tea? Such of the members who are desirous to have tea can go out and have it so that some more members could be given a chance to speak. Now Sri Gopala Gowda will kindly conclude within another five minutes. I am giving 10 minutes each to other members.

Sri D. PARAMESWARAPPA (Honnali).—I was not present on the day when the discussion took place.

Mr. SPEAKER.—But that does not give you the right to raise the same thing. I am not going to accept.

Sri D. PARAMESWARAPPA.—The same matter...

Mr. SPEAKER.—Then, kindly ...

Sri G. V. GOWDA.—I may be permitted to say a few words.

Mr. SPEAKER.—If The hon-Memberes raising a point of order that is ruled out, he cannot. If it is a new one, he has got the right to proceed.

Sri G. V. GOWDA.—I will take another opportunity afterwards.

NON-OFFICIAL RESOLUTION

Re: changnig the present name of Mysore State into Karnataka State.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಹೆಚ್ಚು ಕಾಲಾವಕಾಶವಿಲ್ಲದೇ ಇರುವುದರಿಂದ ನಾನು ಈ ವಿಷಯದ ಮೇಲೆ ದೀರ್ಘವಾದ ಭಾಷಣವನ್ನು ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಕೆಲವು ವಿಷಯಗಳನ್ನು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶ್ರೀಮಾನ್ ಮಾದಯ್ಯಗೌಡರು ಒಂದು ಭಯ ಅಥವಾ ಶಂಕೆ ಅಥವಾ ಆರೋಪ ಎಂದು ಹೇಳಬಹುದಾದ ಒಂದು ವಿಷಯದ ಬಗ್ಗೆ ಬಹಳ ಒತ್ತಾಯ ಮಾಡಿ ಈ ಸಭೆಗೆ ತಿಳಿಸಿದ್ದಾರೆ. ಕರ್ನಾಟಕ ಆಗುವುದರಿಂದ ಯಾವುದೋ ಒಂದು ಜನಾಂಗದ ಸಾಮ್ರಾಜ್ಯ ಸ್ಥಾಪನೆಯಾಗುತ್ತದೆ. ಬೇರೆ ಜನಾಂಗಗಳಿಗೆ ಅದರಿಂದ ಬಹಳ ತೊಂದರೆಯುಂಟಾಗುತ್ತದೆ ಎಂಬುದನ್ನು ಅವರು ಹೇಳಿದ್ದಾರೆ. ಆ ವಾದ ಕನ್ನಡನಾಡು ಒಂದಾಗಬೇಕು, ಕರ್ನಾಟಕ ಆಗಬೇಕು ಎಂಬ ಒಂದು ಚಳುವಳಿ ನಡೆದಾಗಲೂ ಕೂಡ ಇದು ಬಂದಿತ್ತು. ಮತ್ತು ಆ ಸಂದರ್ಭದಲ್ಲಿ ಎಸ್. ಆರ್. ಸಿ. ಕಮಿಷನ್‌ರಿಗೆ ಅವರಿಗೆ ಮೈಸೂರು ಮೈಸೂರಾಗಿಯೇ ಉಳಿಯಬೇಕು ಎನ್ನತಕ್ಕ ಚಳುವಳಿ ಮಾಡಿದ ಜನರು ಒಂದು ಮನವಿಯನ್ನು ಅರ್ಪಿಸಿದ್ದರು. ಅದರಲ್ಲಿ ಏನು ಒಂದು ಭಯವನ್ನು ವ್ಯಕ್ತಪಡಿಸಿದ್ದರೋ ಅದಕ್ಕೆ ಒಂದು ಸಮಂಜಸವಾದ ಉತ್ತರವನ್ನು ಕೊಟ್ಟು ಆ ಭಯವನ್ನು ಈಗ

(ಶ್ರೀ ಎಸ್. ಗೋಪಾಲಗೌಡ)

ನಿವಾರಣೆ ಮಾಡಿದ್ದಾರೆ. ಅದನ್ನು ಈ ಮಾನ್ಯ ಸಭೆಯಲ್ಲಿ ಓದುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತೇನೆ. ಈ ರಿಪೋರ್ಟಿನ 324ನೇ ಪುಟದಲ್ಲಿ ಹೀಗೆ ಹೇಳುತ್ತಾರೆ :—

"It has been suggested to us that the basic reason why two States have sometimes been demanded instead of one is either political or religious apprehensions or perhaps a combination of both. It has been estimated that Lingayats constitute about 35 to 40 per cent of the population in the Kannada areas outside Mysore at present. The other important section of Kannadigas, namely, the the Vokkaligas, similarly constitute a little less than 29 per cent of the population of Mysore. In the United Karnataka, it has been estimated that a little more than 20 per cent of the population may be Lingayets, between 13 and 14 per cent Vokkaligas and about 17 to 18 per cent Harijans. It is clear that no one community will therefore be dominant and any one section can be reduced to the status of a minority if other groups join against it. These estimates of the communal position of the new State are naturally not firm because the figures which have been quoted vary considerably. They serve, however, to illustrate the problem."

ಅಂಥಾ ಒಂದು ಭಯವನ್ನು ನಿವಾರಣೆ ಮಾಡುವುದಕ್ಕೆ ಈ ಮಾತನ್ನು ಆಗಲೇ ಹೇಳಿದ್ದರು. ಇದರಲ್ಲಿ ನಾನು ಒಂದು ಮಾತನ್ನು ತಮ್ಮ ಗಮನಕ್ಕೆ ತರಬಹುದು. ಏನೆಂದರೆ ಲಿಂಗಾಯತರಲ್ಲಿ ಕರ್ನಾಟಕ ಕನ್ನಡ ಅನ್ನುವುದರ ಬಗ್ಗೆ ಏಕೆ ಹೆಚ್ಚು ಉತ್ಸಾಹ, ಆತಂಕ, ಕಳಕಳಿ ಇದೆ ಎನ್ನುವುದಕ್ಕೆ ಕೆಲವು ಚಾರಿತ್ರಿಕ ಕಾರಣಗಳು ಇವೆ. ಅದರ ಬಗ್ಗೆ ನಾನು ಚರಿತ್ರೆಯನ್ನು ಹೇಳಬೇಕಾದ ಅಗತ್ಯತೆ ಇಲ್ಲ. ಮಾನ್ಯ ಸದಸ್ಯರೆಲ್ಲರಿಗೂ ಆ ಚಾರಿತ್ರಿಕ ಹಿನ್ನೆಲೆ ಗೊತ್ತೇ ಇದೆ. ಕನ್ನಡ ಸಾಹಿತ್ಯಕ್ಕೆ ಕನ್ನಡ ರಾಜ್ಯಕ್ಕೆ, ಕನ್ನಡ ನಾಡಿಗೆ, ಲಿಂಗಾಯತರು ಒಂದು ಪ್ರತ್ಯೇಕ ಜನಾಂಗವಾಗಿ ದುಡಿದಿದ್ದಾರೆ. ಸಾಹಿತ್ಯದಲ್ಲಿ ನಾವು ಬಸವಣ್ಣನವರು, ಅಕ್ಕಮಹಾದೇವಿ, ಷಡಕ್ಷರಿ ಇವರನ್ನು ನೋಡುತ್ತೇವೆ. ಇನ್ನೂ ಅನೇಕರು ಇದ್ದಾರೆ. ಅಂದರೆ ಅವರು ಜಾತಿಯ ದೃಷ್ಟಿಯಿಂದ ಸಾಹಿತ್ಯವನ್ನು ನಿರ್ಮಾಣ ಮಾಡಲಿಲ್ಲ. ಯಾರೂ ಕವಿಗಳನ್ನು ಜಾತೀಯ ದೃಷ್ಟಿಯಿಂದ ನೋಡಬೇಕಾದ್ದಿಲ್ಲ. ಆದರೆ ಇವತ್ತಿಗೂ ನೋಡುತ್ತೇವೆ, ಬೀದರ್‌ನಲ್ಲಿ, ಗುಲ್ಬರ್ಗದಲ್ಲಿ ಹಳ್ಳಿಯ ಕಡೆ ಕನ್ನಡ ಲಿಂಗಾಯತರ ಭಾಷೆ ಎಂದು ಹೇಳುತ್ತಾರೆ. ಅಲ್ಲಿ ಆ ಒಂದು ಪರಿಸ್ಥಿತಿಯನ್ನು ಕಾಣುತ್ತೇವೆ. ಏಕೆಂದರೆ, ಆ ಒಂದು ಉತ್ಕಟವಾದ ಇಚ್ಛೆ. ಅವರಲ್ಲಿ ಹೆಚ್ಚಾಗಿದ್ದರೆ ಅದರ ಬಗ್ಗೆ ಬೇರೆಯವರು ಅದನ್ನು ತಪ್ಪು ಅಂತ ಹೇಳಬೇಕಾದ್ದು ಅಗತ್ಯವಿಲ್ಲ. ಒಂದು ಮಾತನ್ನು ಹೇಳಬಹುದು. ಯಾರೇ ಆಗಲೀ ತಪ್ಪು ತಿಳುವಳಿಕೆಯಿಂದಲೇ ಆಗಲೀ ಅಥವಾ ಅತಿ ಅಭಿಮಾನದಿಂದಲೇ ಆಗಲೀ ಇದು ಕೇವಲ ನನ್ನ ರಾಜ್ಯ, ಬೇರೆಯವರಿಗೆ ಅವಕಾಶವಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ. ಹಾಗೆಯೇ ನನ್ನ ಸ್ನೇಹಿತರು ಮೈಸೂರಿನವರು ಯಾರಾದರೂ ಮೈಸೂರಾಗಿಯೇ ಉಳಿದಿದ್ದರೆ ಒಕ್ಕಲಿಗರ ರಾಜ್ಯವಾಗಿರುತ್ತದೆ ಎಂದು ತಿಳಿದುಕೊಂಡಿದ್ದರೆ, ಅದು ಬಹಳ ತಪ್ಪು ಭಾವನೆಯಾಗುತ್ತದೆ. ಏಕೆಂದರೆ ಭಾಷೆಯ ಆಧಾರದ ಮೇಲೆ ಪ್ರಾಂತರಚನೆ ಮಾಡಬೇಕೆಂದು ಒಪ್ಪಿಕೊಂಡಿದ್ದೇವೆ. ಆದರೆ ಜಾತಿಗಳ ಆಧಾರದ ಮೇಲೆ ನಾವು ಪ್ರಾಂತ್ಯಗಳನ್ನು ಮಾಡಿಲ್ಲ ಮತ್ತು ರಾಜ್ಯಾಂಗದಲ್ಲೂ ಕೂಡ ಜಾತೀಯತೆಯ ಮೇಲೆ ಯಾವ ರೀತಿಯ ರಾಜ್ಯ ನಿರ್ಮಾಣ ಮಾಡುವುದಕ್ಕೂ ಹೊರಟಿಲ್ಲ. ಎಲ್ಲರಿಗೂ ಸಮಾನವಾದ ಅವಕಾಶವಿದೆ. ಆದರೆ ಇವತ್ತು ವಾಸ್ತವವಾಗಿ, ವಾಸ್ತವೀಯ ಜೀವನದಲ್ಲಿ ಏರು ಪೇರು ಉಂಟಾಗುವುದು ಸಹಜ. ಇದನ್ನು transition period ಎಂದು ಕರೆಯಬಹುದು. ಈ ಒಂದು ಘಟ್ಟದಲ್ಲಿ ಇದ್ದೇವೆ. ಹೊಂದಾಣಿಕೆ ಆಗಿಲ್ಲ. ಏರುಪೇರು ಆಗಿದೆ. ವಾಸ್ತವವಾಗಿ ಹೇಳಬೇಕೆಂದರೆ ಮುಂಬೈ ಕರ್ನಾಟಕದ ಕಾನೂನು ಕಾಯಿದೆ ಸಮನ್ವಯಗೊಳಿಸುವುದಕ್ಕೆ ಆಗಿಲ್ಲ. ಹೈದರಾಬಾದ್ ಕರ್ನಾಟಕದ ಕಾನೂನು ಕಾಯಿದೆ ಸಮನ್ವಯಗೊಳಿಸುವುದಕ್ಕೆ ಆಗಿಲ್ಲ. ಇನ್ನು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸಂಪರ್ಕವಿಲ್ಲದೇ ಪರಸ್ಪರ ಅರ್ಥಮಾಡಿಕೊಳ್ಳುವುದಕ್ಕೆ ಸಾಕಾದಷ್ಟು ಅವಕಾಶ ಒದಗಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಏನಾಗುತ್ತದೆ ಎಂದರೆ ವಿದ್ಯೆ ಕೊಡತಕ್ಕ ಸಂಸ್ಥೆಗಳಲ್ಲಿ, ನೌಕರಿಗಳನ್ನು ಪಡೆದುಕೊಳ್ಳಲು ಹೋಗತಕ್ಕ ಸಂಸ್ಥೆಗಳಲ್ಲಿ ಮತ್ತು ರಾಜಕೀಯ ಸಂಸ್ಥೆಗಳಲ್ಲಿ ಈ ಜಾತೀಯತೆಯ ಬೆಂಬಲದ, ಜಾತೀಯ ಸಂಖ್ಯೆಯ ಬಲದಿಂದ ಏರುಪೇರುಂಟಾಗುವುದನ್ನು ನಾವು ನೋಡುತ್ತೇವೆ. ಆದ್ದರಿಂದ ಇದನ್ನು ಸಹಿಸಿಕೊಳ್ಳಬೇಕಾಗುತ್ತದೆ. ವಾಸ್ತವತೆಯನ್ನು ಅಲ್ಲಗಳೆದರೆ ತಪ್ಪಾಗುತ್ತದೆ. ಈ ಬುನಾದಿಯ ಆಧಾರದ ಮೇಲೆ ಸಾಧಿಸುವುದು ಮುಂದಿನ ಭವಿಷ್ಯವನ್ನು ರಾಜಕೀಯವನ್ನು ನಿಶ್ಚಿತವಾಗಿ ಕಟ್ಟಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಆದ್ದರಿಂದ ಮಾನ್ಯ ಸ್ನೇಹಿತರು ಏನೊಂದು ಭಯವನ್ನು ಹೇಳಿದ್ದಾರೆ, ಅದಕ್ಕೆ ನಾನಾದರೂ ಅನೇಕ ಸಲ ಹೇಳಿದೇನೆ ಅದು ಹಾಗಾಗುತ್ತದೆ ಎಂಬ ಭಯಕ್ಕೆ ಕಾರಣವಿಲ್ಲ. ನಾವು ಮುಂದೆ ಅದನ್ನು ಯಾವ ರೀತಿ ಎದುರಿಸಬೇಕೋ ಆ ರೀತಿ ಎದುರಿಸಬೇಕೇ ವಿನಃ ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇಟ್ಟ ಮಾತ್ರಕ್ಕೆ ಯಾವುದೋ ಒಂದು ಜನಾಂಗದವರು ಆ ಹೆಸರನ್ನು ನಮ್ಮ ಮೇಲೆ ಹೇರುತ್ತಾರೆ, ತಮ್ಮ ಸಾಮ್ರಾಜ್ಯ ಸ್ಥಾಪನೆ ಮಾಡುತ್ತಾರೆ ಎನ್ನುವ ಮಾತಿನಲ್ಲಿ ಸತ್ಯಾಂಶವಿಲ್ಲ ಎಂದು ಹೇಳುತ್ತೇನೆ. ಮತ್ತು ಆ ವಿಷಯದಲ್ಲಿ ಅದನ್ನು ಒಂದು ದೊಡ್ಡದು ಮಾಡಿ ಇವತ್ತು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಕರೆಯುವುದಕ್ಕೆ ಯಾರೂ ಅಡ್ಡಿ ಬರಬಾರದು ಎಂದು ನಮ್ಮ ಸ್ನೇಹಿತರಿಗೆ ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳುವುದಾದರೆ, ಕರ್ನಾಟಕವಾಗುವುದರಿಂದ ಈ ಒಂದು ರಾಜ್ಯ ಆದದ್ದಕ್ಕೆ ಸಾರ್ಥಕವಾಯಿತು. ಇದರಿಂದ ಮುಂದೆ ನಾವು ಹೆಚ್ಚು ಅಭಿವೃದ್ಧಿ ಸಾಧಿಸಬಹುದು. ಒಮ್ಮತವನ್ನು ಸಾಧಿಸಬಹುದು. ಐಕ್ಯತೆಯನ್ನು ಸಾಧಿಸಬಹುದು ಎಂದು ಹೇಳಿ ನಮ್ಮ ಸ್ನೇಹಿತರು ಆ ರೀತಿ ಆಸೆಪಡುವುದಾದರೆ ಅದಕ್ಕೆ ಮೈಸೂರು ಮೈಸೂರಾಗಿಯೇ ಉಳಿಯಲಿ ಎಂದು ವಿರೋಧ ಮಾಡುವುದು ಅಷ್ಟು ಸಮಂಜಸವಾದ ವಾದವಾಗುವುದಿಲ್ಲ. ಏಕೆಂದರೆ ಮೈಸೂರು ಮೈಸೂರಾಗಿಯೇ ಉಳಿಸಿಕೊಳ್ಳುವುದರಿಂದ ಅವರ ಭಯವಾಗಲೀ, ಶಂಕೆಯಾಗಲೀ ನಿವಾರಣೆಯಾಗುವುದಿಲ್ಲ ಎಂದು ಹೇಳಿ ನಾನು ನಮ್ಮ ಸ್ನೇಹಿತರಿಗೆ ಬಹಳ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ಅನೇಕ ಸ್ನೇಹಿತರು ಹಾಗಾಗುತ್ತದೆ, ಹೀಗಾಗುತ್ತದೆ, ಇದರಿಂದ ತೊಂದರೆಯಾಗುತ್ತದೆ ಎಂದು ಹೇಳುತ್ತಾ ಇದ್ದಾರೆ. ಮೈಸೂರು ಎನ್ನುವ ಹೆಸರನ್ನು ಉಳಿಸಿಕೊಳ್ಳುವುದರಿಂದ ನಿಮ್ಮಲ್ಲಿ, ಏನು ಹೇಳಬಹುದು ಎಂದರೆ, ಇದು ಕೂಪ ಮಂಡೂಕ ನ್ಯಾಯವಾಗುತ್ತದೆ ಅಷ್ಟೆ.

ನಾವು ಸ್ವಲ್ಪ ವಿಶಾಲ ದೃಷ್ಟಿಯಿಂದ, ಚಾರಿತ್ರಿಕ ದೃಷ್ಟಿಯಿಂದ ನೋಡಬೇಕು. ಕರ್ನಾಟಕಕ್ಕಾಗಿ ಏನು ಹೋರಾಟ, ಚಳುವಳಿ ಪರಂಪರೆಯಿಂದ ನಡೆಯಿತು ಎಂಬುದನ್ನು ನೋಡಬೇಕು. ಈ ಕಡೆ ನೋಡಿದರೆ, ಪ್ರಜಾ ಸೋಷಿಯಲಿಸ್ಟ್ ಪಕ್ಷದವರು ಕರ್ನಾಟಕ ಪ್ರಜಾ ಸೋಷಿಯಲಿಸ್ಟ್ ಪಕ್ಷವೆಂದೇ ಹೆಸರನ್ನಿಟ್ಟುಕೊಂಡಿದ್ದಾರೆ. ಆದುದರಿಂದ ಅವರೂ ಈ ನಿರ್ಣಯಕ್ಕೆ ಬೆಂಬಲವನ್ನು ಕೊಡುತ್ತಾರೆಂದು ನಂಬಿದ್ದೇನೆ. ಕಮ್ಯುನಿಸ್ಟ್ ಪಕ್ಷದವರಿಗಂತೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಆ ರಾಜ್ಯಕ್ಕೆ ಮಹಾರಾಷ್ಟ್ರ ಎಂತಲೇ ಹೆಸರಿಡಬೇಕೆಂದು ಹೇಳಿದ್ದರಿಂದ, ಅದಕ್ಕೆ ಹೇಗೆ ಬೆಂಬಲ ಕೊಟ್ಟಿದ್ದಾರೋ ಹಾಗೆಯೇ 'ಕರ್ನಾಟಕಕ್ಕೂ' ಬೆಂಬಲಕೊಡುತ್ತಾರೆಂದು ನಂಬಿದ್ದೇನೆ. ಆದರೆ ಶ್ರೀಮಾನ್ ವಿ. ಎಸ್. ಪಾಟೀಲ್ ಅವರು 'ಪ್ಲೆಬಿಸೈಟ್' ಆಗಬೇಕೆಂದು ಹೇಳಿದರು. ಅದು ತಪ್ಪೆಂದು ನಾನು ಹೇಳುವುದಿಲ್ಲ; ಪ್ರಣಾಳಿಕೆಯಲ್ಲಿ ಪ್ರಸ್ತಾಪ ಮಾಡಿದ್ದಾರೆಂದು ಹಾಗೆ ಹೇಳಿದ್ದಾರೆ. ಇನ್ನು ಕೆಲವು ಮಾನ್ಯ ಸದಸ್ಯರಿಗೆ ವಿರೋಧವಿರಬಹುದು. ಈ ವಿಷಯದಲ್ಲಿ ಕಾಂಗ್ರೆಸ್‌ಪಕ್ಷದಲ್ಲಿ ನಾಲ್ಕು ವರ್ಷಗಳ ಹಿಂದೆ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯವರುಕೂಡ ನಿರ್ಣಯಮಾಡಿ ಅದನ್ನು ಹಾಗೆಯೇ ಇಟ್ಟಿದ್ದಾರೆಂದು ಕೇಳಿದ್ದೇನೆ. ಆದುದರಿಂದ ಕರ್ನಾಟಕ ಎನ್ನುವ ಹೆಸರು ಈ ರಾಜ್ಯಕ್ಕೆ ಒಪ್ಪುತ್ತದೆ ಮತ್ತು ಇದಕ್ಕಾಗಿ ಬಹುಜನರ ಬೇಡಿಕೆ ಇದೆ, ಈ ಹೆಸರನ್ನಿಡುವುದರಿಂದ ಯಾರಿಗೂ ಯಾವರೀತಿಯಲ್ಲಿಯೂ ನಷ್ಟವಾಗುವುದಿಲ್ಲ, ಎಲ್ಲರೂ ಈ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

3.30 P.M.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನನುಮೋದಿಸುತ್ತ ಒಂದೆರಡು ಮಾತುಗಳನ್ನಾಡಬೇಕೆಂದು ಬಯಸುತ್ತೇನೆ. 'ಕರ್ನಾಟಕ' ಎನ್ನುವ ಹೆಸರಿಗಾಗಿ ಇಷ್ಟು ವಿವಾದವೇಕೆಂದು ನನಗೆ ಅರ್ಥವಾಗಿಲ್ಲ. ಈ ಹೆಸರಿನ ಬಗ್ಗೆ ಏನು ಚರಿತ್ರೆಯ ಆಧಾರವಿದೆ, ಏನು ಹಿನ್ನೆಲೆಯಿದೆ ಎಂದು ಹೇಳಬೇಕಾಗಿದೆ. ಕೆಲವು ಮಾನ್ಯ ಸದಸ್ಯರು, ಏನೋ ಚರಿತ್ರೆ, ಪದ್ಯ, ಕವಿತೆಗಳನ್ನು ಹೇಳುತ್ತಾರೆಂದು ಹೇಳಬಹುದು. ಆದರೆ ಹಿನ್ನೆಲೆಯೇನಿವೆಯೆಂಬುದನ್ನು ತಿಳಿಯಬೇಕಾದರೆ ಇದನ್ನೆಲ್ಲ ಹೇಳಲೇಬೇಕಾಗುತ್ತದೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಮುಂದೆ ಇದಕ್ಕೆ ಆಧಾರವೇನೆಂದು ಕೇಳದೇಯಿರಲೆಂದು ಮೊದಲೇ ಹೇಳುತ್ತೇನೆ.

ನಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ, ಕರ್ನಾಟಕ ಪ್ರಾಂತ ರಚನೆಗಾಗಿ ಮೈಸೂರಿನ ಸ್ವಾತಂತ್ರ್ಯ ಸಮರ ಯೋಧರು ಅಪಾರ ತ್ಯಾಗ ಮಾಡಿದ್ದಾರೆ. ಅಖಿಲ ಭಾರತ ಕಾಂಗ್ರೆಸ್ ಭಾಷಾವಾರು ಪ್ರಾಂತ ರಚನೆಯ ತತ್ವವನ್ನು ಒಪ್ಪಿಕೊಂಡಲಾಗಾಯಿತು ಕರ್ನಾಟಕ ಪ್ರಾಂತ ರಚನೆಗಾಗಿ ಮೈಸೂರಿನಲ್ಲಿ ಚಳವಳಿ ನಡೆಯುತ್ತ ಬಂದಿದೆ, ದೇಶೀಯ ಸಂಸ್ಥಾನಗಳಲ್ಲಿ ಅಖಿಲ ಭಾರತ ಕಾಂಗ್ರೆಸ್ ಹೆಸರಿನಲ್ಲಿ ರಾಜಕೀಯ ಚಳವಳಿ ನಡೆಸಲಾಗದೆಂದು ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ಮಾಡಲಾದ ನಿರ್ಣಯದ ಪ್ರಕಾರ ಮೈಸೂರಿನಲ್ಲಿ ಮೈಸೂರು ಕಾಂಗ್ರೆಸ್ ಎಂಬ ಸಂಸ್ಥೆಯು ಜನನವಾಯಿತು. ಅದರೊಡನೆ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಕೊಳ್ಳಲು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧೀನ ಸಮಿತಿಯಾಗಿ ಕೆಲಸ ಮಾಡುತ್ತಿತ್ತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನ ಸಂಪರ್ಕವನ್ನು ಮೈಸೂರು ಕಾಂಗ್ರೆಸ್ ಹೊಂದಿತ್ತು. ಮೈಸೂರು ಕಾಂಗ್ರೆಸ್ ಸ್ಥಾಪನೆಯಾದಮೇಲೂ ಬಹಿರಂಗ ಅಧಿವೇಶನಗಳಲ್ಲಿ ಕರ್ನಾಟಕ ಪ್ರಾಂತ ರಚನೆಯ ಗೊತ್ತುವಳಿಗಳು ಸರ್ವಾನುಮತದಿಂದ ಅಂಗೀಕೃತವಾಗಿವೆ. ಕರ್ನಾಟಕ ಪ್ರಾಂತ ರಚನೆಯಾಗಬೇಕು, ಅದಕ್ಕೆ ಮೈಸೂರಿನ ಮಹಾರಾಜರು ಗವರ್ನರ್ ಆಗಬೇಕೆಂಬ ಆಶಯವನ್ನು ಮೈಸೂರು ಕಾಂಗ್ರೆಸ್ಸಿನ ನಾಯಕರು ನೂರಾರು ಬಹಿರಂಗ ಸಭೆಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾಂಗ್ರೆಸ್ ಮಾಡಿರುವ ನಿರ್ಣಯಕ್ಕೆ ಎಲ್ಲರೂ ಹೇಗೆ ಬದ್ಧರು ?

ಶ್ರೀಮತಿ ರತ್ನಮ್ಮ ಮಾಧವರಾವ್.—ಚರಿತ್ರೆ ಹೇಗಿದ್ದರೂ ಕೂಡ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದಮೇಲೆ ಕೆಲವು ಮುಖಂಡರು ತಮ್ಮ ಹಿಂದಿನ ನಿರ್ದಿಷ್ಟ ಅಭಿಪ್ರಾಯವನ್ನೇಕೆ ಬದಲಾಯಿಸಿದರೋ ಅರ್ಥವಾಗುತ್ತಿಲ್ಲ.

States Reorganisation Act ಪ್ರಕಾರ ಈಗಿರುವ ಮೈಸೂರು ಸ್ಟೇಟಿನ ಹೆಸರಿಗೂ, ಮೊದಲಿನ ಹಳೆಯ ಮೈಸೂರು ಸ್ಟೇಟಿಗೂ ಯಾವ ಹೆಸರಿನ ಸಂಬಂಧವೂ ಇಲ್ಲ. ಪ್ರಾಂತ ಪುನರ್ವಿಂಗಡಣೆಯ ಕಾನೂನಿನ ಪ್ರಕಾರ ಹಳೆಯ ಮೈಸೂರಿನ ಪ್ರದೇಶ, ಹೈದರಾಬಾದಿನ ಮೂರು ಡಿಸ್ಟ್ರಿಕ್ಟ್‌ಗಳು, ಬೊಂಬಾಯಿನ ಮೂರು ಡಿಸ್ಟ್ರಿಕ್ಟ್‌ಗಳು, ಕೊಡಗು, ಮದರಾಸಿನಿಂದ ಸ್ವಲ್ಪ ಪ್ರದೇಶ ಈ ಎಲ್ಲವನ್ನೂ ಸೇರಿಸಿ ಒಂದು ಹೊಸ ಸ್ಟೇಟ್ ಆಗಿ ನಿರ್ಮಾಣಮಾಡಿ, ಆ ಸ್ಟೇಟಿಗೆ New State of Mysore ಎನ್ನುವ ನಾಮಕರಣ ಮಾಡಿದ್ದಾರೆ. ಈವರೆಗಿದ್ದ ಹಳೆಯ ಮೈಸೂರು ರಾಜ್ಯಕ್ಕೆ ಬಾಕಿ ಪ್ರಾಂತಗಳ ಕೆಲವು ಭಾಗಗಳನ್ನು ಸೇರಿಸಿಕೊಂಡಿದೆ ಎನ್ನುವ ಅಭಿಪ್ರಾಯ ತಪ್ಪು. Integrated areas ಎಂದು ಹೇಳಿದರೆ, ಅದರಲ್ಲಿ ಹಳೆಯ ಮೈಸೂರೂ ಸೇರಿದೆ, ಹಳೆಯ ಮೈಸೂರನ್ನು ಬಿಟ್ಟು ಬಾಕಿ ಪ್ರದೇಶಗಳಿಗೆ ಆ ಹೆಸರು ಕೊಟ್ಟಿಲ್ಲ. ರಾಮರಾಯರು ಎಂದು ಇಬ್ಬರು ಹೆಸರಿಟ್ಟುಕೊಂಡಿದ್ದರೆ ಇಬ್ಬರೂ ಒಂದೇ ಎಂದು ಹೇಳುವುದಕ್ಕಾಗುತ್ತದೆಯೆ ? ಇಬ್ಬರೂ ಬೇರೆಬೇರೆ

(ಶ್ರೀಮತಿ ರತ್ನಮ್ಮ ಮಾಧವರಾವ್)

ವ್ಯಕ್ತಿಗಳು. ಮೈಸೂರು ಎನ್ನುವ ಹೆಸರೇ ಉಳಿಯಬೇಕೆಂದು ಹೇಳುವವರು ಲಯವಾಗಿ ಹೋಗಿರುವ ಮೈಸೂರಿನಮೇಲಿನ ವ್ಯಾಮೋಹದಿಂದ ಹಳೆಯ ಹೆಸರೇ ಇರಬೇಕೆನ್ನುತ್ತಿದ್ದಾರೆ. ಬೇರೆ ಕಾರಣವಿಲ್ಲ. ಬಹಳ ಹಿಂದಿನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದ ವಿದ್ಯಾರಣ್ಯರನ್ನೂ ಕರ್ಣಾಟಕ ಸಂಸ್ಥಾಪನಾಚಾರ್ಯ ಎಂದು ಕರೆಯುತ್ತಿದ್ದರು. ಆ ರಾಜ್ಯವನ್ನಾಳಿದ ಹಕ್ಕಬುಕ್ಕರನ್ನು ಕರ್ಣಾಟಕ ಸಂಸ್ಥಾನಾಧೀಶ್ವರರೆಂದು ಕರೆಯುತ್ತಿದ್ದರು. ಇಷ್ಟೇ ಏಕೆ, ಶಾಲು ಜೋಡಿ ಕೊಡಲಿ, ಬಿಡಲಿ, ಈಗ ನಮ್ಮ ರಾಜ್ಯಕ್ಕೆ ಗವರ್ನರ್ ಆಗಿರುವವರನ್ನು ದಸರಾ ಮಹೋತ್ಸವದಲ್ಲಿ ಸಿಂಹಾಸನಾರೂಢರಾದಾಗ ಕರ್ಣಾಟಕ ಸಿಂಹಾಸನಾಧೀಶ್ವರ ಎಂದು ಪರಾಕು ಹೇಳುತ್ತಾರೆ. ಏಕೆ ಹೀಗೆ ಹೇಳುತ್ತಿದ್ದಾರೆಂದು ಇದುವರೆಗೆ ಯಾರೂ ಕೇಳಿಲ್ಲ. ನಮ್ಮ ದೇಶಕ್ಕೆ ಇಂಡಿಯಾ ಎಂದು ಹೇಳುತ್ತಾರೆ, ಭಾರತ ಎಂದೂ ಹೇಳುತ್ತಾರೆ ಎಂದು ಇನ್ನೊಬ್ಬ ಮಾನ್ಯ ಸದಸ್ಯರು ಹೇಳಿದರು. ಭರತಖಂಡ, ಭಾರತ ಎಂದು ಹಿಂದಿನಿಂದಲೂ ಹೇಳುತ್ತಿದ್ದಾರೆ. ಭಾರತವೆಲ್ಲ ಒಂದು, ಭಾರತೀಯರೆಲ್ಲ ಒಂದು ಎಂದು ಹೇಳುವ ನಾವು ನಮ್ಮ ರಾಜ್ಯಕ್ಕೆ ಸರಿಯಾದ ಹೆಸರನ್ನಿಡಲು ಮೀನ ಮೇಷ ಎಣಿಸುವುದೇಕೆ ಎನ್ನುವುದನ್ನು ಯೋಚಿಸಬೇಕಾಗಿದೆ. ಬಹಳ ದಿನಗಳಿಂದಲೂ ಸಂಗೀತ ವಿದ್ವಾಂಸರುಗಳು ''ಕರ್ಣಾಟಕಾಂಬೆ ನೀಧನ್ಯೆ'' ಎಂದು ಹಾಡುತ್ತಿದ್ದಾರೆ. ಬಹಳ ಹಿಂದೆಯೇ ಸಾಹಿತಿಗಳು ಬರೆದಿದ್ದಾರೆ. ಕರ್ಣಾಟಕವೆಂಬ ಪದಕ್ಕೆ ಭವ್ಯವಾದ ಹಿನ್ನೆಲೆಯಿದೆ. ಭೌಗೋಳಿಕವಾಗಿ, ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ, ವ್ಯವಹಾರಿಕವಾಗಿ, ರಾಜಕೀಯವಾಗಿ ಯಾವ ದೃಷ್ಟಿಯಿಂದ ನೋಡಿದರೂ ಕರ್ಣಾಟಕ ಎಂಬ ಹೆಸರು ಒಪ್ಪತಕ್ಕ ಹೆಸರು. ಭೂತ ಭವಿಷ್ಯ ವರ್ತಮಾನಕಾಲದ ದೃಷ್ಟಿಯಿಂದ ನೋಡಿದರೂಕೂಡ ಕರ್ಣಾಟಕವೆಂಬುದೇ ಶಾಶ್ವತ. ಮಾನ್ಯ ಸದಸ್ಯರೊಬ್ಬರು ಕರ್ಣಾಟಕ ಎಂದು ಹೇಳಿದರು, ಯಾವ ಭಾವನೆಯಿಂದ ಹೇಳಿದರೋ. 'ಕರ್ಣಾಟಕ' ಶಬ್ದ ಎಷ್ಟು ಮಧುರ, ಕೇಳಲು ಎಷ್ಟು ಇಂಪು, ನೋಡಲು ಎಷ್ಟು ಸೊಂಪು! ಕಣ್ಮನಗಳಿಗೆ ತಂಪನ್ನು ಕೊಡುವ 'ಕರ್ಣಾಟಕ' ಎಂಬ ಹೆಸರಿಗೆ ನಮ್ಮಲ್ಲಿ ಸೋದರಿಯರ ಸಂಪೂರ್ಣ ಬೆಂಬಲವಿದೆ. ಸೋದರ ಸದಸ್ಯರೆಲ್ಲರೂ ಬೆಂಬಲ ಕೊಡುವರೆಂದಾಶಿಸಿ, ಈ ನಿರ್ಣಯವನ್ನು ಹೃತ್ಪೂರ್ವಕವಾಗಿ ಅನುಮೋದಿಸಿ, ಸಭಾಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

†ಶ್ರೀ ಎಸ್. ಭೀಮಣ್ಣ (ಭಲ್ಕಿ).—ಮಾನ್ಯ ಅಧ್ಯಕ್ಷರೆ, ನಾನೆಷ್ಟೋಸಲ ನೋಡಿದ್ದೇನೆ, ಯಾವುದಾದರೂ ವಿಷಯವನ್ನು ಪ್ರಸ್ತಾಪ ಮಾಡುವಾಗ ತಮ್ಮ ವಾದಕ್ಕೆ ಸರಿಯಾದ ಅಂಕಿ ಅಂಶಗಳಿಲ್ಲದೆ, ಸಮರ್ಥನೆ ಮಾಡಲು ಸಾಧ್ಯವಾಗದೇ ಹೋದಾಗ ಸಿಟ್ಟು ಹೆಚ್ಚುತ್ತದೆ. ನೆನ್ನೆ ಮೊನ್ನೆ ಇದನ್ನು ನೋಡಿದ್ದೇನೆ. ಈ ನಿರ್ಣಯವನ್ನು ವಿರೋಧ ಮಾಡುವಾಗ ಇದರಬಗ್ಗೆ ಕೆಲವು ವಿಷಯ ಹೇಳಿದ್ದಾರೆ; ಅದಕ್ಕೆ ಉತ್ತರವನ್ನೂ ಹೇಳಿದ್ದಾರೆ, ನಾನು ಈ ಹೊತ್ತು ಒಂದೆರಡು ವಿಷಯಗಳನ್ನು ಹೇಳುತ್ತೇನೆ. ನಮ್ಮ ಕರ್ಣಾಟಕ ಪ್ರದೇಶ ಹರಿದು ಹಂಚಿಹೋಗಿತ್ತು. ಇವೆಲ್ಲ ಈಗ ಒಟ್ಟುಗೂಡಿ ಒಂದಾದಮೇಲೆ, ಕರ್ಣಾಟಕವಾದಮೇಲೆ ಇದರ ಹೆಸರಿನಬಗ್ಗೆ ಸ್ವಲ್ಪ ವಿಚಾರ ಮಾಡಬೇಕಾಗಿದೆ. ಹೆಸರನ್ನು ಪರಿಶೀಲನೆ ಮಾಡುವಾಗ, ನಾವು ಇಡುವ ಹೆಸರು ಇದರ ಇತಿಹಾಸಕ್ಕೆ, ಘಟನೆಗೆ, ಸರಿಯಾಗಿದೆಯೇ ಇಲ್ಲವೆ ಎಂದು ಯೋಚನೆಮಾಡಿ ಚಾರಿತ್ರಿಕ ಹಾಗೂ ಭೌಗೋಲಿಕವಾಗಿ ಸರಿಯಾಗುವ ಹೆಸರನ್ನೇ ಇಡಬೇಕು. ಈ ರೀತಿ ಯೋಚನೆ ಮಾಡಿದರೆ, ಏನು ಹೆಸರನ್ನಿಡಬೇಕೆಂಬುದು ನಮ್ಮ ಮುಂದೆ ಬರುತ್ತದೆ. ಶ್ರೀಮಾನ್ ಕೃಷ್ಣ ಅವರು ಹೆಸರಿನಲ್ಲೇನಿದೆ ಎಂದು ಕೇಳಿದರು. ಈ ಬಗ್ಗೆ ನನಗೆ ಒಂದು ವಿಚಾರ ಜ್ಞಾಪಕಕ್ಕೆ ಬರುತ್ತದೆ. ನಮ್ಮ ಬೀದರ್‌ನಲ್ಲಿ ಒಬ್ಬರು ಹಿಂದಿನ ಕಾಲದಲ್ಲಿ ಡೆಪ್ಯುಟಿ ಮಿನಿಸ್ಟರ್ ಎನ್ನುವಂತೆ ವಜೀರ್ ಆಗಿದ್ದರು. ಆಮೇಲೆ ಅವರ ಹೆಸರೇ ವಜೀರ್ ಅಲಿಖಾನ್ ಎಂದಾಯಿತು. ಹೀಗೆ ಇತಿಹಾಸಕ್ಕೆ ಸಂಬಂಧಪಟ್ಟಹಾಗೆ ಹೆಸರಿಡಬೇಕಾಗುತ್ತದೆ. ಕನ್ನಡನಾಡಿನಲ್ಲಿ ಸಂಘಟನೆ, ಹಾಗೂ ಏಕತೆಯ ದರ್ಶನವಿದೆ. ಕರ್ಣಾಟಕ ಎಂಬ ಹೆಸರಿಗೆ ಅರ್ಥವಿದೆ. ಮೈಸೂರಿಗೆ ಕರ್ಣಾಟಕ ಸೇರಿತೊ, ಅಥವಾ ಕರ್ಣಾಟಕಕ್ಕೆ ಮೈಸೂರು ಸೇರಿತೊ ಎಂಬುದನ್ನು ಯೋಚನೆಮಾಡಬೇಕು. ಕರ್ಣಾಟಕ ಎನ್ನುವ ಹೆಸರನ್ನು ವಿರೋಧಮಾಡುವಾಗ ಕೆಲವರು ಮೈಸೂರು ಎನ್ನುವ ಹೆಸರಿನಲ್ಲಿ ಏನುತಪ್ಪಿದೆ, ಹೆಸರನ್ನು ಬದಲಾಯಿಸದೆ ಅದು ಹಾಗೆಯೇ ಇದ್ದರೆ ಏನು ತೊಂದರೆಯಾಗುತ್ತದೆ, ಹೆಸರಿನಲ್ಲಿ ಏನು ಮಹತ್ವವಿದೆ ಎಂದು ಮುಂತಾಗಿ ಕೇಳಿದರು. ಮೊದಲು ಹೆಸರಿನಲ್ಲಿ ಏನು ಮಹತ್ವವಿದೆ ಎಂಬುದನ್ನು ಹೇಳಿ, ನಂತರ ಮಿಕ್ಕ ವಿಚಾರ ಹೇಳುತ್ತೇನೆ, ಹೆಸರಿನಲ್ಲಿ ಮಹತ್ವವಿದೆ, ಹೆಸರಿನಲ್ಲಿ ಶಕ್ತಿಯೂ ಇದೆ. ನಾವು ಪ್ರಮಾಣ ವಚನ ಸ್ವೀಕರಿಸುವಾಗ, ಎಂದರೆ ತೆಗೆದುಕೊಳ್ಳುವಾಗ, ದೇವರ-ಭಗವಂತನ ಹೆಸರನ್ನು ಹೇಳುತ್ತೇವೆ. ನಿರಾಕಾರನಾದ ಬ್ರಹ್ಮನಿಂದ ಈ ಜಗತ್ತು ನಡೆಯುತ್ತಿದೆ ಎಂಬ ಒಂದು ಭಾವನೆ ಅದರಲ್ಲಿದೆ. ಇನ್ನೊಂದು ಉದಾಹರಣೆ ಹೇಳುತ್ತೇನೆ. ರಾಮನ ಕಾಲದಲ್ಲಿ, ಲಂಕೆಗೆ ಹೋಗುವಾಗ ಸಮುದ್ರಕ್ಕೆ ಸೇತುವೆ ಕಟ್ಟಬೇಕಾಯಿತು. ವಾನರರು ಸೇತುವೆಗಿಡುತ್ತಿದ್ದ ಕಲ್ಲಿನಮೇಲೆ ರಾಮನ ಹೆಸರನ್ನು ಬರೆದು ಇಡುತ್ತಿದ್ದಾಗ ಸಮುದ್ರದಮೇಲೆ ಕಲ್ಲು ನಿಲ್ಲುತ್ತಿತ್ತು. ರಾಮನಿಗೇ ಆಶ್ಚರ್ಯವಾಗಿ ನಾನೊಂದು ಕಲ್ಲನ್ನಿಡುತ್ತೇನೆಂದು ಹೇಳಿ ಒಂದು ಕಲ್ಲನ್ನಿಟ್ಟಾಗ ಆ ಕಲ್ಲು ಮುಳುಗಿ ಹೋಯಿತಂತೆ! ಹೀಗೆ ಹೆಸರಿನಲ್ಲಿ ಮಹತ್ವವಿದೆ.

ಹೆಸರಿನಲ್ಲೇನಿದೆ ಎಂದು ಹೇಳುವುದು ಸರಿಯಲ್ಲ. ಒಂದೊಂದು ಸಾರಿ ಹೆಸರಿಗೂ ಪ್ರಾಮುಖ್ಯತೆ ಬರುತ್ತದೆ. ಅದನ್ನು ಗಮನಿಸಬೇಕು. ಆದುದರಿಂದ ಇತಿಹಾಸ, ತ್ಯಾಗ, ಸಂಘಟನೆ ಇವೆಲ್ಲಾ ಇರುವುದನ್ನು ಲಕ್ಷ್ಯದಲ್ಲಿಡಬೇಕು. ಒಂದು ಸ್ಫೂರ್ತಿ ಬರಬೇಕಾದರೆ ಇತಿಹಾಸಬೇಕು, ಪ್ರೇರಣೆಯಾಗಬೇಕು, ಐಕ್ಯತಾ ಭಾವನೆ ಬರಬೇಕು.

ಮಾನ್ಯ ಭಗಿನಿಯರು ಮಾತನಾಡುತ್ತಿದ್ದಾಗ ಸರ್ಕಾರ ನಿರ್ಣಯ ಮಾಡಿಲ್ಲ, ಕಾಂಗ್ರೆಸ್ ನಿರ್ಣಯ ಮಾಡಿದೆ ಎಂದು ಶ್ರೀಮಾನ್ ಮುಕ್ಕಣಪ್ಪನವರು ಹೇಳಿದರು. ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಏನು ಹೇಳಿದರು, ಎಂಬುದನ್ನು ಗಮನಿಸಬೇಕು. ಈಗ ಅವರು ಮುಖ್ಯಮಂತ್ರಿಗಳಾಗಿದ್ದಾರೆ. ಈಗೇನು ಹೇಳುತ್ತಿದ್ದಾರೆಂಬುದನ್ನು ನೋಡಬೇಕು. 1949ನೆಯ ಇಸವಿ ನವೆಂಬರ್ 11ನೆಯ ತಾರೀಖಿನಲ್ಲಿ ಕರ್ಣಾಟಕ ಆಗಲೇಬೇಕೆಂದು ಕ್ಯಾಬಿನೆಟ್ ಡಿಸಿಷನ್ ಆಯಿತು. ಇವತ್ತು ನಮ್ಮ ದೇಶಕ್ಕೆ ಏನು ಹೆಸರಿಡಬೇಕೆಂಬುದನ್ನು ಇತಿಹಾಸ ದೃಷ್ಟಿಯಿಂದ ನೋಡಬೇಕು. ಇದಕ್ಕೆ ಒಂದು ಉದಾಹರಣೆ ಹೇಳಬಹುದು. ಬಂಡಿ ಎಂಬುದಕ್ಕೆ

†Indicates that the speech or remarks have not been revised the concerned member.

ಆ ಹೆಸರೇಕೆ ಬಂತು ಎಂಬುದನ್ನು ನೋಡಬಹುದು. 1950ರಲ್ಲಿ ಬೊಂಬಾಯಿ, ಮದ್ರಾಸು, ಕೊಡಗು ಮುಂತಾದ ಪ್ರಾಂತಗಳ ಕನ್ನಡಭಾಗಗಳನ್ನು ಒಟ್ಟಿಗೆ ಸೇರಿಸಲು ಪ್ರಯತ್ನ ನಡೆಯಿತು. ಆಮೇಲೆ S.R.C. ವರದಿ ಬಂತು. ಅದರಮೇಲೆ ಚರ್ಚೆ ಮಾಡಿ ನಂತರ ಕರ್ಣಾಟಕದ ರಚನೆ ಮಾಡಿದರು. ಹೀಗಿರುವಾಗ ನಮ್ಮ ಇತಿಹಾಸ ನೋಡಿದರೆ ನೈಜವಾಗಿ ಕರ್ಣಾಟಕ ಎಂದು ಹೆಸರಿಡುವುದೇ ಯೋಗ್ಯವೆನಿಸುತ್ತದೆ. S.R.C. ವರದಿಯಲ್ಲಿ ಕರ್ಣಾಟಕವೆಂಬ ಹೆಸರಿಂದ ಕನ್ನಡ ನಾಡನ್ನು ಕರೆದಿದ್ದಾರೆ, ಕೆಲವರು ಹೆಸರನ್ನು ಬದಲಾಯಿಸಲು ಒಪ್ಪುವುದಿಲ್ಲ. ಇವತ್ತು ಅನೇಕ ಭಾಗಗಳು ಸೇರಿ ಒಂದು ಬಂಡಿಯಾಗಿದೆ. ಆ ಭಾಗಗಳನ್ನು ಕಳೆದ ನಂತರ ಬಂಡಿ ಎಂಬ ಹೆಸರಿರುವುದಿಲ್ಲ. ಇವತ್ತು ಹೊರಗಿನವರು ಬಂದಮೇಲೆ ಘೀಜನ್ನು ಹೆಚ್ಚಿಸಿದರು, ಗಡಿಬಿಡಿ ಆಗುತ್ತಿದೆ ಎಂದು ಮೈಸೂರು ಎಂಬ ಹೆಸರೇ ಇರಬೇಕೆಂಬ ಅಭಿಲಾಷೆಯುಳ್ಳವರು ಹೇಳಿದರು. ಚಕ್ರದಮೇಲೆ ಬಂಡಿಯನ್ನು ಕೂಡಿಸಿರುತ್ತಾರೆ, ನೊಗ, ಗಾಡಿಪಟ್ಟೆ, ಚಕ್ರ ಇವೆಲ್ಲಾ ಸೇರಿ ಬಂಡಿಯಾಗಿರುತ್ತದೆ. ಇವೆಲ್ಲಾ ಇದ್ದರೆ ಬಂಡಿ ಅನ್ನುತ್ತಾರೆ, ಇಲ್ಲದಿದ್ದರೆ ಇಲ್ಲ. ಆದರೆ ಚಕ್ರ ಎನ್ನುವುದಿಲ್ಲ. ಇದು ಸ್ವಭಾವ ಸಿದ್ಧವಾದುದು, ಬಂಡಿ ಎಂದು ಸಹಜವಾಗಿ ಹೇಳಲೇ ಬೇಕು. ಅದೇ ಪ್ರಕಾರ ಮೈಸೂರು ಎಂಬ ಹೆಸರಿನಲ್ಲಿ ತಪ್ಪೇನಿದೆ, ಅದನ್ನೇಕೆ ಬದಲಾಯಿಸಬೇಕು ಎಂದು ಹೇಳುತ್ತಿದ್ದಾರೆ. ಗಂಗಾ ನದಿ ಬಹಳ ಪವಿತ್ರವಾದುದು ಎಂದು ಹೇಳುತ್ತಾರೆ. ಕಾರಣ ಅದು ಶಂಕರನ ಜಟೆಯಲ್ಲಿ ಹುಟ್ಟಿದೆ. ಅದು ಪಾಪ ಪರಿಹಾರಮಾಡುವುದೆಂದು ಹೇಳುತ್ತಾರೆ. ಆದರೆ ಅದು ಸಮುದ್ರಕ್ಕೆ ಹೋಗಿ ಸೇರಿದಮೇಲೆ ಸಮುದ್ರಕ್ಕೆ ಸೇರಿದ್ದನ್ನು ಗಂಗಾನದಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹಾಗೆ ಹೆಸರಿಗೆ ಒಂದು ಪವಿತ್ರತೆ ಇದೆ.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಅಧ್ಯಕ್ಷರೆ, ಈ ಸಭೆಯ ಮುಂದೆ ಮೈಸೂರು ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರಿಡಬೇಕೆಂಬ ನಿರ್ಣಯ ಮಂಡಿಸಲ್ಪಟ್ಟು ಅನೇಕ ವಿಷಯಗಳನ್ನು ಚರ್ಚೆ ಮಾಡುತ್ತಿದ್ದೇವೆ. ಕೆಲವರು ಕರ್ಣಾಟಕ ಎಂಬ ಹೆಸರನ್ನಿಡಬೇಕೆಂದೂ ಮತ್ತೆ ಕೆಲವು ಮಂದಿ ಮೈಸೂರೆಂದೇ ಇರುವುದು ಒಳ್ಳೆಯದೆಂದೂ ಅಭಿಪ್ರಾಯ ವ್ಯಕ್ತಪಡಿಸಿದರು. ಇನ್ನು ಕೆಲವರು ಬಹಳ ಉದ್ವೇಗದಿಂದ ಕೂಡ ಮಾತನಾಡಿದರು. ನನಗೆ ಇಷ್ಟು ತೋರುತ್ತದೆ. ಒಂದು ವಿಷಯವನ್ನು ನಾವು ಚರ್ಚೆ ಮಾಡುವಾಗ ಬಹುಶಃ ಉದ್ವೇಗಕ್ಕೆ ಅವಕಾಶವಿಲ್ಲದಂತೆ ಯಾವರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಅರಿತು ವಿಚಾರಮಾಡುವುದಾದರೆ, ಒಂದು ತೀರ್ಮಾನಕ್ಕೆ ಬರುವುದಕ್ಕೆ ಬಹಳ ಸಹಾಯವಾಗುತ್ತದೆ ಎಂದು ನಂಬಿಕೊಂಡಿದ್ದೇನೆ. ಈ ದಿನ ಈ ಸಭೆಯಮುಂದಿರುವ ಒಂದು ಸಮಸ್ಯೆಯಾದರೂ ಕೂಡ ಈ ಸಂಸ್ಥಾನಕ್ಕೆ ಕರ್ಣಾಟಕ ಎಂಬ ಹೆಸರನ್ನಿಡಬೇಕೆಂಬುದು. ಇದರ ಒಂದು ಹಿನ್ನೆಲೆಯನ್ನು ನೋಡುವುದಾದರೆ ಸುಮಾರು 1920ರಲ್ಲಿ ಅಥವಾ ಅದಕ್ಕಿಂತ ಹಿಂದೆ ಇಂಡಿಯಾದೇಶದಲ್ಲಿರುವ ಪ್ರಾಂತಗಳನ್ನು ಭಾಷೆಯ ಆಧಾರದಮೇಲೆ ವಿಂಗಡಣೆ ಮಾಡಬೇಕೆಂದು ನಾನಾ ಪ್ರಯತ್ನಗಳು ನಡೆದುವು. ಅಲ್ಲದೆ ರಾಜಕೀಯ ಪಕ್ಷಗಳುಕೂಡ ತಮ್ಮ ಆಡಳಿತವ್ಯಾಪ್ತಿಗೆ ಕೆಲವನ್ನು ಒಳಪಡಿಸಿಕೊಂಡುವು. ಈ ಒಂದು ಭಾಷಾವಾರು ಪ್ರಾಂತ ರಚನೆಯಾಗುವ ಒಂದು ಸನ್ನಿವೇಶದಲ್ಲಿ ಮೈಸೂರು ಎಂಬ ಹೆಸರೇ ಉಳಿಯಬೇಕು ಎಂದು ನಿರ್ಣಯವಾಯಿತು. 1956ರ ಹಿಂದೆ ವಿಶಾಲ ಮೈಸೂರಾಗಬೇಕೆಂಬ ಅಭಿಪ್ರಾಯ ಬಹುಜನರಲ್ಲಿ ಮೂಡಿದಾಗ ಅದಕ್ಕೇನು ಪ್ರಯತ್ನ ನಡೆಯಿತೆಂದು ಯೋಚನೆ ಮಾಡಬೇಕಾಗಿದೆ. ಮೈಸೂರು ಎಂದು ಇದುವರೆಗೆ ಕರೆದಿದ್ದೇವೆ, ಏಕೆ ಬದಲಾಯಿಸಬೇಕು ಎಂದು ಕೇಳಬಹುದು. By accident we are now having India. ಪರಕೀಯರ ಆಡಳಿತ ಹೋದಾಗ by accident ಆಗಿರುವುದನ್ನು ಜೀವನಪರ್ಯಂತ ನಡೆಸಿಕೊಂಡು ಹೋಗಬೇಕೇ ಅಥವಾ ಸನ್ನಿವೇಶಕ್ಕೆ ತಕ್ಕಂತೆ ಬದಲಾಯಿಸಬೇಕೇ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಇದನ್ನು ಪರಿಶೀಲಿಸುವಾಗ ಅಭಿಪ್ರಾಯಗಳನ್ನು ತಿಳಿಯುವುದು ಅವಶ್ಯಕ. ಅನೇಕರು ಭಾಷಣ ಮಾಡುತ್ತಾ ಇತಿಹಾಸ, ಚರಿತ್ರೆ ನೋಡಬೇಕೆಂದು ಹೇಳಿದರು. ಮೈಸೂರಿಗೆ ಎಷ್ಟು ಇತಿಹಾಸವಿದೆ, ಮೈಸೂರನ್ನು ಉಳಿಸಬೇಕೆಂದು ಎಷ್ಟು ಸಾಹಸ ನಡೆದಿದೆ ಅದಕ್ಕಿಂತಲೂ ಹೆಚ್ಚಿನ ಇತಿಹಾಸ ಕರ್ಣಾಟಕಕ್ಕೆ ಇದೆ. ಕರ್ಣಾಟಕ ಮೈಸೂರಿಗಿಂತ ಹಳೆಯದು, ಸ್ವಲ್ಪಕಾಲ ಇರಲಿಲ್ಲ. ಅದು ಮೈಸೂರಿಗಿಂತ ಹೊಸದಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೆಲವರು S.R.C. ವರದಿಯ ಅಭಿಪ್ರಾಯ ಹೀಗಿದೆ ಎಂದು ಹೇಳಿದರು. ಸ್ಟೇಟ್ ರೀಆರ್ಗನೈಜೇಷನ್ ಆಕ್ಟ್‌ನ ಏಳನೆಯ ಸೆಕ್ಷನ್‌ನಲ್ಲಿ Mysore is formed into a new State ಎಂದಿಲ್ಲ, due to re-organisation a new State is formed ಎಂದಿದೆ; ಒಂದು ಹೊಸ ಸಂಸ್ಥಾನ ಮಾಡಿದ್ದೇವೆಂದು ಹೇಳಿದೆಯೇ ಹೊರತು, ಇದ್ದ ಮೈಸೂರನ್ನು ವಿಶಾಲ ಮಾಡಿದ್ದೇವೆಂದು ಸೂಚಿಸಿದೆಯೇ ಹೊರತು ಇರುವ ಮೈಸೂರನ್ನು ಉಳಿಸಿಕೊಂಡಿದ್ದೇವೆಂದು ಹೇಳಿಲ್ಲ. ಏಳನೆಯ ಸೆಕ್ಷನ್ ವಿಶದವಾಗಿದೆ. S.R.C. ವರದಿಯಲ್ಲೂಕೂಡ ಇದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಅವರೂ ಕೂಡ ವಿಶಾಲ ಮೈಸೂರಾಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಲಿಲ್ಲ. ಅಂದರೆ, ಮೈಸೂರು ಅಥವಾ ವಿಶಾಲ ಮೈಸೂರು ಎಂದು ಹೆಸರು ಉಳಿಸಿಕೊಳ್ಳಬೇಕೆಂಬ ಅಭಿಪ್ರಾಯ ಬಹುಶಃ ಕರ್ಣಾಟಕ ಪ್ರಾಂತ್ಯ ರಚನೆಯಾಗುವ ಸಂದರ್ಭದಲ್ಲಿ, ಅದು ಅಸ್ತಿತ್ವಕ್ಕೆ ಬರುವ ಸಂದರ್ಭದಲ್ಲಿ ಇದ್ದು ಏನಾದರೂ ಮಾಡಿ ಆ ಹೆಸರು ಉಳಿಸಿಕೊಳ್ಳಬೇಕೆಂಬ ಪ್ರಯತ್ನ ಮಾಡಿದಂತೆ ಕಾಣುತ್ತೆ. ಆದ್ದರಿಂದ ಈಗ ಹೆಸರಿಡುವ ಸಂದರ್ಭದಲ್ಲಿ ಏನಾದರೂ ಒಂದು ಯೋಜನೆ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಜನಗಳ ಅಭಿಪ್ರಾಯಕ್ಕೆ ಮನ್ನಣೆ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ಈ ಹೊತ್ತು ಮೈಸೂರು ಸಂಸ್ಥಾನದಲ್ಲಿ ಅನೇಕ ರಾಜಕೀಯ ಪಕ್ಷಗಳು ಕಾಂಗ್ರೆಸ್, ಕಮ್ಯೂನಿಸ್ಟ್, PSP ಮುಂತಾದ ಎಲ್ಲಾ ಪಕ್ಷಗಳೂ ಕೆಲಸ ಮಾಡುತ್ತಿವೆ. ಎಲ್ಲ ಪಕ್ಷಗಳ ಧೋರಣೆಯನ್ನೂ ನೋಡುವುದಾದರೆ, ಯಾವ ಪಕ್ಷವೂಕೂಡ ಮೈಸೂರೇ ಇರಬೇಕು ಎಂದು ಹೇಳಿಲ್ಲ. ಆಡಳಿತ ಪಕ್ಷವೂ ಕರ್ನಾಟಕವೆಂದು ಕರೆದಿದ್ದರೆ ಅದನ್ನೇ ಇಟ್ಟುಕೊಂಡು ಕೆಲಸ ಮಾಡಿಕೊಂಡು ಬರುತ್ತೇವೆ. ಆದ್ದರಿಂದ ಮೈಸೂರೆಂಬ ಹೆಸರೇ ಉಳಿದುಕೊಂಡು ಹೋಗಬೇಕೆಂಬ ವಾದದಲ್ಲಿ ಅರ್ಥವಿಲ್ಲ. ಇದು ಒಂದು Sentimental feeling ನ್ನು ತೃಪ್ತಿಗೊಳಿಸುತ್ತದೆಂದ ಹೇಳಬಹುದು ನಿಜ. Sentiment ಎಂಬುದಿರುತ್ತದೆ. ಆದರೆ ಇದೇ ವಾದ ಎಷ್ಟರ ಮಟ್ಟಿಗೆ ಒಪ್ಪುತ್ತದೆ ನೀವೇ ನೋಡಿ. ನಾವು Sentiment ಗೆ ಪ್ರಾಮುಖ್ಯತೆ ಕೊಡುವುದಾದರೆ

(ಶ್ರೀ ಎಂ. ಸಿ. ಬಸಪ್ಪ)

ನಮ್ಮಲ್ಲಿ Progress ಕಡಿಮೆಯಾಗುತ್ತದೆ. ಆದ್ದರಿಂದ ದೇಶದ ಮುನ್ನಡೆಯೇ ನಮ್ಮ ಗುರಿಯಾದಮೇಲೆ ಜಿಜ್ಞಾಸೆಯೇಕೋ ನನಗೆ ಅರ್ಥವಾಗುತ್ತಿಲ್ಲ. ಬಹಳ ಕಾಲದಿಂದ ಕರ್ನಾಟಕ ಪ್ರಾಂತ್ಯವಾಗಬೇಕು ಕನ್ನಡ ಜನ ಅಭಿವೃದ್ಧಿಯಾಗಬೇಕು ಎಂದು ಅನೇಕ ಜನ ಶ್ರಮಿಸಿದುದರ ಫಲವಾಗಿ ಈ ಪ್ರಾಂತ್ಯವಾಗಿರುವಾಗ ಇದಕ್ಕೆ ಹೆಸರಿಡುವುದು ಬೇಡ, ಒಂದು ವೇಳೆ ಹಾಗೆ ಮಾಡಬೇಕೆಂದು ಇಷ್ಟಪಟ್ಟರೆ ಎರಡು ಕರ್ನಾಟಕವನ್ನುಮಾಡಿ ಎನ್ನುವುದು ಸರಿಯಲ್ಲ. ಎಲ್ಲರೂ ದೊಡ್ಡಮನಸ್ಸು ಮಾಡಿ ಒಂದು ಕರ್ನಾಟಕ ಮಾಡಬೇಕೆಂದು ಪ್ರಯತ್ನ ಪಟ್ಟಿರುವಾಗ ಎರಡು ಕರ್ನಾಟಕ ಮಾಡಿ ಎಂದು ಹೇಳುವುದು ಸರಿಯಲ್ಲ. ನೀವೇನಾದರೂ ಕರ್ನಾಟಕವೆಂದುಕೊಟ್ಟರೆ, ನಮ್ಮಲ್ಲಿ ರಕ್ತಕಣವಿರುವವರೆಗೂ ಹೊಡೆದಾಡುತ್ತೇವೆಂದು ಹೇಳಿದರು. ಅವರಿಗೆ ಬಹುಶಃ ಹೆಚ್ಚು ರಕ್ತಕಣಗಳಿದ್ದರೆ ಅದನ್ನು ಸುಮ್ಮಸುಮ್ಮನೆ ಇಲ್ಲಿ ಹರಿಸುವುದು ಬೇಡ, ನಮ್ಮಲ್ಲಿ ಉತ್ತರಗಡಿಯ ಸಮಸ್ಯೆಯಿದೆ. ನಾವೂ ನೀವೂ ಅದಕ್ಕಾಗಿ ಹೋರಾಡಬೇಕಾಗುತ್ತದೆ. ಅಂಥಾದ್ದರಲ್ಲಿ ಇದಕ್ಕಾಗಿ ಏಕೆ ರಕ್ತ ಕೊಡೋಣ? ಒಂದು ಒಳ್ಳೆಯ ಉದ್ದೇಶದಿಂದ ಒಳ್ಳೆಯ ಹೆಸರನ್ನಿಡಬೇಕೆಂದು ಪ್ರಯತ್ನ ಮಾಡುತ್ತಿದ್ದರೆ, ಇದಕ್ಕೇಕೆ ರಕ್ತ ಕೊಡಬೇಕು? ಬೇಕಾದರೆ ಗಡಿ ಸಮಸ್ಯೆ ಇದೆ ಅಲ್ಲಿಗೆ ಹೋಗೋಣ: ಚೈನಾ ಸಮಸ್ಯೆಯನ್ನು ಇತ್ಯರ್ಥ ಮಾಡುವುದಕ್ಕೆ ನಿಮ್ಮ ಬೆಂಬಲಕೊಡಿ. ಅದಕ್ಕಾಗಿ ನಿಮ್ಮ ನೆರವು ನೀಡುವುದು ಸಾಧುವಾದ್ದು ಮತ್ತು ಸೂಕ್ತವಾದ್ದು. ಅದು ಬಿಟ್ಟು ಈಗ ನಮ್ಮ ಮುಂದಿರುವ ಪ್ರಶ್ನೆಯನ್ನು ಇತ್ಯರ್ಥ ಮಾಡಬೇಕಾದರೆ ಇಂಥ ನಿಮ್ಮ ಭಾಷಣಗಳನ್ನು ಮರೆಯಬೇಕು. ಇಂಥ ಹೆದರಿಕೆ ಬೆದರಿಕೆಗಳನ್ನು ಬಿಟ್ಟು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ ಕರ್ನಾಟಕವೆಂದು ಏಕೆ ಕರೆಯಬೇಕು, ಅದರ ಹಿನ್ನೆಲೆಯೇನು, ಮೈಸೂರೆಂದೇಕೆ ಕರೆಯ ಕೂಡದು ಅದರ ಹಿನ್ನೆಲೆಯೇನು ಎಂಬುದನ್ನು ನಾವು ಸ್ವಲ್ಪ ನೋಡುವುದಾದರೆ ಎಲ್ಲರೂಕೂಡ ಬಹುಶಃ ಕರ್ನಾಟಕವೆಂದು ಕರೆಯುವುದೇ ಸೂಕ್ತವೆಂದು ಒಪ್ಪುತ್ತಾರೆಂದು ನಾನು ಹೇಳಬಲ್ಲೆ.

ನಾನು ಇದುವರೆಗೂ ಅರ್ಥಮಾಡಿಕೊಂಡಿರುವಂತೆ, ಇಲ್ಲಿ ನಾವು ಪ್ರಜಾಪ್ರಭುತ್ವ ತತ್ವದಲ್ಲಿ ನಂಬಿಕೆಯಿಟ್ಟುಕೊಂಡು ರಾಜ್ಯವನ್ನು ಆಳುತ್ತಿದ್ದೇವೆಂದರೆ, ಬಹುಮತಕ್ಕೆ ಬೆಂಬಲ ಕೊಡುವುದು ಮುಖ್ಯ. ಇಂದು ಕರ್ನಾಟಕಕ್ಕೆ ಶ್ರಮಿಸಿದ ಅನೇಕರ ಶ್ರಮದ ಫಲವಾಗಿ ಇಂದು ಈ ನಾಡನ್ನುಕಟ್ಟಿದ್ದೇವೆ, ಇದರ ಪ್ರಗತಿಯನ್ನು ಸಾಧಿಸುವ ಕೆಲಸ ಇನ್ನೂ ಉಳಿದಿದೆ. ಆದ್ದರಿಂದ ಇಂದು ನಾವು ಆ ಜನತೆಯ ಅಭಿಪ್ರಾಯವನ್ನು ಸೂಕ್ಷ್ಮವಾಗಿ ನೋಡಬೇಕು. ರಾಜಕೀಯ ಪಕ್ಷಗಳು ಜನಗಳ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತವೆ; ಈಡೇರಿಸುತ್ತವೆ. ಹೀಗಿರುವಲ್ಲಿ ಇಂದು ರಾಜಕೀಯ ಪಕ್ಷಗಳ ಧೋರಣೆಯನ್ನು ನೋಡಿದರೆ, ಈ ಹೊಸ ಸಂಸ್ಥಾನಕ್ಕೆ ಕರ್ನಾಟಕವೆಂದೇ ಹೆಸರಿಡಬೇಕಾಗುತ್ತದೆ; ಹೊಸ ಮೈಸೂರು, ಹಳೆಯ ಮೈಸೂರು, ವಿಶಾಲ ಮೈಸೂರು ಎಂದಲ್ಲ. ಆದ್ದರಿಂದ ಪ್ರಜಾಪ್ರಭುತ್ವ ತತ್ವದಲ್ಲಿ ನಂಬಿಕೆಯಿರುವ ನಾವೆಲ್ಲರೂ ಈ ನಿರ್ಣಯಕ್ಕೆ ಬಹುಮತದ ಬೆಂಬಲ ಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಅಧ್ಯಕ್ಷರೇ, ಮೈಸೂರಿನವರು ಈ ಹೊತ್ತು ಹೂಡಿರುವ ವಾದ ನನ್ನ ಅಭಿಪ್ರಾಯದಲ್ಲಿ ಸ್ವಲ್ಪಮಟ್ಟಿಗೆ ತಪ್ಪೆಂದೆನಿಸುತ್ತದೆ. ಅವರ ವಾದದಂತೆ ಹಿಂದೆ ನಡೆದಿದ್ದರೆ ಮೈಸೂರು ಪ್ರಾಂತ್ಯವೂ ಇರುತ್ತಿರಲಿಲ್ಲ, ಬಹುಶಃ ಕನ್ನಡ ಭಾಷೆ ಉಳಿಯುತ್ತಿತ್ತೊ ಇಲ್ಲವೋ ಎಂಬುದೇ ಸಂಶಯದ ವಿಷಯವಾಗುತ್ತಿತ್ತು. ಹಿಂದೆ ಮೈಸೂರಿನಿಂದ ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ಹೋಗಿ ಮಾನ್ಯ ಶ್ರೀ ಬಿ. ಎಂ. ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮುಂತಾದವರು ಮಾಡಿದ ಪ್ರಚಾರದಿಂದಾಗಿ, ಕನ್ನಡ ದೇಶ ಬೆಳೆಯಬೇಕು, ಕನ್ನಡ ಮಾತೃಭಾಷೆ ಅಭಿವೃದ್ಧಿಯಾಗಬೇಕು ಎಂದು ಸಾರಿದ್ದರಿಂದಲೇ ಅತ್ತ ಅನೇಕ ಸ್ಕೂಲು ಕಾಲೇಜುಗಳು ಆದುದು. ಮಾತೃಭಾಷೆ ಕನ್ನಡವಾದರೂ ನಾನು ಅರಿವಿಲ್ಲದೆ ಮರಾಠಿಯಲ್ಲೇ ಶಾಲೆಯಲ್ಲಿ ಓದಿದೆ. ಕನ್ನಡ ಸಂಘ ಅತ್ತ ಸ್ಥಾಪನೆಯಾದನಂತರ ಅಲ್ಲಿ ಕನ್ನಡದ ಸ್ಕೂಲು ಕಾಲೇಜುಗಳು ಬಂದದ್ದು; ಕನ್ನಡ ಭಾಷೆ ಬೆಳೆದದ್ದು. ಇಂಥದೆಲ್ಲಾ ಮೈಸೂರು ಸಂಸ್ಥಾನದ ಹೊರಗೆ ಇರದೆ ಇದ್ದರೆ ಕನ್ನಡ ಏನಾಗುತ್ತಿತ್ತು ಎಂಬುದನ್ನು ನೀವೇ ಯೋಚಿಸಬಹುದು. ಹೀಗಿರುವಲ್ಲಿ ಮೈಸೂರು—ಮೈಸೂರು ಎಂಬ ಹೆಸರೇ ಇರಬೇಕೆಂದು ಹೇಳುವುದು ಸಮಂಜಸವಲ್ಲ. ಯಾವ ಆಧಾರದಮೇಲೆ ಮಾಡುವ ವಾದ ಇದು ಎಂಬುದೇ ನನಗೆ ಗೊತ್ತಾಗುವುದಿಲ್ಲ. ಹೀಗಿರುವಲ್ಲಿ ಕಾಂಗ್ರೆಸ್ಸಿನವರು ತಮ್ಮ ಪಾರ್ಟಿಯ ಜನರಿಗೆ ಸ್ವತಂತ್ರವಾಗಿ ಓಟು ಮಾಡಲು ಅಧಿಕಾರ ಕೊಟ್ಟದ್ದೇ ತಪ್ಪು. ಕಾಂಗ್ರೆಸ್ಸಿನವರ ಪ್ರಕಾರ ಪ್ರತಿಯೊಂದು ಪ್ರಾಂತ್ಯವೂ ಭಾಷಾವಾರು ತಳಹದಿಯ ಮೇಲೆಯೇ ಇತ್ತೇ ಹೊರತು ಇದೇ ಬೇರೆ ಕರ್ನಾಟಕ, ಅದೇ ಬೇರೆ ಎಂದು ಮಾಡಿಲ್ಲ. ಮದ್ರಾಸಿನಲ್ಲಿದ್ದ ಭಾಗ, ಬೊಂಬಾಯಿನಲ್ಲಿದ್ದ ಭಾಗ ಎಲ್ಲಾ ಸೇರಿ ಒಂದೇ ಪ್ರಾಂತ್ಯವಾಗಬೇಕೆಂದು ಹೇಳಿದ್ದರ ಮೇಲೆ ನೈಜಾಮರು ಕಾಂಗ್ರೆಸ್ಸಿನ ಮೇಲೆ Ban ಹಾಕಿದರು. ಆಗ್ಗೆ ಕರ್ನಾಟಕ ಪರಿಷತ್ತು, ಮಹರಾಷ್ಟ್ರ ಪರಿಷತ್ತು, ತೆಲಂಗಣ ಪರಿಷತು ಎಂದು ಬೇರೆ ಬೇರೆ ಇದ್ದು ಕಾಂಗ್ರೆಸ್ ಮುಖಾಂತರ ನಡೆಯಿತು. ಏನೊಂದೂ ಆಗ್ಗೆ ಭಾಷಾವಾರು ತಳಹದಿಯ ಮೇಲೆಯೇ ನಡೆಯುತ್ತಿತ್ತು ಇಷ್ಟೇ ಅಲ್ಲ, ಕರ್ನಾಟಕವೆಂದೇಕೆ ಇರಬೇಕೆಂದು ಒಂದು ವಾದವಿರದೆ ಇದ್ದರೆ, ಮೈಸೂರು ಬೆಂಗಳೂರು ಕಾರ್ಪೊರೇಷನ್ನಿನವರು ತಮ್ಮ ನಡೆವಳಿಕೆಗಳೆಲ್ಲಾ ಕನ್ನಡದಲ್ಲೇ ಇರಬೇಕೆಂದೇಕೆ ಮಾಡಿದರು? ಹೀಗೆ ಕನ್ನಡವಿರಬೇಕೆಂದು ಮಾಡಿದಮೇಲೆ ಕನ್ನಡ ಭಾಷೆ ಮಾತನಾಡುವವರೆಂಬ ಹೆಸರು ಈ ರಾಜ್ಯಕ್ಕಿರಬೇಕು. ಈಗ ನೀವು ಕರ್ನಾಟಕವೆನ್ನಿ ಅಥವಾ ಬೇರೆ ಎನ್ನಿ, ಪರಂಪರೆಯಿಂದ ಇದಕ್ಕೆ ಕರ್ನಾಟಕವೆಂದು ಹೆಸರಿದೆಯೆಂದು ಬುದ್ಧಿವಂತರು ಹೇಳುವ ಮಾತು. ತಾವು Hindustan year Book 1962 ಪುಸ್ತಕವನ್ನು ನೋಡಿದರೆ ಅದರಲ್ಲಿ ಮೈಸೂರಿನ ಸಲುವಾಗಿ ಸರ್ಕಾರ್‌ರವರು ಬರೆದಿದ್ದಾರೆ. The present Mysore State which came into being on 1st November 1956 consist of Districts roughly covering an area known in our ancient classics as Karnataka, ಎಂದು ಇದನ್ನು ನೋಡಿದಮೇಲೆ ಮೈಸೂರಿನವರ ಸಲುವಾಗಿ ಈಗ ಏನು ವಾದ ಮಾಡಿದ್ದಾರೆ ಅದೊಂದೂ ಸಾಧುವಲ್ಲವೆಂದು ನನಗನ್ನಿಸುತ್ತದೆ.

ಕೆಲವು ಮಾನ್ಯ ಸದಸ್ಯರು ವಾದ ಮಾಡುತ್ತಿರುವ ರೀತಿಯನ್ನು ನೋಡಿ ನನಗೆ ಬಹಳ ದುಃಖವಾಯಿತು.

'' ಇವರು ಹೊರಗಿನಿಂದ ಬಂದವರು ; ಏನೂ ಇರಲಿಲ್ಲ ಜಾಗ ಕೊಡುತ್ತೀರಾ ಎಂದು ಕೇಳಿ ಬಂದರು. ಈಗ ಬಂದಮೇಲೆ ತಲೆಯಮೇಲೆ ಕಾಲಿಡುತ್ತಿದ್ದಾರೆ'' ಎಂದೆಲ್ಲಾ ಹೇಳಿದರು. ಅವರು ಹೇಳಿದ 'ಬೇರೆಯವರಿಗೂ' ಎಲ್ಲಾ ಇತ್ತು. ಸಾಧನ ಸಂಪತ್ತುಗಳನ್ನು ತೆಗೆದುಕೊಂಡೇ ಅವರೂ ಬಂದಿದ್ದಾರೆ. ಆದ್ದರಿಂದ ಏನೋ ಬಂದಿದ್ದಾರೆನ್ನಬಾರದಾಗಿತ್ತು. ಹಿಂದೆ, ದೊಡ್ಡ ಮನಸ್ಸುಮಾಡಿ, ನಾವು ಅಲ್ಲಿಂದ ಕರೆದ ಕ್ಷಣ ಬಂದು ಭಾಷಾ ಪ್ರಚಾರಮಾಡಿದರು. ಭಾಷೆ ಬೆಳೆದಿದೆ. ಇಂದೂ, ಈ ಹೊತ್ತಿನವರೆಗೂ ಮಾಡಿದ್ದೆಲ್ಲವನ್ನೂ ಹೊಳೆಗೆ ಹಾಕಿದ ಹುಣಸೆಹಣ್ಣಿನಂತೆ ಮಾಡಕೂಡದು. ಹಿಂದೆ ಅಷ್ಟು ದೊಡ್ಡ ಮನಸ್ಸು ಮಾಡಿದವರು ಈಗ ಈ ಹೆಸರಿನ ಸಲುವಾಗಿಯೂ ಮಾಡಬಹುದಲ್ಲವೇ. ಕನ್ನಡ ಬಾಷೆ ರಾಜ ಭಾಷೆಯಾಗಬೇಕೆಂದು ಕಾದಾಡುತ್ತಿರುವವರು, ಇವತ್ತು ಕರ್ನಾಟಕವೆಂಬ ಹೆಸರಿಡಬೇಕೆನ್ನುವುದಕ್ಕೆ ರಕ್ತಪಾತ ಮಾಡುತ್ತೇವೆನ್ನುವುದೇ! ಪ್ರತಿಯೊಂದಕ್ಕೂ ಕನ್ನಡವೇ ಇರಬೇಕೆಂದು ಅಭಿಮಾನ ತೋರಿಸುವವರು ಕರ್ನಾಟಕ ಎನ್ನುವುದಕ್ಕೂ ಅಭಿಮಾನವನ್ನೇಕೆ ತೋರಿಸಕೂಡದು ?

4-00 P.M.

ಇದರೊಳಗೆ ಏನೂ ಇಲ್ಲ. ದುರಭಿಮಾನ ಬಂದಿದೆಯೆಂದು ನನಗನ್ನಿಸುತ್ತದೆ. ಮನುಷ್ಯನಿಗೆ ಯಾವಾಗಲೂ ಅಭಿಮಾನವಿರಬೇಕು. ನಮ್ಮಲ್ಲಿ ಖಂಡಿತವಾಗಿ ದುರಭಿಮಾನ ಯಾವರೀತಿಯಲ್ಲೂ ಇರಬಾರದುಎಂದು ನಾನು ಕಳಕಳಿಯಿಂದ ಬೇಡುತ್ತೇನೆ. ನಾವೆಲ್ಲರೂ ಒಂದು ದೊಡ್ಡಮನಸ್ಸುಮಾಡಿ ಒಂದು ನಿರ್ಣಯಕ್ಕೆ ಬರಬೇಕು ಎಂಬುದಾಗಿ ನಾನು ಮೈಸೂರಿನವರನ್ನು ಬೇಡಿಕೊಳ್ಳುತ್ತೇನೆ. ಇಷ್ಟೇಅಲ್ಲ. ಇದ್ದ ಪರಿಸ್ಥಿತಿಯಲ್ಲಿ ವಿಚಾರಮಾಡಿ ನೋಡೋಣ. ಮುಂಬೈನಲ್ಲಿ ಹೋಗಿ ನೋಡಿದರೆ ಈ ಹೆಸರುಗಳೆಲ್ಲಾ ಹೋಗಿ ಮೈಸೂರು ಸಂಘವೆಂದು ಇಟ್ಟುಕೊಂಡಿಲ್ಲ; ಕರ್ಣಾಟಕ ಸಂಘವೆಂದು ಇಟ್ಟುಕೊಂಡಿದ್ದಾರೆ. ಅಲ್ಲಿ ಬಹಳ ಜನರು ಕೆಲಸ ಮಾಡುತ್ತಿದ್ದಾರೆ. ಶೇಕಡ 80 ಅಥವಾ 90 ಭಾಗದಷ್ಟು ಇಂಜಿನಿಯರುಗಳು ಹಳೆಯ ಮೈಸೂರಿನವರಿದ್ದಾರೆ, ಕೆಲವು ಮಂದಿ ಉತ್ತರ ಕರ್ಣಾಟಕದವರೂ ಸಹ ಕರ್ಣಾಟಕ ಸಂಘವೆಂದು ಇಟ್ಟುಕೊಂಡಿದ್ದಾರೆ; ಇಲ್ಲಿ ಕೂತು ಕೊಂಡು ಮೈಸೂರು, ಮೈಸೂರು ಎಂದು ಹೇಳಿದರೆ ಪ್ರಯೋಜನವಿಲ್ಲ. ಕೆಲವರು ಹೇಳುತ್ತಾರೆ ನಮ್ಮ ಜನರು ಹೀಗೆ ಹೇಳುತ್ತಾರೆ ಹಾಗೆ ಹೇಳುತ್ತಾರೆ, ಈಚೆಗೆ ಸ್ಕೂಲು ಹುಡುಗರು ಚಳವಳಿ ಮಾಡುತ್ತಿದ್ದಾರೆ. ಅವರ ಜೊತೆಗೆ ಬೇರೆ ಜನರೂ ಸಹ ಸೇರಿಕೊಂಡು ಚಳವಳಿ ಮಾಡುತ್ತಿದ್ದಾರೆ. ಅನೇಕರು ಪೊಲಿಟಿಕಲ್ ವಿಚಾರದಲ್ಲಿ ಕೈಹಾಕುತ್ತಿದ್ದಾರೆ. ಕರ್ಣಾಟಕ—ಮೈಸೂರು ಎಂದು ಬೇಕಾದರೂ ಇರಬಹುದು ಹೇಳುತ್ತಾರೆ. ಪಾಲಿಟೀಷಿಯನ್ಸ್ ಇಷ್ಟೆಲ್ಲಾ ಮಾಡಿರುತ್ತಾರೆ, common man ಗೆ ಇದರಿಂದ ಏನೂ ಆಗುವುದಿಲ್ಲ, ಒಂದು ರಾಜ್ಯಕಟ್ಟುವುದಕ್ಕೋಸ್ಕರ ಇದೆಲ್ಲ ಬಂದಿದೆ ಎಂದು ಹೇಳುತ್ತಾರೆ. ಪ್ಲಾನ್ ಮಾಡುತ್ತಿದ್ದಾರೆ. ರಾಜಕಾರಣಿಗಳಾದ ನಾವು ಪ್ಲಾನ್ ಮಾಡುವವರು, ಜನರು ಅಲ್ಲ. ಈ ಅಸೆಂಬ್ಲಿಯೊಳಗೆ ಇದು ಯಾವುದೋ ಕಾರಣದಿಂದ ಬಂದಿದೆ ಎಂಬುದಾಗಿ ಇಟ್ಟುಕೊಳ್ಳಬಾರದು. ನಾಳೆ ಇನ್ನೂ ಕೆಲವು ಪ್ರದೇಶಗಳು ಸೇರಿದ ಮೇಲೆ ನಾವು ಮತ್ತೊಂದುಸಾರಿ ಒಂದುಗೂಡೋಣ ಎಂದು ಅವರು ಹೇಳಬಹುದು. ಇದಕ್ಕೆ ಹೆಸರು ಇಡುವುದು ನಮ್ಮ ಕೆಲಸ. Comman man ಆಗಿರುವವನು ಏನೂ ಮಾಡುವುದಕ್ಕಾಗುವುದಿಲ್ಲ. ಇಂಪ್ಲೊಯನ್ಸ್‌ನಿಂದ ಬೇಕಾದರೆ ನಾಲ್ಕು ಸಹಿಗಳನ್ನು ಕ್ಯಾನ್ವಾಸ್ ಮಾಡಬಹುದು. ಈ ಮೈಸೂರಿನಲ್ಲಿ ಗೋಪಾಲಗೌಡರು ಸೋಷಿಯಲಿಸ್ಟ್ ಪಾರ್ಟಿ ಪ್ರತಿನಿಧಿಗಳು. ಈ ರೀತಿ ಪ್ರಜಾಸೋಷಿಯಲಿಸ್ಟ್ ಪಾರ್ಟಿ ಪ್ರತಿನಿಧಿಗಳೂ ಸಹ ಮಾಡುವವರಿದ್ದಾರೆ. ಕರ್ಣಾಟಕವಾಗಲೀ ಆಗದೇ ಇರಲಿ ಸ್ಟ್ರಗಲ್ ಮಾಡುವವರು ಇದ್ದಾರೆ. ಇದಕ್ಕೆ ಕೊನೆಯೇ ಇಲ್ಲ. ಆದ್ದರಿಂದ ಮೈಸೂರಿನವರು ಸ್ವಲ್ಪ ದೊಡ್ಡಮನಸ್ಸುಮಾಡಿ ಉಳಿದಿರುವ ಕನ್ನಡ ಪ್ರದೇಶಗಳನ್ನೆಲ್ಲಾ ನಮ್ಮ ಮೈಸೂರಿಗೆ ಸೇರಿಸಿ ಕರ್ಣಾಟಕ ಎಂಬ ಹೆಸರು ಆಗಲಿ ಯೆಂದು ನಾನು ವಿನಯದಿಂದ, ಕಳಕಳಿಯಿಂದ ಬೇಡಿ, ಅಧ್ಯಕ್ಷರು ನನಗೆ ಈಗ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸುತ್ತೇನೆ. ಇನ್ನೂ ಬೇರೆಯವರು ಮಾತನಾಡುವವರು ಇದ್ದಾರೆ. ಆದ್ದರಿಂದ ಅವರ ವೇಳೆ ತೆಗೆದುಕೊಳ್ಳದೆ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ (ಕಾರ್ಮಿಕ, ವಸತಿ ಮತ್ತು ಸಾಗಾಣಿಕೆಯ ಮಂತ್ರಿಗಳು).—ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಈ ಖಾಸಗೀ ನಿರ್ಣಯದ ಮೇಲೆ ನಾವು ಯಾವುದೇ ತೀರ್ಮಾನ ತೆಗೆದುಕೊಂಡರೂ ಸಹ ಇದು ಒಂದು ಶಿಫಾರ್ಸು ರೂಪದಲ್ಲಿ ಪಾರ್ಲಿಮೆಂಟ್ ಮುಂದೆಹೋಗಿ ಅಲ್ಲಿ ಹೆಸರು ಬದಲಾವಣೆ ವಿಚಾರ ಕಾನೂನು ರೀತ್ಯಾ ಕಾನ್ಸ್ಟಿಟ್ಯೂಷನ್ನಿನಲ್ಲಿ ತಿದ್ದುಪಡಿ ಮಾಡಿ ಬದಲಾವಣೆಆಗಲೇ ಬೇಕಾಗುತ್ತದೆ. ಹಾಗಿಲ್ಲದೆ ಹೋದರೆ ಈ ಸಭೆ ಬಹುಮತದಿಂದ ಅಥವಾ ಯಾವುದೇ ರೀತ್ಯ ತೀರ್ಮಾನ ಮಾಡಿದರೆ ಅದು ಯಾರ ಮೇಲೂ ಬೈಂಡಿಗ್ ಅಲ್ಲ. ಇದು ಒಂದು ಶಿಫಾರ್ಸು. ಇದು ಒಂದು ಅಭಿಪ್ರಾಯವನ್ನು ಕೊಡತಕ್ಕದ್ದಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡಿದ್ದೇ ಆದರೆ ಅನೇಕ ಮಾನ್ಯ ಸ್ನೇಹಿತರು ಇದುವರೆಗೆ ಮಾತನಾಡಿದ್ದನ್ನು ನೋಡಿದರೆ, ಮತ್ತು ಕೆಲವು ಸದಸ್ಯರು ರಕ್ತಪಾತಗಳು ಕೂಡ ಈ ಸಮಸ್ಯೆ ಬಗೆಹರಿಯುವುದರೊಳಗೆ ಉಂಟಾಗುತ್ತವೆಂದು ಹೇಳಿರುವುದನ್ನು ನಾವು ಯೋಚನೆ ಮಾಡಿದರೆ, ಹೀಗೆ ಮಾತನಾಡತಕ್ಕ ಅಗತ್ಯವೇನೂ ಇಲ್ಲವೆಂದು ನಾನು ಹೇಳುತ್ತೇನೆ. ಬಹುಜನರು ಕರ್ಣಾಟಕವೆಂಬ ಹೆಸರಿಗೆ ಒಪ್ಪಿಕೊಂಡರೂ ಇನ್ನು ಕೆಲವು ಜನರು ಈ ಅಭಿಪ್ರಾಯಕ್ಕೆ ವಿರೋಧವಾಗಿದ್ದಾರೆ. ಈ ಎರಡು ಅಭಿಪ್ರಾಯಗಳ ಅಂತ್ಯ ತೀರ್ಮಾನ ನಮ್ಮದಲ್ಲ. ಇದನ್ನು ಬೇರೆಯವರು ತೀರ್ಮಾನ ಮಾಡಬೇಕು. ನಮ್ಮ ಅಭಿಪ್ರಾಯವನ್ನು ಕೊಡುವ ಸಂದರ್ಭದಲ್ಲಿ ಇದಕ್ಕೆ ವಿರೋಧಾಭಿಪ್ರಾಯವೇನಿದೆ ಎಂಬುದನ್ನು ಈ ಸಭೆಯವರು ಗಮನಿಸಬೇಕಾದುದು ಅಗತ್ಯವಿದೆ. ಈ ವಿಚಾರದಲ್ಲಿ ನಾನು ನಾಲ್ಕು ಮಾತುಗಳನ್ನು ಈ ಸಭೆಯ ಮುಂದಿಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಮಾನ್ಯಸ್ನೇಹಿತರಾದಂಥ ಶ್ರೀ ನಮೋಷಿಯವರುಎರಡು ವಿಷಯಗಳನ್ನು ಬಹಳ ಚೆನ್ನಾಗಿ ಹೇಳಿದರು. ಇದು ದೇಶದಲ್ಲಿ ಸಾಧಾರಣ ಮನುಷ್ಯನ ಆರ್ಥಿಕ ಮಟ್ಟದ ಸಮಸ್ಯೆಯಲ್ಲವೆಂದು ಹೇಳಿದರು. ಹಿಂದೆ 1955ನೇ ಇಸವಿಯಲ್ಲಿ ಈ ಸಭೆಯಲ್ಲಿ ಪ್ರಾಂತ ಪುನರ್ವಿಂಗಡಣಾ ಕಮಿಷನ್ನಿನವರ ವರದಿಯನ್ನು ನಮ್ಮ ಮುಂದೆ ಮಂಡಿಸಿದಾಗ ಅದರ ಮೇಲೆ ಚರ್ಚೆಮಾಡಿದ ಕಾಲದಲ್ಲಿಯೂ ಕೂಡ ಇದೇ ವಾದವನ್ನು ಪುಷ್ಟೀಕರಿಸಿ ಇದು ಸಾಧಾರಣ ಜನರ ಸಮಸ್ಯೆಯಲ್ಲ, ಭಾಷಾವಾರು ಪ್ರಾಂತಗಳ

(ಶ್ರೀ ಡಿ. ದೇವರಾಜ್ ಅರಸ್)

ನರ ಸಮಸ್ಯೆಯೂ ಅಲ್ಲ ಎಂದು ಹೇಳಿದರು. ಅದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಈಗ ಮಾನ್ಯ ಸ್ನೇಹಿತರು ಅದನ್ನೇ ಹೇಳುತ್ತಿದ್ದಾರೆ. ಅದು ನಿಜವೆಂದು ನಾನು ಹೇಳಬೇಕಾಗಿದೆ. ಕೆಲವು ಸದಸ್ಯರು ಮಾತನಾಡುತ್ತ ಇದರ ಬಗ್ಗೆ ಚಳುವಳಿಯಾಗಿ ರಕ್ತಪಾತವಾಗುತ್ತದೆಂದೂ ಸಹ ಹೇಳಿದರು. ಈ ರೀತಿಯಾಗಿ ಅನೇಕರು ತಮ್ಮ ವಾದವನ್ನು ಪುಷ್ಟೀಕರಿಸುತ್ತಾ ಇದು ಪಾಲಿಟಿಷಿಯನ್ಸ್‌ಗೆ ಸಂಬಂಧಪಟ್ಟ ಸಮಸ್ಯೆಯೆಂದು 1955ನೇ ಇಸವಿಯಲ್ಲಿಯೇ ಹೇಳಿದ್ದಾರೆ. ಇವತ್ತು ಇದು ರಾಜಕೀಯ ಧುರೀಣರಿಗೆ ಸಂಬಂಧಪಟ್ಟದ್ದು ಮತ್ತು ಸಾಹಿತಿಗಳಿಗೆ ಸಂಬಂಧ ಪಟ್ಟದ್ದು ಎಂಬುದಾಗಿ ಇಟ್ಟುಕೊಳ್ಳೋಣ. ಇದು ಸಾಹಿತಿಗಳಿಗೆ ಸಂಬಂಧಪಟ್ಟ ವಿಚಾರವಾದರೆ ಕನ್ನಡಭಾಷೆ ಇಂತಹ ಹೆಸರು ಬದಲಾವಣೆಯಿಂದ ಹೆಚ್ಚಿನಮಟ್ಟಿಗೆ ಅಭಿವೃದ್ಧಿಗೊಳ್ಳುತ್ತದೆ. ಹಾಗಿಲ್ಲದೆ ಹೋದರೆ ಈಗಿರುವ ಹೆಸರೇ ಇದ್ದುಕೊಂಡು ಹೋಗುವುದು ಸಾಧುವಾಗುತ್ತದೆ. ನನ್ನ ಪರಮಮಿತ್ರರಾದಂಥ ಶ್ರೀಮಾರ್ ಗೋಪಾಲಗೌಡರು ಬಹಳಚೆನ್ನಾಗಿ ಮಾತನಾಡಿದರು. ಅವರ ಮಾತುಗಳನ್ನು ನಾವು ಬಹಳ ಕಿವಿಗೊಟ್ಟು ಕೇಳುತ್ತಿದ್ದೇವೆ. ಅವರು ಇದರಿಂದ ಕನ್ನಡಭಾಷೆಗೆ ಧಕ್ಕೆಬರುತ್ತದೆ. ಖಂಡಿತವಾಗಿ ಕನ್ನಡ ಭಾಷೆ ಬೆಳೆಯುವುದಿಲ್ಲ ಎಂದು ವಾದಮಾಡುತ್ತಿದ್ದಾರೆ. ಆದರೆ ಆ ರೀತಿ ವಾದ ಮಾಡಿದ್ದಾರೋ ಏನೋ ನನಗೆ ತಿಳಿಯಲಿಲ್ಲ. ಹಿಂದೆ ಕರ್ಣಾಟಕ ರಾಜ್ಯವೆಂದು ಇದ್ದುದನ್ನು ನಾನು ಓದಲಿಲ್ಲ; ಚರಿತ್ರಕಾರರಿಂದಲೂ ಸಹ ನಾನು ಆ ಹೆಸರನ್ನು ಕೇಳಲಿಲ್ಲ. ಎಷ್ಟೋ ಬಿರುದುಗಳಿವೆ ಎಂಬುದಾಗಿ ಎಲ್ಲರಿಗೂಗೊತ್ತಿದೆ. ಕೆಲವು ಮಾನ್ಯ ಸ್ನೇಹಿತರು ಹೇಳಿದರು, ಮೈಸೂರು ದೇಶದ ಅರಸರು ಕರ್ಣಾಟಕ ಸಿಂಹಾಸನಾಧೀಶ್ವರರು, ವಿಜಯನಗರದ ಅರಸರು ಎಂಬುದಾಗಿ ಬಿರುದುಗಳನ್ನು ಇಟ್ಟುಕೊಂಡಿದ್ದಾರೆ ಎಂದು ರಾಜಮಹಾರಾಜರುಗಳೇ ಬೇಕಿಲ್ಲದ ಕಾಲದಲ್ಲಿ ಸಂಸ್ಥಾನವೇ ಬೇಡವೆಂದು ಹೇಳುವುದೂ ಆಗುತ್ತದೆ. ರಾಜರುಗಳೇ ಬೇಕಿಲ್ಲವೆಂದಮೇಲೆ ಅವರ ಗಡ್ಡ ಬೇಕೇ! ಅವರುನಮಗೆ ಕೊಡತಕ್ಕ ಬಿರುದುಗಳು ಏಕೆ? ಈರೀತಿಯಾಗಿ ಹೇಳುತ್ತಿದ್ದಾರೆ ಇಂಥಾದ್ದನ್ನು ಏತಕ್ಕೋಸ್ಕರ ಉದಹರಿಸುತ್ತಿದ್ದಾರೋ ನನಗೆ ಅರ್ಥವಾಗಿಲ್ಲ. ಈ ಕರ್ಣಾಟಕ ಎನ್ನುವ ಹೆಸರು ಪುರಾತನ ವಾದಂಥಾದ್ದು ಎಂದರೆ ಯಾವುದಾದರೂ ಒಂದು ಇಂಡಿಯಾ ದೇಶದ ಚರಿತ್ರೆಯಲ್ಲಿ, ಭಾರತದ ಚರಿತ್ರೆಯಲ್ಲಿ ಈ ಹೆಸರಿನ ಮೇಲೆ ಯಾವುದಾದರೂ ಒಂದು ರಾಜ್ಯಕಟ್ಟಿತ್ತೋ? ವಿಜಯನಗರವನ್ನು ಸ್ಥಾಪನೆ ಮಾಡಿದಂಥವರು ಆಗ ಇದಕ್ಕೆ ಕರ್ಣಾಟಕವೆಂಬ ಹೆಸರನ್ನು ಏಕೆಕೊಡಲಿಲ್ಲ? ಪಾಪ, ಆಕಾಲದಲ್ಲಿ ಅವರಿಗೆ ಬುದ್ಧಿ ಇರಲಿಲ್ಲವೇ? ಇವರು ಯಾರಾದರೂ ಹೇಳಿದ್ದರೆ ಆ ಹೆಸರನ್ನು ಇಡುತ್ತಿದ್ದರೋ ಏನೋ ಎಂದು ಕಾಣುತ್ತದೆ. ಅನೇಕ ಮಾನ್ಯ ಸದಸ್ಯರು ಈಗ ಇರುವ ಹೆಸರನ್ನು ಬದಲಾವಣೆ ಮಾಡುವುದು ಬೇಡ ಅದರಿಂದ ಅನೇಕ ತೊಂದರೆಗಳಾಗುತ್ತವೆ ಎಂದು ಅನೇಕ ವಾದಗಳನ್ನು ಮಾಡಿದ್ದಾರೆ. ಈಗ ಹೊರಗಿನ ನಾನಾ ಭಾಗಗಳು ಹಳೆಯ ಮೈಸೂರಿಗೆ ಬಂದು ಸೇರಿವೆ, ಅವರು ಏನು ಹೇಳುತ್ತಾರೆಂದರೆ ಈ ಮೈಸೂರು ಎನ್ನುವ ಹೆಸರು ಅಷ್ಟುಚೆನ್ನಾಗಿಲ್ಲ ಇದನ್ನು ಬದಲಾವಣೆ ಮಾಡಬೇಕು ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ನನಗೆ ಒಬ್ಬಹರಿದಾಸರ ಕೀರ್ತನೆಯು ಜ್ಞಾಪಕಕ್ಕೆ ಬರುತ್ತದೆ. ಅದು ಏನೆಂದರೆ "ನೀಮಾಯದೊಳಗೋ ನಿನ್ನೊಳು ಮಾಯವೋ" ಎಂದು ಹೇಳುತ್ತಾರೆ. ಹಳೆಯ ಮೈಸೂರಿನಲ್ಲಿ ಹೊಸ ಮೈಸೂರು ಸೇರಿದೆಯೋ ಅಥವಾ ಹೊಸ ಮೈಸೂರಿನಲ್ಲಿ ಹಳೆಯ ಮೈಸೂರು ಸೇರಿದೆಯೋ, ಲಿಂಗದೊಳಗೆ ಜಂಗಮವೋ ಜಂಗಮದೊಳಗೆ ಲಿಂಗವೋ ಇದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅಂತೂ ಈಗ ಎಲ್ಲರೂ ಒಟ್ಟಾಗಿ ಸೇರಿದ್ದೇವೆ, ಈ ಹೆಸರನ್ನು ಬದಲಾವಣೆ ಮಾಡಬೇಕು ಎನ್ನುವ ವಿಷಯದಲ್ಲಿ ನನ್ನ ಅನೇಕ ಮಾನ್ಯ ಸ್ನೇಹಿತರು ಬಹಳ ಉದ್ವೇಗದಿಂದ ಮಾತನಾಡಿದರು. ಈಗ ನಾನಾ ಭಾಗಗಳು ಮೈಸೂರಿಗೆ ಬಂದು ಸೇರಿವೆ. ನಾವೆಲ್ಲರೂಕೂಡ ಒಟ್ಟಾಗಿ ಸೇರಿದ್ದೇವೆ. ಇದರಲ್ಲಿ ಅರ್ಥ ಹೆಚ್ಚುಕಡಿಮೆ ಯಾಗುವುದಿಲ್ಲ. ಆದರೆ ಈಗ ಕೆಲವರು ಹೂಡಿರತಕ್ಕ ವಾದ ಏನೆಂದರೆ, ಮೈಸೂರು ಎನ್ನುವ ಹೆಸರು ಬೇಡ, ಅದು ಚಿಕ್ಕದಾಗಿದೆ ಅದರ ಅರ್ಥ ಚೆನ್ನಾಗಿಲ್ಲ, ಇದಕ್ಕೆ ಕರ್ಣಾಟಕ ಎಂದು ಹೆಸರಿಟ್ಟರೆ ದೊಡ್ಡ ಅರ್ಥ ಬರುತ್ತದೆ ಎಂದು. ಹಾಗಾದರೆ ಮೈಸೂರು ಎಂದು ಏತಕ್ಕೆ ಇರಬಾರದು ಎಂದು ನಾವು ಕೇಳುತ್ತೇವೆ. ಮೈಸೂರು ಎನ್ನುವ ಹೆಸರೂ ಚೆನ್ನಾಗಿದೆ. 1955ನೇ ಇಸವಿಯಲ್ಲಿ ಈ ವಿಷಯದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡ ಕಾಲದಲ್ಲಿ ಈ ಸಭೆಯ ಅಧ್ಯಕ್ಷರು ಮೋಷನ್ ಮೂವ ಮಾಡುವಾಗ ಒಂದು ಮಾತು ಹೇಳಿದ್ದಾರೆ. ಅದು ಈ ರೀತಿ ಇದೆ :

"This Assembly is further of the opinion that in order to preserve its composite character, the new State should continue to be called Mysore State."

ಇದು ಹಿಂದಿನ ನಿರ್ಣಯದ ಎರಡನೆಯ ಭಾಗ. ಇದೇರೀತಿ ಪಾರ್ಲಿಮೆಂಟಿನಲ್ಲಿಯೂ ಕೂಡ ಮೈಸೂರು ಎನ್ನುವ ಹೆಸರೇ ಇಡತಕ್ಕದ್ದು ನ್ಯಾಯ ಎಂದು ತೀರ್ಮಾನವಾಗಿದೆ. ಆ ವಿಷಯವನ್ನು ಈಗ ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಹಿಂದೆ ಈ ವಿಷಯದಲ್ಲಿ ಬೇಕಾದಷ್ಟು ಚರ್ಚೆಯಾಗಿ ಎಲ್ಲರೂ ಅದಕ್ಕೆ ಒಪ್ಪಬೇಕಾದರೆ ಅದಕ್ಕೆ ಒಂದು ಹಿನ್ನೆಲೆಯಿದೆ. ಆ ಹಿನ್ನಲೆ ಏನೆಂದರೆ, ಇದುಒಂದು ಸಮ್ಮಿಶ್ರವಾಗಿರತಕ್ಕ ರಾಜ್ಯ. ಅದಕ್ಕೋಸ್ಕರ ಆ ರೀತಿಯಾದ ಒಂದು ಅರ್ಥ ಬರುವುದಕ್ಕೋಸ್ಕರ "ಮೈಸೂರು" ಎಂಬುದೇ ಇರಲೆಂದು ಆಗ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಈ ವಿಷಯವನ್ನು ಕೂಡ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಬೇರೆ ವಾದವನ್ನು ಮಾಡಿದಂಥ ಮಾನ್ಯ ಸ್ನೇಹಿತರು ಕರ್ಣಾಟಕ ಎಂದು ಹೇಳಿದರೆ ಕನ್ನಡಕ್ಕೆ ಪ್ರೋತ್ಸಾಹ ಬರುತ್ತದೆ, ಮತ್ತು ಕನ್ನಡ ರಾಜ್ಯ ಎನ್ನುವ ಒಂದು ಅರ್ಥ ಬರಬೇಕಾದರೆ ಕರ್ಣಾಟಕ ಎಂದು ಕರೆಯಬೇಕು ಎಂದು ಹೇಳಿದರು. ಇದನ್ನು ಸ್ವಲ್ಪ ಯೋಚನೆ ಮಾಡಿನೋಡಿದರೆ, ಇದು ಒಂದು ಕಾಂಪೋಜಿಟ್ ಸ್ಟೇಟ್ ಆಗಿ ಇರಬೇಕೆಂದು ಈ ಮೈಸೂರು ಎನ್ನುವ ಹೆಸರನ್ನ ಇಡಬೇಕೆಂದು ತೀರ್ಮಾನ ಮಾಡಲಾಗಿದೆ. ಈಗ ನಮ್ಮದೇಶದಲ್ಲಿ ತಮಿಳು ಮಾತನಾಡುವವರು ಅನೇಕ ಜನಇದ್ದಾರೆ. ಉರ್ದುಭಾಷೆಯನ್ನು ಮಾತನಾಡುವವರು ಅನೇಕಜನ ಇದ್ದಾರೆ. ಇಂಥಾ ಸಂದರ್ಭದಲ್ಲಿ ನಾವುರಾಗ ದ್ವೇಷಗಳಿಂದ ಕನ್ನಡ ಎನ್ನುವ ಅರ್ಥಬರುವ ಹಾಗೆ ಕರ್ಣಾಟಕ ಎಂದು ಹೆಸರಿಟ್ಟರೆ ಅವರ ಮನಸ್ಸಿಗೆ ನೋವಾಗಬಹುದು. ಮತ್ತು ಅವರೆಲ್ಲರೂ ಇದಕ್ಕೆ ಒಪ್ಪಿದ್ದಾರೆಂದೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಹಾಗಾದರೆ ಆಂಧ್ರಮತ್ತು ಮಹಾರಾಷ್ಟ್ರಗಳಲ್ಲಿ ಬೇರೆ ಭಾಷೆಯನ್ನು ಮಾತನಾಡುವವರು ಇಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಇದ್ದಾರೆ. ಅಲ್ಲಿ ಯಾರೂ ಹೆಸರಿನ ಬಗ್ಗೆ ದ್ವೇಷಿಸಿಲ್ಲ. ಇಲ್ಲಿ ಅದನ್ನು ವಿರೋಧಿಸುವವರು ಇದ್ದಾರೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ (ಚಿಂತಾಮಣಿ).—ಆಂಧ್ರ ಪ್ರಾಂತದಲ್ಲಿ ಅಲ್ಲಿಯ ಜನಗಳ ಭಾಷೆ ತೆಲುಗು. ಆದರೆ ಅವರು ತೆಲುಗುನಾಡು ಎಂದು ಇಟ್ಟು ಕೊಂಡಿಲ್ಲ. ಆಂಧ್ರ ಪ್ರಾಂತ ಎಂದು ಇಟ್ಟುಕೊಂಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನಾನು ಕಾಂಗ್ರೆಸ್ ಪಾರ್ಟಿಯ ಸದಸ್ಯನಾಗಿ ಈಗ ಇಲ್ಲಿ ಮಾತನಾಡುತ್ತಿಲ್ಲ. ಅಥವಾ ಕ್ಯಾಬಿನೆಟ್ ಮೆಂಬರಾಗಿ ಮಾತನಾಡುತ್ತಿಲ್ಲ. ಈಸಭೆಯ ಸದಸ್ಯನಾಗಿ ನಾನು ಮಾತನಾಡುತ್ತಿದ್ದೇನೆ. ಮಾನ್ಯ ಸದಸ್ಯರನೇಕರು ಹೆಸರಿನಲ್ಲಿ ಏನಿದೆ ಎನ್ನುವ ವಿಚಾರವನ್ನು ಎರಡು ಕಡೆಯವರೂ ಮಾತನಾಡಿದ್ದಾರೆ. ಹಾಗಾದರೆ ಆ ವಾದ ಸರಿ ಎಂದು ಒಪ್ಪಿ ಕೊಳ್ಳುವುದಾದರೆ ಈಗ ಇರುವ ಹೆಸರನ್ನು ಬದಲಾಯಿಸುವುದಕ್ಕೆ ಇಷ್ಟೊಂದು ಏತಕ್ಕೆ ಹೇಚಾಡಬೇಕು, ಇಷ್ಟೊಂದು ಏತಕ್ಕೆ ಒದ್ದಾಡಬೇಕು. ಹೆಸರಿನಲ್ಲಿ ಪ್ರಾಮುಖ್ಯತೆ ಇಲ್ಲದಿದ್ದರೆ ಇಷ್ಟೊಂದು ಏತಕ್ಕೆ ಉದ್ರೇಕಪೂರಿತವಾಗಿ ಮಾತನಾಡಬೇಕು, ಇಷ್ಟೊಂದು ಅಂದೋಳನವೇಕೋ ನನಗಂತೂ ಗೊತ್ತಾಗುವುದಿಲ್ಲ. ಈ ಸಭೆಯವರು ಸರ್ವಾನುಮತದಿಂದ ಒಪ್ಪಿರತಕ್ಕ ಮತ್ತು ಪಾರ್ಲಿಮೆಂಟಿನವರು ಸರ್ವಾನು ಮತದಿಂದ ಒಪ್ಪಿರತಕ್ಕ ಹೆಸರು ಮತ್ತು ಮೊದಲಿನಿಂದಲೂ ಇರತಕ್ಕ ಹೆಸರು ಮೈಸೂರೆಂಬುದು. ಈರೀತಿ ಸರ್ವರೂ ಒಪ್ಪಿ ಈಗ ಐದಾರುವರ್ಷಗಳಿಂದಲೂ ಕೆಲಸ ಮಾಡಿಕೊಂಡು ಬರುತ್ತಿದ್ದೇವೆ. ಈಮಧ್ಯೆ ಶಿವಪೂಜೆಯಲ್ಲಿ ಕರಡಿ ಬಿಟ್ಟಹಾಗೆ ಈಗ ಇರುವ ಹೆಸರನ್ನು ಬದಲಾಯಿಸಬೇಕೆಂದರೆ ಇದರ ಅರ್ಥ ನನಗಂತೂ ಗೊತ್ತಾಗುವುದಿಲ್ಲ. ಈಗ ಹೆಸರು ಬಲಾವಣೆಯಾಗಬೇಕೆಂದು ಯಾರುಯಾರು ಹೇಳುತ್ತಿದ್ದಾರೆಯೋ ಅವರನ್ನು ಕೇಳುವುದು ಇಷ್ಟೆ. ಈಗ ನಮ್ಮ ದೇಶದಲ್ಲಿ ಕೋಲಾರ, ನಂಜನಗೂಡು ಮುಂತಾದ ಪ್ರದೇಶಗಳಲ್ಲಿ ಮಳೆ ಬೆಳೆಗಳು ಸರಿಯಾಗಿ ಆಗದೆ ಅಭಾವ ಪರಿಸ್ಥಿತಿ ಉಂಟಾಗಿದೆ. ಈಗ ಈ ಹೆಸರು ಬದಲಾವಣೆ ಮಾಡುವುದರಿಂದ ನಮ್ಮ ದೇಶದಲ್ಲಿ ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆಯೋ ಅಲ್ಲೆಲ್ಲಾ ಮಳೆ ಬೆಳೆಗಳಾಗಿ ಸುಭಿಕ್ಷ ಉಂಟಾಗುವುದಾದರೆ ಅದನ್ನು ನಾನು ಈಗಲೇ ಒಪ್ಪುತ್ತೇನೆ. ಅಥವಾ ಈಗ ನಮ್ಮ ರಾಜ್ಯದಲ್ಲಿ ಖೋತಾ ಬಡ್ಜೆಟ್ ಏನಿದೆಯೋ ಅದು ಇದರಿಂದ ತುಂಬಿ ಬರುತ್ತದೆಯೇ ? ಅಥವಾ ದೇಶದ ಆದಾಯ ಇದರಿಂದ ದ್ವಿಗುಣವಾಗುತ್ತದೆಯೋ ? ಏತಕ್ಕೋಸ್ಕರ ಈ ಹೆಸರು ಬದಲಾವಣೆಗೆ ಒದ್ದಾಡುತ್ತಿದ್ದಾರೆಯೋ ನನಗಂತೂ ಅರ್ಥವಾಗುವುದಿಲ್ಲ. ಹೆಸರು ಬದಲಾಯಿಸದೆ ಇರುವುದರಿಂದ ಕನ್ನಡ ಭಾಷೆಗೆ ಏನಾದರೂ ಧಕ್ಕೆ ಬಂದಿದೆಯೇ ? ಯಾವ ಇತಿಹಾಸವನ್ನು ತೆಗೆದು ನೋಡಿದರೂ ಕೂಡ ಕರ್ಣಾಟಕ ಎಂದು ಕರೆಯುವುದಕ್ಕೆ ಸಾಕಷ್ಟು ಆಧಾರಗಳು ನಮಗೆ ಕಂಡು ಬರುತ್ತಿಲ್ಲ. 1956ನೇ ಇಸವಿಯಲ್ಲಿ ಹೊಸ ರಾಜ್ಯ ರಚನೆಯಾಗುವಾಗ ಈ ಹೆಸರಿನ ಬಗ್ಗೆ ಅನೇಕ ಚರ್ಚೆಗಳು ನಡೆದು ''ಮೈಸೂರು'' ಎನ್ನುವ ಹೆಸರೇ ಇರಲಿ ಎಂದು ಇತ್ಯರ್ಥವಾಗಿದೆ. ಈ ವಿಷಯವನ್ನು ನಾನು ಬರೀ ಬಾಯಿಮಾತಿನಲ್ಲಿ ಹೇಳುತ್ತಿಲ್ಲ; 1956ನೇ ಇಸವಿಯ ವರದಿಯನ್ನು ತೆಗೆದು ನೋಡಿದರೆ ಈ ವಿಷಯ ಗೊತ್ತಾಗುತ್ತದೆ. ಈ ರೀತಿ ಇರುವುದರಿಂದ ಈಗ ಈ ಹೆಸರನ್ನು ಬದಲಾಯಿಸುವುದು ನ್ಯಾಯವಲ್ಲ. ಕರ್ಣಾಟಕ ಎಂಬುದರ ಬಗ್ಗೆ ಉದ್ವೇಗವಿರುವಂತೆ ಮೈಸೂರು ಎಂಬುದರ ಬಗ್ಗೆಯೂ ಇದೆ. ಇದು ಜನ ಸಾಮಾನ್ಯರ ಪ್ರಶ್ನೆಯಲ್ಲ ಎಂದು ಹೇಳುವುದಾದರೆ ಇದಕ್ಕೆ ಯಾವ ಹೆಸರಿದ್ದರೇನು ? ಇಷ್ಟೊಂದು ಕಾಲವನ್ನು ಇದಕ್ಕೆ ಏತಕ್ಕೆ ಉಪಯೋಗ ಮಾಡಬೇಕು ? ಅವರ ಹೊಟ್ಟೆ ಬಟ್ಟೆಯ ಪ್ರಶ್ನೆ ಅವರಿಗೆ ಬೇಕಾಗಿದೆ, ಆ ಪ್ರಶ್ನೆಯನ್ನು ಚರ್ಚೆ ಮಾಡುವುದಕ್ಕೆ ಈ ಕಾಲವನ್ನು ಬೇಕಾದರೆ ಉಪಯೋಗ ಮಾಡೋಣ. ಮೈಸೂರು ಎಂಬುದನ್ನು ಕರ್ಣಾಟಕ ಎಂದು ಕರೆದರೆ ಜನ ಸಾಮಾನ್ಯರ ಹೊಟ್ಟೆ ಬಟ್ಟೆಯ ಸಮಸ್ಯೆ ಬಗೆಹರಿಯುವುದಿಲ್ಲ.

ಒಂದು ವೇಳೆ ಇದಕ್ಕೆ ಬಹಳ ಹಿನ್ನೆಲೆ ಇದೆ ಅನ್ನುವುದಾದರೆ ನಿಮ್ಮಷ್ಟೇ ಪುಷ್ಟೀಕರಿಸಿ ಹೇಳತಕ್ಕ ಅನೇಕ ನಿದರ್ಶನಗಳನ್ನು ನಾನು ಕೊಡಬಲ್ಲೆ. ಮೈಸೂರು ಅನ್ನುವ ಹೆಸರಿಗೆ ಚಾರಿತ್ರಿಕ ಹಿನ್ನೆಲೆ ಹೇಳಬಹುದು. ಕರ್ನಾಟಕ ಎನ್ನುವ ಹೆಸರಿಗಿಂತ ಇದು ಪುರಾಣ ಪ್ರಸಿದ್ಧವಾದ ಹೆಸರು ಎಂದು ಹೇಳಬಹುದು. ಮಹಿಷಿ ಪಟ್ಟಣ ಇದೆ ಎನ್ನುವುದನ್ನು ಮಹಾಭಾರತದಲ್ಲಿ ಹೇಳಿದ್ದಾರೆ. ಇದು ಪುರಾಣ ಪ್ರಸಿದ್ಧವಾದ ಮಾತು. ಕರ್ನಾಟಕ ಎಲ್ಲಿದೆಯೋ ಅವರು ಹೇಳಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ವೇದವ್ಯಾಸರ ಮೂಲ ಭಾರತದ ಅರಣ್ಯಪರ್ವದಲ್ಲಿ ಕರ್ನಾಟಕ ಶಬ್ದ ಉಪಯೋಗಿಸಲಾಗಿದೆ. ಕಾಲ ಕ್ರಿಸ್ತ ಶಕ......

ಒಬ್ಬ ಸದಸ್ಯರು.—ಏನು ಸ್ವಾಮಿ, ಪುಸ್ತಕ ಪ್ರಿಂಟ್ ಆಗಿರುವ ತಾರೀಖು ಹೇಳುತ್ತಿದ್ದೀರಾ ! (ಸಭೆಯಲ್ಲಿ ನಗು !)

(*Interruption*)

ಶ್ರೀ ಡಿ. ದೇವರಾಜ ಅರಸ್.—ಅದು ಸಂಸ್ಕೃತ ಭಾರತದಲ್ಲಿದೆಯೇ, ಕನ್ನಡ ಭಾರತದಲ್ಲಿದೆಯೇ ಹೇಳಲಿಲ್ಲ ; ಈ ಹೆಸರು ಪುರಾಣ ಪ್ರಸಿದ್ಧವಾದದ್ದು ಎನ್ನುವುದನ್ನು ನಿನ್ನೆ ತಾನೆ ನಮ್ಮ ದೇಶಕ್ಕೆ ಬಂದು ಹೋದಂಥ ರಾಷ್ಟ್ರಾಧ್ಯಕ್ಷರೂ ಕೂಡ ಅವರ ಮಾತಿನಲ್ಲಿ ಹೇಳಿದ್ದಾರೆ. ಮೈಸೂರಿನಲ್ಲಿ ಮಾತನಾಡುವಾಗ ಕೂಡ ಹೇಳಿದ್ದಾರೆ. ಈ ಹೆಸರಿನ ಪ್ರಾಮುಖ್ಯತೆ ಎಷ್ಟುಮಟ್ಟಿಗಿದೆ ಎಂಬ ಅರ್ಥ ಕೂಡ ಹೇಳಿದ್ದಾರೆ. ಚಾಮುಂಡಾಂಬಿಕೆ ಮೈಸೂರು ಮಹಿಷಾಸುರನ ಮರ್ದನ ಮಾಡಿದ್ದು ಏಕೆ ; ಅದರ ಅರ್ಥ ಏನು ಎಂಬುದನ್ನು ಅವರು ಬಹಳ ಚೆನ್ನಾಗಿ ಪದ ವಿಭಾಗವಾಡಿ ಹೇಳಿದರು. ಅದೇ ನಮ್ಮ ಸಭೆಯಲ್ಲೂ ಕೆಲವು ಜನ ರಾಕ್ಷಸನನ್ನು ಕೊಂದರು, ಕೊಂದಂಥ ರಾಕ್ಷಸನ ಹೆಸರನ್ನೇಕೆ ಇಡಬೇಕೆಂದು ಕೇಳಿದರು. ಅದರ ಅರ್ಥ ಹಾಗಲ್ಲ, ರಾಕ್ಷಸ ಎನ್ನುವುದು ಹೊರಗೆ ಎಲ್ಲೂ ಇಲ್ಲ. ನಮ್ಮ ನಮ್ಮ ಆತ್ಮದಲ್ಲಿ ಇದೆ. ಪ್ರತಿಯೊಬ್ಬ ಮನುಷ್ಯನ ಆತ್ಮದಲ್ಲೂ ಇದೆ. ಆ ರಾಕ್ಷಸ ಎನ್ನುವುದು ರಾಗ, ದ್ವೇಷ ; ಅದೇ ಮಹಿಷಾಸುರ, ಅದನ್ನು ಚಾಮುಂಡಾಂಬಿಕೆ ಕೊಂದಿರುವುದು. ಇದರ ಅರ್ಥ ಹೀಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅನೇಕ ಅಧಿವೇಶನಗಳಲ್ಲಿ, ಬಹಿರಂಗ ಸಭೆಗಳಲ್ಲಿ ಕರ್ನಾಟಕ ಅನ್ನುವುದು ತಮ್ಮ ಪಾರ್ಟಿ ವಾದ ಎಂದು ಹೇಳಿದ್ದಾರೆ, ಅದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಒಂದೇ ಮಾತಿನಲ್ಲಿ ಉತ್ತರ ಕೊಡಬಲ್ಲೆ. ಅನೇಕ ವರ್ಷಗಳ ಹಿಂದೆ ಏನೇನೋ ತೀರ್ಮಾನಗಳಾಗಿದ್ದವು. 1956ರಲ್ಲಿ ಆಗಿರುವ ತೀರ್ಮಾನ ಈಗ ಬೇಡ ಎಂದು ಹೇಳುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ದೊಡ್ಡ ಮೇಟಿ ಅವರು ಹೇಳಿದಂತೆ ಕನ್ನಡ ರಾಜರಾಜೇಶ್ವರಿ ಮೈಸೂರಿನಲ್ಲಿ ನೆಲಸಿದ್ದಾಳೆ.

ಶ್ರೀ ಡಿ. ದೇವರಾಜ ಅರಸ್.—ಅವರು ಹೇಳಿದರು, ಮುಖಂಡರಾಗಿದ್ದವರೆಲ್ಲಾ ಕರ್ನಾಟಕ ದೇಶ ಒಂದಾಗಬೇಕು, ಮೈಸೂರಿಗೆ ಹೊಸದಾಗಿ ಸೇರುವುದು ಎಲ್ಲಾ ಸೇರಿ ಒಂದು ರಾಜ್ಯವಾಗಬೇಕೆಂದು ಹೇಳಿದವರು ಇದನ್ನು ಒಪ್ಪಿದ್ದರು ಎಂದಾಗ ನಮ್ಮ ಪರವಾಗಿ ಒಪ್ಪುವುದಕ್ಕೆ ಅವರು ಯಾರು? ಅವರೇನೋ ಒಪ್ಪಿರಬಹುದು, ನಾವೇಕೆ ಒಪ್ಪೋಣ ಎಂದು ಮಾನ್ಯ ಸ್ನೇಹಿತರು ಹೇಳುವುದಾದರೆ ಅವರ ಮಾತನ್ನು ಅಷ್ಟು ಸುಲಭವಾಗಿ ನಮ್ಮ ಮೇಲೆ ಬೈಂಡಿಂಗ್ ಆಗಿ ಮಾಡುವುದಕ್ಕಾಗುವುದಿಲ್ಲ. ಹಿಂದೆ ಆದ ತೀರ್ಮಾನ ನಿಮ್ಮ ಮೇಲೆ ಬೈಂಡಿಂಗ್ ಅಲ್ಲ ಎಂದರೆ ನಮ್ಮ ಮೇಲೂ ಬೈಂಡಿಂಗ್ ಅಲ್ಲ. ಆದ್ದರಿಂದ ಸ್ವಾಮಿ, ಈ ಹೆಸರಿನ ಮೇಲೆ ನಾವು ಬಹಳ ಪ್ರಾಮುಖ್ಯವಾಗಿ ಹೇಳುವುದಾದರೆ, ಇದಕ್ಕೆ ಚಾರಿತ್ರಿಕ ಹಿನ್ನೆಲೆ ಇದೆ. ಇದಕ್ಕೆ ಬಹಳ ಬೆಲೆ ಕೊಡಬೇಕು. ಹೆಸರಿನಲ್ಲಿ, ಏನಿದೆ. ಅಷ್ಟೊಂದು ಸುಲಭವಾಗಿ ಏನಾದರೂ ಹೆಸರಿರಲಿ ಇದು ಬೇಡ ಎನ್ನುವುದಾದರೆ, ಅವರು ಅನ್ನತಕ್ಕ ಕರ್ನಾಟಕ ಎನ್ನುವ ಹೆಸರಿಗೆ ಎಷ್ಟು ಪೌರಾಣಿಕ ಹಿನ್ನೆಲೆ ಇದೆ ಎನ್ನುತ್ತಾರೋ, ಅವರ ಹಾಗೇ-ಅದಕ್ಕಿಂತ ಹೆಚ್ಚು ಎಂದು ಹೇಳುವುದಿಲ್ಲ—ಅವರಷ್ಟೇ ಚಾರಿತ್ರಿಕ, ಪೌರಾಣಿಕ ಹಿನ್ನೆಲೆ ಅಷ್ಟೆ—ಪ್ರಾಮುಖ್ಯವಾದ ಬೆಲೆ ಮೈಸೂರಿಗೆ ಇದೆ ಎಂದು ತಮ್ಮ ಮುಂದೆ ಹೇಳುತ್ತೇನೆ. ಮತ್ತೊಂದು ವಿಷಯ ತಮ್ಮಲ್ಲಿ ನಿವೇದನೆ ಮಾಡುವುದೇನೆಂದರೆ ಕರ್ನಾಟಕ ಎಂಬ ಹೆಸರಿನ ಮೇಲೆ ಯಾವುದಾದರೂ ಸಾಮ್ರಾಜ್ಯ ಇಂಡಿಯಾ ದೇಶದ ಚರಿತ್ರೆಯಲ್ಲಿ ಇತ್ತೇ? ತೋರಿಸಿ ಕೊಡಿ.

ಸ್ವಾಮಿ, ಭಾವೈಕ್ಯತೆಯ ವಿಷಯ ಮಾತನಾಡಿದರು. ಇದಕ್ಕೂ ಮುಂಚೆ ಹೀಗೆಲ್ಲಾ ಆಗುವುದಾದರೆ ರಾಜ್ಯ ಎರಡು ಭಾಗ ಮಾಡುವುದು ಒಳ್ಳೆಯದೇನೋ ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಅದು ಸರಿಯಾದ್ದಲ್ಲ. ಆ ಮಾತಿನಂತೆ ಹೋಗುವುದು ನ್ಯಾಯವಲ್ಲ. ಅದನ್ನು ನಾನು ಒಪ್ಪುವುದಿಲ್ಲ, 5 ವರ್ಷದ ಹಿಂದೆ ಮಾಡಿದ ತೀರ್ಮಾನ ಸರಿಯಲ್ಲ, ಇನ್ನೊಂದು ಮಾಡಿ ಎಂದರೆ ಅದೂ ಸರಿಯಲ್ಲ ಮತ್ತೊಂದು ಮಾಡಿ ಎಂದು ಹೇಳುವುದು, ಯಾವ ರೀತಿ ಬೇಕಾದರೂ ಮಾಡೋಣ ಎಂದು ವಾದ ಮಾಡುವುದು ನೆಲೆತಪ್ಪಿ ಅಲೆದಾಡುವ ಹಾಗಾಗುತ್ತದೆ.

ಭಾವೈಕ್ಯತೆಯ ವಿಷಯ ಮಾತನಾಡಿದರು. ಈಗ ಏನಾಗಿದೆ ಎಂದರೆ ಮೆಜಾರಿಟಿ ಇದ್ದೇವೆ, ನಾವು ಹೇಳಿದ್ದೇ ವೇದವಾಕ್ಯ ಎಂದರೆ ಇದು ಭಾವೈಕ್ಯತೆಯೇ? We are in a majority, the others are in minority, majority rule shall prevail ಎಂದರೆ ನೀವೇನಾದರೂ ಮಾತನಾಡಿಕೊಳ್ಳಿ, ಬಹುಮತದಿಂದ ಹೇಳುತ್ತಿದ್ದೇವೆ ಒಪ್ಪಿಕೊಳ್ಳಿ ಎಂದ ಹಾಗಾಯಿತು. ಹೀಗಾದರೆ ಭಾವೈಕ್ಯತೆ ಒತ್ತಾಯದಿಂದ ಬರುತ್ತದೆಯೇ? ಮೈಸೂರು ಎನ್ನುವ ಹೆಸರು ಒಪ್ಪಿಕೊಂಡು, ಇರುವುದನ್ನು ಬದಲಾಯಿಸುವುದಕ್ಕೆ ಹೋಗದಿದ್ದರೆ ಒಳ್ಳೆಯದಲ್ಲವೇ? ಇದ್ದ ಹೆಸರನ್ನು ಬದಲಾವಣೆಮಾಡಿ ಕರ್ನಾಟಕ ಎಂಬ ಹೆಸರನ್ನಿಟ್ಟರೆ ಭಾವೈಕ್ಯತೆಯುಂಟಾಗುತ್ತದೆ ಎಂದು ಎಷ್ಟು force ನಿಂದ ತಾವು ಹೇಳುತ್ತೀರೋ ಅಷ್ಟೇ force ನಿಂದ ನಾವು ತಮಗೂ ಹೇಳಬಹುದು. ಕರ್ನಾಟಕ ಎಂದು ಹೇಳಿ ಕರೆದುಕೊಳ್ಳದಿದ್ದರೆ ನಿಮಗೆ ಊಟ ಮಾಡಿದ್ದು ಅರಗುವುದಿಲ್ಲ; ನೀರೂ ಸೇರುವುದಿಲ್ಲ, ಶ್ವಾಸೋಚ್ಛ್ವಾಸ ಆಡುವುದು ಕಷ್ಟ; ಹಾಗಾದರೆ ಬದಲಾವಣೆ ಆದರೂ ನಮಗೂ ಅದೇ ಕಷ್ಟ ಬಂದೀತು ಎಂದು ತಾವು ಏಕೆ ಯೋಚನೆ ಮಾಡಬಾರದು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಜಾಸ್ತಿ ಜನರು ಇದಕ್ಕೆ ಸಾಯುತ್ತಾರೋ; ಅದಕ್ಕೆ ಸಾಯುತ್ತಾರೋ?

ಶ್ರೀ ಡಿ. ದೇವರಾಜ ಅರಸ್.—ಯಾರು ಸತ್ತರೂ ನೀವು ಸಾಯುವುದಿಲ್ಲ, ಅದು ಮಾತ್ರ ನನಗೆ ಗೊತ್ತಿದೆ. (ಸಭೆಯಲ್ಲಿ ನಗು!) ಇರಲಿ. ಇನ್ನೊಂದು ಮಾತು National Integration ಎಂದರೆ ಕನ್ನಡದಲ್ಲಿ 'ರಾಷ್ಟ್ರೈಕ್ಯತೆ' ಎಂದು ಇಟ್ಟುಕೊಳ್ಳೋಣ.

4-30 P.M.

ದೇಶದಲ್ಲಿ National Integration ವಿಚಾರವನ್ನು ಮಾತನಾಡುತ್ತಿದ್ದೇವೆ. ಇದಕ್ಕಾಗಿ ನಮ್ಮ ರಾಷ್ಟ್ರದ ಮಹಾನಾಯಕರು ಸಭೆ ಸೇರಿದ್ದಾರೆ. ರಾಷ್ಟ್ರೀಯ ಸಂಘಟನೆಯನ್ನು ಬೆಳಸಲು ಏನು ಮಾಡಬೇಕು ಎಂದು ಯೋಚನೆ ಮಾಡತಕ್ಕ ಈ ಕಾಲದಲ್ಲಿ, ಭಾವೈಕ್ಯತೆ ಬರುತ್ತದೆಂಬ ಸೋಗಿನಲ್ಲಿ ಈಗ ಇರತಕ್ಕ ಒಂದು ಶಾಂತ ಪರಿಸ್ಥಿತಿಯನ್ನು ಕಲಕುವುದು ಸರಿಯಲ್ಲ. ಇದುವರೆಗೆ ಯಾವ ಸಂಸ್ಥಾನ ಒಂದು composite State ಆಗಿ, ಎಲ್ಲರೂ ಒಂದೇ ಎಂಬ ಭಾವನೆಯಿಂದ ಬೆಳೆಯಬೇಕೆಂದು, ತಮ್ಮದು ಎಂಬ ಅಭಿಮಾನದಿಂದ ತಮಿಳರು, ಕನ್ನಡಿಗರು, ತೆಲುಗರು, ಉರ್ದು ಮಾತನಾಡುವವರು ಒಂದಾಗಿ ಅಣ್ಣತಮ್ಮಂದಿರ ಹಾಗೆ ಬೆಳೆದು ಕೊಂಡು ಹೋಗಬೇಕೆಂದು ಹೇಳುವ ಮೈಸೂರು ಸಂಸ್ಥಾನ, New Mysore State ಎಂದು ಹೆಸರಿಟ್ಟುಕೊಂಡು ಹೋಗಬೇಕೆಂದು ತೀರ್ಮಾನ ಮಾಡಿದರೋ ಅದಕ್ಕೆ ಧಕ್ಕೆ ತರುವ ಹಾಗೆ, ಬಾಯಲ್ಲಿ national integration ಎಂದು ಹೇಳುತ್ತಾ ಅದಕ್ಕೆ ವಿರೋಧವಾದ ಕಾರ್ಯಗಳನ್ನು ಮಾಡುತ್ತಾ ಹೋಗುವುದು ನ್ಯಾಯವೆ ಎನ್ನುವುದನ್ನು ಯೋಚನೆಮಾಡಬೇಕು. ಎಲ್ಲರೂ ಒಟ್ಟಾಗಿ ಸೇರಿ ಯೋಚನೆಮಾಡಿ ಹಿಂದಿನ ಹೆಸರೇ ಇಟ್ಟುಕೊಂಡು ಹೋಗುವುದು ಒಳ್ಳೆಯದು, ಸಮಾಧಾನಕರವಾದುದು ಎಂದು ಎಲ್ಲರೂ ಸೇರಿ ತೀರ್ಮಾನಮಾಡಿದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಇಲ್ಲ, ಹಾಗೆ ಮಾಡಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಿದೆ, ನಾವೂ ಒಪ್ಪಿದ್ದೇವೆ; ಈಗ ಇಲ್ಲವೆಂದು ಹೇಳಿದರೆ, ಬಹುಮತವಾಗಲಿ, ಅಲ್ಪಮತವಾಗಲಿ, ಅದು ದೇಶಕ್ಕೆ ಒಳ್ಳೆಯದಲ್ಲ; ಹೆಸರು ಬದಲಾವಣೆಯಾಗದಿದ್ದರೆ ಬಹಳ ಜನರಿಗೆ ಜಿಗುಪ್ಸೆಯಾಗುತ್ತದೆ, ಅನೇಕ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳುವುದಾದರೆ, ಹೊಸ ಹೆಸರಿನಿಂದ ಈಗಿನ ಹೆಸರನ್ನು ಬದಲಾವಣೆ ಮಾಡುವುದರಿಂದ ಹಾಗೆ ಜಿಗುಪ್ಸೆಯಾಗುತ್ತದೆ ಎನ್ನುವ ಕೆಲವರು ಇದ್ದಾರೆ. ರಾಜಕಾರಣಿಗಳ ಅಥವಾ ಸಾಹಿತಿಗಳ ಗೊಂದಲ ಇದೆ ಎಂದು ಹೇಳುವುದಾದರೆ, ಸಾಹಿತಿಗಳು ಎಲ್ಲ ಕಾಲದ

ಲ್ಲಿಯೂ ಹೇಳಿಕೊಂಡು ಬಂದಿದ್ದಾರೆ. ರಾಜಕಾರಣಿಗಳು ಇದನ್ನು ಈಗ ಬದಲಾವಣೆಮಾಡುವ ಕಾರಣವೇನಿದೆ? ಎಲ್ಲವನ್ನೂ ಯೋಚನೆಮಾಡಿ, ಹಳೆಯ ಮೈಸೂರನ್ನು ಹೊಸ ರಾಜ್ಯವೆಂದು ಕರೆದು, ಒಂದು ಅಂತ್ಯವನ್ನು ಕೊಟ್ಟು ಕೆಲಸ ಮಾಡಿಕೊಂಡ ಬಂದಿದ್ದೇವೆ. ಹೀಗಿರುವಾಗ ಪರಿಸ್ಥಿತಿಯನ್ನು ಕಲಕುವುದು ಸೂಕ್ತವಲ್ಲ, ಲಾಭದಾಯಕವೂ ಅಲ್ಲ. ಅಲ್ಲಿಗೆ ಭಾವನೆಗಳ ಘರ್ಷಣೆಯಾದೀತು; ರಕ್ತಪಾತವಾದೀತು ಎಂದು ನಾನು ಹೇಳುವವನಲ್ಲ. ಹೆಸರಿನ ಬದಲಾವಣೆಯಿಂದ ಮಾತ್ರೇನಾಗದಿದ್ದರೂ ಮಾನಸಿಕ ಘರ್ಷಣೆಯಾದೀತು. ನಾವೆಲ್ಲ ಒಂದು ಎಂಬ ಭಾವನೆ ಹೆಪ್ಪುಕಟ್ಟಿಕೊಂಡಿರುವುದು ಒಡೆದು ಹೋಗಬಹುದು, ಗಾಂಧಾರಿ ಗರ್ಭವಾದ ಹಾಗೆ ಮಗು ಹುಟ್ಟುವುದಕ್ಕಿಂತ ಮುಂಚೆ ಹೊಟ್ಟೆ ಕಿವುಚಿಕೊಂಡ ಹಾಗಾಗಬಹುದು. ಹೆಸರನ್ನು ಬದಲಾವಣೆ ಮಾಡುವುದರಿಂದ ಯಾವ ಲಾಭವೂ ಬರುವುದಿಲ್ಲ. ಹೆಪ್ಪುಕಟ್ಟಿಕೊಂಡಿರುವ ಒಳ್ಳೆಯ ಭಾವನೆ ಬೆಳೆಯಲೆಂದು ಬಿಡಬೇಕು. ಈಗಿರುವ ಪರಿಸ್ಥಿತಿಯನ್ನು ಬದಲಾವಣೆ ಮಾಡುವುದರಿಂದ ತೊಂದರೆಯಾಗಬಹುದು. ಈ ಎಲ್ಲ ಕಾರಣಗಳಿಂದ ಈ ನಿರ್ಣಯ ನಮ್ಮ ಮುಂದಿರುವುದು ತಪ್ಪೆಂದೂ ಇದು ಸಾಧುವಲ್ಲವೆಂದೂ, ಇದನ್ನು ಕೈಬಿಡಬೇಕೆಂದೂ ಮಾನ್ಯ ಸದಸ್ಯರನ್ನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೆ, 'ಮೈಸೂರು,' 'ಕರ್ಣಾಟಕ' ಎನ್ನುವ ಹೆಸರಿನ ಮೇಲೆ ಇಷ್ಟೊಂದು ವಾದ ವಿವಾದಗಳನ್ನು ಕೇಳುತ್ತಿದ್ದೇವೆ. ಈಗ ತಾನೇ ಶ್ರೀಮಾನ್ ದೇವರಾಜ ಅರಸಿನವರು ಮೈಸೂರು ಎನ್ನುವ ಹೆಸರೇ ಇರಬೇಕೆಂದು ಕೃಷ್ಣಾವತಾರ, ಕರ್ಣಾವತಾರ, ಭೀಮಾವತಾರಮಾಡಿ ಹೇಳಿದರು. ನಾನಾದರೂ ಮೈಸೂರು ಸುಂದರವಾದ ಹೆಸರು, ಮೈಸೂರು ಎನ್ನುವ ಹೆಸರನ್ನು ಕಳೆದುಕೊಳ್ಳಬಾರದು, ಇದನ್ನಿಟ್ಟುಕೊಂಡಿರಬೇಕು ಎಂದು ಬಹಳ ಜನರೊಡನೆ ವಾದ ಮಾಡುತ್ತಿದ್ದೆ. ಆದರೆ ಕಾಲ, ದೇಶ, ವರ್ತಮಾನ, ಜನರ ಸ್ಥಿತಿಗತಿ ನೋಡುತ್ತ ನನ್ನ ಆ ಅಭಿಪ್ರಾಯ ಬದಲಾಯಿಸಬೇಕಾಯಿತು. ಮೈಸೂರಿನ ವಿಷಯ ಏನೇನೋ ಹೇಳುತ್ತಿದ್ದರು. ನೃಪತುಂಗನೇನೋ ಕರ್ಣಾಟಕ ಎಂದು ಹೇಳಿದ್ದಾನೆ. ಮೈಸೂರು ಎನ್ನುವುದು ಚಿನ್ನದನಾಡು, ಬಣ್ಣದಬೀಡು, ಗಂಧದ ಗುಡಿ, ನಾಲ್ಮಡಿ ಕೃಷ್ಣನ ಮೈಸೂರು ಎಂದೆಲ್ಲ ಹೇಳುತ್ತಿದ್ದರು. ಈಗ ಒಂದೂ ಇಲ್ಲ, ಎಲ್ಲವೂ ಒಂದೊಂದಾಗಿ ಹೊರಟು ಹೋದವು. ಚಿನ್ನದನಾಡು ಎನ್ನುವುದಕ್ಕೆ ಇದ್ದ ಚಿನ್ನವೆಲ್ಲಾ ಹೋಯಿತು; ಬಣ್ಣದ ಬೀಡನ್ನು ಕೇಳುವವರೇ ಇಲ್ಲ; ಗಂಧದ ಗುಡಿ ಏನಾಯಿತೆಂದು ಹೇಳುವವರೇ ಇಲ್ಲ; ನಾಲ್ಮಡಿ ಕೃಷ್ಣನ ಗತಿ ಆಗಿಹೋಯಿತು. ಹೀಗಿರುವಾಗ ಮೈಸೂರು ಎನ್ನುವ ಹೆಸರನ್ನಿಟ್ಟುಕೊಂಡು ಏಕೆ ಅಳಬೇಕೆಂಬ ಪ್ರಶ್ನೆ ನನ್ನ ಮನಸ್ಸಿಗೆ ಬರುತ್ತದೆ.

ಎರಡನೆಯದಾಗಿ, ಹೆಣ್ಣು ಮಕ್ಕಳೇನಾದರೂ ಇಲ್ಲಿ ಮುಂದೆ ಬಂದಿದ್ದರೆ, ಫಸ್ಟ್‌ಕ್ಲಾಸ್ ಗ್ರ್ಯಾಜುಯೇಟುಗಳಾಗಿದ್ದು, ಸಮಾಜದ ಸಂಕೋಲೆಗಳನ್ನು ಕಿತ್ತುಹಾಕುವ ಕೆಲಸದಲ್ಲಿ ಹೆಣ್ಣು ಮಕ್ಕಳೇನಾದರೂ ಕೆಲಸ ಮಾಡಿದ್ದರೆ ಆಗ ಮೈಸೂರಿಗೆ ಕೀರ್ತಿ ಬರುತ್ತಿತ್ತು, ಮೈಸೂರೆಂಬ ಹೆಸರಿಗೆ ಕೀರ್ತಿ ಬರುತ್ತಿತ್ತು, ಇಷ್ಟು ದೊಡ್ಡ ಸಭೆಗೆ ಮೈಸೂರಿನ ಲೆಜಿಸ್ಲೇಟರುಗಳ ಪೈಕಿ ಒಬ್ಬ ಹೆಣ್ಣು ಮಗಳಿಗಿಂತ ಹೆಚ್ಚಾಗಿ ಮಂತ್ರಿಗಳನ್ನು ಮಾಡುವುದಕ್ಕಾಗಲಿಲ್ಲ. ಇನ್ನೊಂದು ವಿಷಯವೇನೆಂದರೆ, ಇದನ್ನು ಮೈಸೂರು ಎಂದು ಹೇಳಬಹುದೋ ಇಲ್ಲವೋ ಗೊತ್ತಿಲ್ಲ. ಬಹಳ ಹೊಟ್ಟೆ ಉರಿಯುತ್ತಿದೆ, ಆದರೂ ಹೇಳಬೇಕಾಗಿದೆ. ಈ ಮೈಸೂರು ಈಗ ಜನಗಳದೂ ಅಲ್ಲ, ರಾಜರದೂ ಅಲ್ಲ, ಒಬ್ಬ ಸ್ವಾಮಿಗಳದ್ದಾಗಿದೆ! (ನಗು!) ಏಕೆ ಹೀಗಾಗಿದೆ ಎಂದು ಯೋಚಿಸಬೇಕು, ಹಿಂದಿನ ಕಾಲದಲ್ಲಿ ರಾಜರು ಅರಮನೆಯಲ್ಲಿ ಕುಳಿತುಕೊಂಡು, ಏನಪ್ಪಾ, ದೇಶದಲ್ಲಿ ಜನರೆಲ್ಲ ಕ್ಷೇಮವೆ? ಎಂದು ಕೇಳುತ್ತಿದ್ದರಂತೆ; ಈಗ ಏನಪ್ಪಾ, ಮುನಿಸಿಪಲ್ ಕೌನ್ಸಿಲರುಗಳೆ, ಲೆಜಿಸ್ಲೇಟರುಗಳೆ, ದೇಶದಲ್ಲಿ ಎಲ್ಲವೂ ಸರಿಯಾಗಿದೆಯೇ, ನಾವು ಮಾಡುವುದೆಲ್ಲಾ ಸರಿಯಾಗಿ ಬರೋಬರಿಯಾಗಿದೆಯೆ, ನಾವು ಮಾಡುವುದಕ್ಕೆ ಶಹಭಾಸ್‌ಗಿರಿ ಬರುತ್ತದೆಯೆ ಎಂದು ಕೇಳುತ್ತಿದ್ದಾರೆ. ಹೀಗಿರುವಾಗ ಇಂಥ ಮೈಸೂರಿನ ಹೆಸರನ್ನಿಟ್ಟುಕೊಂಡು ಪ್ರಯೋಜನವೇನು? ನಿಜವಾಗಿಯೂ ಒಂದು ಕಾಲದಲ್ಲ ಉಚ್ಚ ಮಟ್ಟದಲ್ಲಿದ್ದ ಮೈಸೂರು ಈಗ ಚಕ್ರದ ಅಡಿಗೆ ಬಂದಿದೆ, ಅಧೋಗತಿಗೆ ಬಂದಿದೆ. ಹೀಗಿರುವಾಗ ಕರ್ಣಾಟಕದ ಜನರನ್ನೂ ಈ ಚಕ್ರದ ಅಡಿಗೇಕೆ ಸಿಕ್ಕಿಸಬೇಕು? ಅವರಲ್ಲಿರುವ ಒಳ್ಳೆಯತನವನ್ನು ನಾವೇಕೆ ಕಲಿತುಕೊಳ್ಳಬಾರದು ಎನಿಸುತ್ತದೆ. ನಾವು ಕರ್ಣಾಟಕ ಎನ್ನುವ ಹೆಸರನ್ನಿಟ್ಟುಕೊಂಡು ಅಲ್ಲಿರುವ ಒಳ್ಳೆಯತನವನ್ನಿಟ್ಟುಕೊಳ್ಳೋಣ, ಅವರೊಡನೆ ಹೊಂದಿಕೊಂಡು ಹೋಗುವುದನ್ನು ಕಲಿತುಕೊಳ್ಳೋಣ ಎಂದು ನನ್ನ ಅಭಿಪ್ರಾಯ. ಶ್ರೀಮಾನ್ ದೇವರಾಜ ಅರಸಿನವರು, ಈಗಿರುವ ಹೆಸರೇ ಇರಲಿ ಇದಕ್ಕೆ ತಿದ್ದುಪಡಿ ಏಕೆಮಾಡಬೇಕು ಎಂದು ಹೇಳಿದರು. ನಮ್ಮ ಹೊಲಗದ್ದೆಗಳನ್ನು, ಮನೆ ಮಠಗಳನ್ನು, ಆಸ್ತಿಪಾಸ್ತಿಗಳನ್ನೂ ಕಿತ್ತುಕೊಳ್ಳುವುದಕ್ಕೆ ಎಷ್ಟೋ ತಿದ್ದುಪಡಿಗಳನ್ನು ಮಾಡಿದ್ದಾರೆ. ಹೀಗಿರುವಾಗ ಕರ್ಣಾಟಕವೆಂಬ ಸುಂದರವಾದ ಹೆಸರನ್ನಿಟ್ಟುಕೊಳ್ಳುವುದಕ್ಕಾಗಿ ತಿದ್ದುಪಡಿಯನ್ನು ಮಾಡಿಕೊಳ್ಳಬಾರದೆ? ಹೆಸರಿನಲ್ಲೇನಿದೆ ಎಂದರೆ, ಕರ್ಣಾಟಕ ಎನ್ನುವ ಹೆಸರು ಚೆನ್ನಾಗಿಲ್ಲವೆ? ಇದು ಎಷ್ಟೋ ತಂಪಾಗಿದೆ, ಎಷ್ಟೋ ಇಂಪಾಗಿದೆ! ಮೈಸೂರು ಎನ್ನುವುದನ್ನು ಯಾರೂ ಅಳಿಸುತ್ತಿಲ್ಲ; ಪುಟ್ಟ ಮೈಸೂರು ಇದ್ದೇ ಇರುತ್ತದೆ, ಅದನ್ನು ಕಿತ್ತುಹಾಕುತ್ತಿಲ್ಲ. ಬೇರೆಲ್ಲ ಕಡೆಗಳಿಂದ ಬಂದಿರುವ ಊರುಗಳ ಜೊತೆಗೆ ಇದೂ ಸೇರಿ ಕರ್ಣಾಟಕವಾಗಲೆಂದು ನಾವು ಹೇಳುವುದು. ಎಲ್ಲ ಪ್ರದೇಶಕ್ಕೂ ಮೈಸೂರು ಎಂದಿಡುವುದು ನನಗೆ ಅಷ್ಟು ಸರಿಯಾಗಿ ಕಾಣುವುದಿಲ್ಲ. ಚರಿತ್ರೆಯ ವಿಷಯ ಹೇಳಿದರು, ರಾಮಾಯಣ, ಮಹಾಭಾರತದಲ್ಲಿಯೂ ಏನೂ ಇಲ್ಲ. ರಾಮಾಯಣ ಓದಿದರೆ ಹನುಮಂತ ಕರ್ಣಾಟಕದವನೆ ಎಂದು ಕೇಳುವ ಪ್ರಸಂಗ ಬರುತ್ತದೆಯೆ?

ರಾಮಾಯಣದಲ್ಲೂ ಕರ್ಣಾಟಕ ಎಂಬ ಹೆಸರಿದೆ, ಬೇಕಾದರೆ ತರಿಸಿ ಕೊಡುತ್ತೇನೆ, ಓದಿ ನೋಡಿ. ದಯೆಯಿಟ್ಟು ಎಲ್ಲರೂ ಈ ನಿರ್ಣಯವನ್ನು ಒಪ್ಪಿಕೊಳ್ಳುತ್ತಾರೆಂದು ನಂಬಿಕೊಂಡಿದ್ದೇನೆ. ಇಲ್ಲದಿದ್ದರೆ ಅವರವರ ಭಾವನೆ ಅವರವರಿಗೆ ಇರುತ್ತದೆ. ಅನೇಕ ಜನರ ಭಾವನೆಗನುಗುಣವಾಗಿ ನಮ್ಮ ದೇಶಕ್ಕೆ ಸುಂದರವಾದ ಕರ್ಣಾಟಕ ಎಂಬ ಹೆಸರನ್ನು ಇಡಲು ಅವಕಾಶವಾಗುವಂಥ ಈ ನಿರ್ಣಯಕ್ಕೆ ನಾನು ಅನುಮೋದನೆಯನ್ನಿತ್ತು ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ಕುಳಿತುಕೊಳ್ಳುತ್ತೇನೆ.

†ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲು ತಮಗೆ ವಂದಿ

(ಶ್ರೀ ಜಿ. ದುಗ್ಗಪ್ಪ)

ಸುತ್ತೇನೆ. ಈ ಮಾನ್ಯ ಸಭೆಯಲ್ಲಿ ನಡೆದ ವಾದ ವಿವಾದಗಳನ್ನು ನೋಡಿ ಯೋಚನೆ ಮಾಡಿದರೆ ಈ ಪ್ರಶ್ನೆ ವಾದ ವಿವಾದದಿಂದ, ತರ್ಕದಿಂದ ಬಗೆಹರಿಯ ತಕ್ಕದ್ದಲ್ಲ. ಇದೇ ತಾನೆ ಮಾನ್ಯ ದೇವರಾಜ ಅರಸ್ ರವರು ವಾದಕ್ಕೆ ವಾದ, ಪ್ರಶ್ನೆಗೆ ಪ್ರಶ್ನೆ ಬಹಳಕಾಲ ಇರುವುದಲ್ಲ, ಈ ನಿರ್ಣಯ ಬರತಕ್ಕ ಆವಶ್ಯಕತೆಯೇ ಇಲ್ಲ ಎಂದು ಹೇಳಿದರು. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ಕರ್ಣಾಟಕ ಮತ್ತು ಕನ್ನಡ ನಾಡು ಈ ಬಗ್ಗೆ ಹಿಂದೆ ಏನಾದರೂ ಚಳುವಳಿ ಆಗಿದೆಯೆ, ಇತಿಹಾಸವೇನಿದೆ ಎಂದು ನೋಡಿದರೆ ಕೀರ್ತಿ, ಗೌರವ ಮೈಸೂರಿನವರಿಗೇ ಸಲ್ಲುವುದು. ಇದು ಇವತ್ತಿನ ಪ್ರಶ್ನೆಯಲ್ಲ. ನಾವು ಹುಟ್ಟಿ ಬೆಳೆದ ಮೈಸೂರು ಕನ್ನಡದ ರಸಿಕತೆಗೆ, ಕನ್ನಡದ ಕಾತುರತೆಗೆ ಕನ್ನಡಿಯಾಗಿದೆ. ಬಹಳ ಹಿಂದೆ ನಮ್ಮ ಹಿರಿಯರು ಕನ್ನಡದ ಬಾವುಟವನ್ನು ಏರಿಸಿದರು. ಈ ಕೀರ್ತಿ ಮೈಸೂರಿಗೆ ಸಲ್ಲುವುದು. ಇದುವರೆಗೆ ಕನ್ನಡ ನಾಡು ಎಂದು ಕರೆಯಲು ನಿರ್ಣಯ ತರಲು ಸಾಧ್ಯವಿರಲಿಲ್ಲ. ಹಿಂದೆ ಕನ್ನಡ ನಾಡು, ಕನ್ನಡನುಡಿ ಚಳುವಳಿ ಪ್ರಾರಂಭ ವಾದಾಗ ಶ್ರೀ ಕೆ. ವಿ. ಪುಟ್ಟಪ್ಪನವರ ಕವಿವಾಣಿ ನುಡಿದಾಗ ರಾಜಕಾರಣಿಗಳ ತರ್ಕ ವಿರಲಿಲ್ಲ. ರಾಜ ಕಾರಣಿಗಳಿಗೆ ಕನ್ನಡನಾಡು ಒಂದಾಗಲಿ ಎಂದು ಆ ಕವಿಗಳು ಒಂದು ಕಡೆ ಹೇಳಿದ್ದರು. ಅದರಂತೆ ಒಂದಾಗಿದೆ. ಹಾಗಾದ ಮೇಲೆ ವಾದವಿವಾದ ನಡೆಯುವುದನ್ನು ನೋಡಿ ದರೆ ಇದೊಂದು ದುರಂತ, tragedy ಎಂದು ಹೇಳಬೇಕಾಗಿದೆ. ಕನ್ನಡನಾಡಿನ ನಿರ್ಮಾಣದಲ್ಲಿ, ಬೆಳವಣಿಗೆಯಲ್ಲಿ ಈ ದುರಂತವಿರಲಿಲ್ಲ. ಹೆಸರು ಬದಲಿಸುವಾಗ ವಾದವಿವಾದ ನೋಡಿ ಕನ್ನಡ ಮಾತೆ ಮಲಮಲನೆ ಮರುಗುತಿಹಳು. ಈಗ ವಾದ ವಿವಾದ ಮಾಡುವ ಪ್ರಶ್ನೆಯಿಲ್ಲ. ಇವತ್ತು ಮೈಸೂರಿಗೆ ಮೈಸೂ ರಿನ ರಾಜಕಾರಣಿಗಳು ಹೆಸರಾಗಿದ್ದಾರೆ. ಎಂಥ ಜಟಿಲ ಪ್ರಶ್ನೆಯನ್ನೂ ಸಹ ನಾಲ್ಕು ಜನರು ಕಲೆತು ವಿಮರ್ಶೆಮಾಡಿ ಸರ್ವಾನುಮತದ ಒಂದು ನಿರ್ಣಯಕ್ಕೆ ಬರಲು ಹೆಸರುವಾಸಿಯಾಗಿದ್ದಾರೆ. ಈ ದಿವಸ ಮುಖಂಡರು ಇಲ್ಲಿ ಸೇರಿ ಸರ್ವಾನುಮತದಿಂದ ಒಂದು ನಿರ್ಣಯಕ್ಕೆ ಅಂಗೀಕಾರ ನೀಡಬೇಕಾಗಿದೆ. ಈ ನಿರ್ಣಯವನ್ನು ಓಟಿಗೆ ಹಾಕಿ ಹತ್ತು ಜನ ಒಂದು ಕಡೆ, ಎಂಟು ಜನ ಒಂದು ಕಡೆ ಓಟು ಮಾಡುವ ಪ್ರಶ್ನೆ ಇದಲ್ಲ. ಒಪ್ಪಿರುವ ಹೆಸರನ್ನಿಡುವುದಕ್ಕೆ ವಾದ ಮಾಡುವುದು ನಿಜವಾಗಿಯೂ ಒಂದು ದುರಂತ. ನಮ್ಮ ಮುಂದಿನ ಪೀಳಿಗೆ ಹಿಂದಿನ ಚರಿತ್ರೆ ನೋಡಿದಾಗ ಕನ್ನಡ ಮಾತನಾಡುವವರು ಹೆಸರಿಗಾಗಿ ಇಷ್ಟೊಂದು ಕಳವಳ ವ್ಯಕ್ತಮಾಡಿದ್ದಾರೆಂದು ಹೇಳಿದರೆ ನಾವು ತಲೆ ಬಾಗಬೇಕು. ಹಿಂದೆ ಕೆಲವು ಕಡೆ ಕನ್ನಡ ಮಾತ ನಾಡುವುದಕ್ಕೆ, ಕನ್ನಡ ಭಾಷೆಗೆ ಅವಕಾಶವೇ ಇರಲಿಲ್ಲ, ಕನ್ನಡದ ಸೇವೆಗೆ ಅವಕಾಶವಿರಲಿಲ್ಲ, ಮರಾಠಿಯಲ್ಲಿ ಮಾತನಾಡದಿದ್ದರೆ ಕೂಳೇ ಹಾಕಬೇಡ ಎಂದು ಹೇಳು ತ್ತಿದ್ದರು ಎಂಬುದಾಗಿ ಮುದವೀಡು ಕೃಷ್ಣರಾಯರು ಹೇಳುತ್ತಿದ್ದರು. ಈಗ ವಾದವಾಗಬಹುದು. ಆದರೆ ವಾದ, ತರ್ಕ ಯಾವುದೂ ನಿಲ್ಲುವುದಿಲ್ಲ; ಯುಗ ವಾಣಿಯು ಪರವಾಗಿದೆ; ಹೆಸರಿನ ಬಗ್ಗೆ ಇಷ್ಟು ವಾದ ಮಾಡುವುದು ಬೇಡ. ಈ ಸಂದರ್ಭದಲ್ಲಿ ನಡೆದ ಒಂದು ಪ್ರಸಂಗವನ್ನು ಹೇಳಬೇಕಾಗಿದೆ. ನನ್ನ ಸ್ನೇಹಿತ ರೊಬ್ಬರು "ದುಗ್ಗಪ್ಪನವರೇ, ನಿಮ್ಮ ಅಭಿಪ್ರಾಯ ವೇನು" ಎಂದು ಕೇಳಿದರು. ಅವರು "ಕರ್ಣಾಟಕ ವೆಂದು ಹೆಸರಿಡುವುದು ನಿಮ್ಮ birth right" ಎಂದು ಹೇಳಿದರು. ನಾನು ಹಾಗೆಯೇ ಯೋಚನೆ ಮಾಡಿದೆ. ನಾನು ಹುಟ್ಟುವುದಕ್ಕೆ ಮುಂಚೆಯೇ ನನ್ನ ಮನೆ ಯವರನ್ನು ಅದಿಕರ್ಣಾಟಕರೆಂದು ಕರೆಯುತ್ತಿದ್ದರು, ಆ ಹೆಸರು ನಮಗೆ ಬಂದಿತ್ತು. ಅದುವರೆಗೆ ಈ ವಿಚಾರ ಹೊಳೆದೇ ಇರಲಿಲ್ಲ. ಆದಿಮೈಸೂರು ಎಂದು ನಮ್ಮನ್ನು ಕರೆಯಬಹುದಾಗಿತ್ತು. ಹಾಗೆ ಮಾಡದೆ ಆದಿಕರ್ಣಾಟಕ ಎಂದು ಕರೆದರು. ಆದರೆ ಯಾವ ಒಂದು ಕೋಮಿಗೂ ನಾಡಿನ ಹೆಸರು, ನದಿ ಹೆಸರು ಇಲ್ಲ. ಆದರೆ ನಮ್ಮ ಕೋಮಿಗೆ ಇದೆ. ಇದನ್ನು ಸಂಕುಚಿತ ದೃಷ್ಟಿಯಿಂದ ಹೇಳುವುದಿಲ್ಲ. ಆದಿಕರ್ಣಾಟಕ ಎಂಬ ಹೆಸರು ನನ್ನ ಕೋಮಿಗೆ ಇರುವುದು ಒಂದು ಹೆಮ್ಮೆಯ ಮಾತು. ಶ್ರೀ ದೇವರಾಜ ಅರಸರು ಹೇಳಿದಹಾಗೆ ನಮ್ಮ ಈ ಒಂದು ಸಭೆಯ ತೀರ್ಮಾನವೇ ಅಖೈರಲ್ಲ, ಕೊನೆಯದಲ್ಲ. ಈ ಸಭೆ ಶಿಫಾರ್ಸು ಮಾಡುವುದು ಆ ಮೇಲೆ ಪಾರ್ಲಿಮೆಂಟ್ ಒಂದು ತೀರ್ಮಾನ ತೆಗೆದು ಕೊಂಡು ಕೊನೆಯಲ್ಲಿ ಒಂದು ರೂಪಕ್ಕೆ ಬರುತ್ತದೆ. ಈಗ ಎಷ್ಟೇ ವಿರೋಧಿಸಲಿ ಅಥವಾ ಬೆಂಬಲ ಕೊಡಲಿ, ನಮ್ಮಿಂದ ರಾಜ್ಯವಾಯಿತು ಅಥವಾ ಕರ್ಣಾಟಕ ಒಂದಾಯಿತು ಎಂಬ ಹೆಮ್ಮೆ ಬೇಡ. ಬಹುಶಃ ಇಂಥ ತೀರ್ಮಾನದಿಂದ ಜನರಿಂದ ಇಂಥ ಮಾತುಗಳಿಂದ ಅಥವಾ ಇಷ್ಟು ಲಘುವಾಗಿ, ಬಹಿರಂಗವಾಗಿ ಹೇಳು ವುದರಿಂದ ಆಗುವ ಕೆಲಸಗಳಿಗೆ ಆತಂಕವಾದರೂ ಆಗ ಬಹುದು, ಶಂಕೆ ಬಂದರೂ ಬರಬಹುದು. ನಮ್ಮಿಂದ ಆಯಿತು, ನಾವೇ ಮಾಡಿದೆವು, ನಮ್ಮದೇ ರಾಜ್ಯ ಎಂದು ಹೇಳುವುದು ಉಚಿತವಲ್ಲ. ರಾಜ್ಯ ಪ್ರತಿಯೊಬ್ಬರಿಗೂ ಸೇರಿದ್ದು, ಯಾರದೂ ಸ್ವಂತ ಹಕ್ಕಲ್ಲ. ಈ ದೇಶದಲ್ಲಿ ವಾಸಮಾಡುವ ಪ್ರತಿಯೊಬ್ಬರಿಗೂ ಹಕ್ಕಿದೆ. ಹಾಗಿರು ವಾಗ ಯಾರೂ ಕೂಡ ನಾನು ಮಾಡಿದೆ, ನಾನು ಕಟ್ಟಿದೆ ಎಂದು ಹೇಳುವುದು ಬೇಡ. ಶ್ರಮಿಸಿದವರು ಬೇಕಾ ದಷ್ಟು ಮಂದಿ ಇದ್ದಾರೆ. ತಾವೇ ಮಾಡಿದುದಾಗಿ ಹೇಳುವುದರಿಂದ ಅಡ್ಡಿ ಆತಂಕ ಬಂದೀತು. ಕರ್ಣಾಟಕ ಪ್ರಾಂತ ರಚನೆಯಾಗುವಾಗ ನಾನೂ ಇದ್ದೆ, ಸಭೆಯ ಅನುಮತಿ ಪಡೆದು ದೇಶ ರಚನೆ ಮಾಡಿದರು. ಇಲ್ಲಿಯವರೆಗೆ ಅದು ನಡೆದು ಬಂದಿದೆ. ಇದುವರೆಗೆ ಇಂಥ ಸಂದರ್ಭ ಬಂದಿರಲಿಲ್ಲ. ಬಹಳ ಉದ್ರೇಕಭಾವನೆ ಹಿಂದೆ ಇತ್ತು. ಈಗ ಅದು ಹೋಗಿ ಶಾಂತ ವಾತಾವರಣವಿದೆ, ತಿಳಿಯಾಗಿದೆ. ಮತ್ತೆ ವಿವಾದಕ್ಕೆ, ವಿಕಾರಕ್ಕೆ ಆಸ್ಪದ ಕೊಡುವುದು ಬೇಡ.

ಈಗ ತಾವೆಲ್ಲ ಮಾನ್ಯ ಸದಸ್ಯರೂ ದೊಡ್ಡ ಮನಸ್ಸು ಮಾಡಿ, ಇದನ್ನು ವೋಟಿಗೆ ಹಾಕಿ ಬಹುಮತದಿಂದ ಇದು ಪಾಸಾಯಿತು ಅಥವಾ ಬಹುಮತವಿಲ್ಲದೆ ಬಿದ್ದು ಹೋಯಿತು ಎನ್ನಿಸುವುದಕ್ಕಿಂತ ಇದನ್ನು ಓಟಿಗೆ ಹಾಕ ವುದಕ್ಕೆ ಅವಕಾಶ ಕೊಡದೆ ಒಂದು ಸರ್ವಾನುಮತದ ತೀರ್ಮಾನ ತೆಗೆದುಕೊಳ್ಳುವಂತೆ ಮಾಡುವುದು ಬಹಳ ಸೂಕ್ತ. ಹೆಸರಿನ ಬಗ್ಗೆ ಹೇಳುವುದಾದರೆ, 'ಮೈಸೂರು' ಎಂಬುದು ನಮಗೆ ಹೆಮ್ಮೆಯಾಗಿದೆ. ಮೈಸೂರಿನ ಮಕ್ಕಳು ನಾವು. ನಮ್ಮ ದೇಹ ಬೆಳೆದು ಬಂದಿರ ತಕ್ಕದ್ದು ಮೈಸೂರಿನಲ್ಲಿ. ಅಂಥವರಿಗೆ ಮೈಸೂರೆಂಬ ಹೆಸರು ಹೆಮ್ಮೆಯೆಂದರೆ ಹೆಚ್ಚಲ್ಲ. "ಏನು ನಾಡು ನಮ್ಮ ನಾಡು..............ಮುತ್ತಿಡುವ" ಎಂದು ಕವಿ ಹೇಳಿದ್ದಾನೆ. ಆದ್ದರಿಂದ ಇದನ್ನೇ ಇಟ್ಟು ಕೊಳ್ಳೋಣ ಅಥವಾ ಮದ್ರಾಸಿನವರು ಈ ವಿಚಾರದಲ್ಲಿ ಒಂದು ದಾರಿ ತೋರಿಸಿದ್ದಾರೆ; ಆ ರೀತಿ ಮಾಡಿದರೂ ನಮಗೆ ಅನುಕೂಲವಾಗಬಹುದು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಚನ್ನಬೈರೆಗೌಡ (ಹೊಸಕೋಟೆ).—ಈಗ ನಮ್ಮ ಮಿತ್ರರಾದ ಶ್ರೀ ಆರ್. ಎಸ್. ಪಾಟೀಲರು ತಂದಿರುವ ಈ ನಿರ್ಣಯವನ್ನು ಈ ಸಂದರ್ಭದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕಿಂತ ಅದನ್ನು ವಾಪಸು ತೆಗೆದುಕೊಳ್ಳುವುದು ಒಳ್ಳೆಯದು. ಹೊಸ ದಾಗಿ ಈ ರಾಜ್ಯವಾಗಿ, ಅವರೂ ನಾವೂ ಬದುಕಿ ಬಾಳುವ ರೀತಿ ಕಂಡುಕೊಳ್ಳುವ ಈ ಸಮಯದಲ್ಲಿ, ಅವರು ವಾತಾವರಣವನ್ನು ಕಲಸಿ ವಿಷವನ್ನು ತುಂಬುವ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ ದಯವಿಟ್ಟು ಅವರು ಈ ನಿರ್ಣಯವನ್ನು ವಾಪಸು ತೆಗೆದುಕೊಂಡು ಎಲ್ಲರೂ ಸುಖವಾಗಿ ಬದುಕಿ ಬಾಳು ವಂತೆ ಮಾಡಬೇಕೆಂದು ನಾನು ಅವರನ್ನು ವಿನಯ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ಹೊಸದಾಗಿ ಮೈಸೂರಿಗೆ ಬಂದವರು ಮೈಸೂರನ್ನು ಕರ್ನಾಟಕವೆಂದು ಹೇಳಬೇಕೆಂದು ವಾದ ಮಾಡುವುದಕ್ಕೆ 'ಕರ್ನಾಟಕ' ವೆನ್ನುವುದು ಯಾವ ಚರಿತ್ರೆಯಲ್ಲೂ ಬಂದಿಲ್ಲ. ಮೈಸೂರಿಗಾದರೋ ಒಂದು ಇತಿಹಾಸವಿದೆ; ಒಂದು ಹಿನ್ನೆಲೆಯಿದೆ; ಆ ಹೆಸರಿಗೆ ಒಂದು ಪವಿತ್ರತೆಯಿದೆ. ಪ್ರಪಂಚದ ಎಲ್ಲಾ ಕಡೆಯಲ್ಲೂ ಮೈಸೂರು ಕೀರ್ತಿ ಪಡೆದಿರತಕ್ಕ ಹೆಸ ರಾಗಿದೆ. ಅಂಥ ಹೆಸರನ್ನು ಈಗ ಬಿಡುವುದೇ! ಈಗ ಕರ್ನಾಟಕವೆಂದು ಒಂದು ಹೊಸ ರಾಜ್ಯವಾದರೂ ಆ ರಾಜ್ಯಕ್ಕೆ ಯಾವ ಹೆಸರಿಡಬೇಕೆಂಬ ಪ್ರಶ್ನೆ ಉದ್ಭವಿ ಸುತ್ತದೆ. 'ಕರ್ನಾಟಕ' ಎಂಬ ಹೆಸರು ಹಿಂದೆ ಇರಲೇ ಇಲ್ಲ. ಮೈಸೂರಿಗೆ ಹೈದರಾಬಾದಿನ ಕೆಲವು ಭಾಗಗಳು, ಕೊಡಗಿನ ಕೆಲವು ಭಾಗಗಳು ಹೀಗೆ ಭಾಗ ಭಾಗಗಳು ಬಂದು ಸೇರಿ ಒಂದಾಗಿರುವುದರಿಂದ ಅದಕ್ಕೆ ಮೊದಲಿದ್ದ ಹೆಸರೇ ಹೊರಟುಹೋಗು ತ್ತದೆಯೆ? ಒಂದು ಸ್ಟುಡಿಬೇಕರ್ ಕಾರ್ ಇರುತ್ತೆ. ಅದನ್ನು ಮಾಡಲು ಇಂಗ್ಲೆಂಡಿನ ಒಂದು ಕಂಪೆನಿ ಯಿಂದ ಕೆಲವು ಸ್ಪೇರ್ ಪಾರ್ಟ್‌ಗಳನ್ನು ತರಿಸಿ ಅದಕ್ಕೆ ಸೇರಿಸಿದಾಕ್ಷಣ ಅದರ ಹೆಸರೇ ಬದಲಾವಣೆಯಾಗು ತ್ತದೆಯೇ? ಷವರ್‌ಲೆಟ್ ಸ್ಪೇರ್ ಪಾರ್ಟ್ ಸೇರಿ ಸಿದರೆಂದು, ಸ್ಟುಡಿಬೇಕರ್ ಕಾರನ್ನು ಷವರ್‌ಲೆಟ್ ಎಂದು ಕರೆಯುವುದೇ? ಗಂಗಾನದಿಯ ವಿಚಾರ ಒಬ್ಬ ಸದಸ್ಯರು ಹೇಳಿದರು. ಗಂಗಾನದಿ ಸಮುದ್ರಕ್ಕೆ ಸೇರಿದಮೇಲೆ ಹೆಸರು ಬದಲಾಯಿಸುತ್ತದೆಯೇ! ಇಲ್ಲಿ ಗಂಗಾನದಿ ಸಮುದ್ರಕ್ಕೆ ಸೇರುವ ಪ್ರಶ್ನೆಯೇ ಬಂದಿಲ್ಲ. ಇನ್ನೊಬ್ಬ ಸದಸ್ಯರು "ಮೈಸೂರಿನ ಹೆಸರನ್ನು ಬದಲಾಯಿಸದೆ ಇದ್ದರೆ ಇದೇ ಅಸೆಂಬ್ಲಿ ಹಾಲಿನಲ್ಲಿ ವಿಷ ತೆಗೆದುಕೊಂಡು ಸಾಯುತ್ತೇ ನೆಂದರು." ಒಂದು ದಿನಕ್ಕೆ ಎಷ್ಟು ಮಂದಿ ಸಾಯು ವರೋ! ಯಾರ್ಯಾರು ಎಷ್ಟು ದಿವಸ ಬದುಕಿರಬೇಕೋ ಅಷ್ಟು ದಿವಸ ಬದುಕಿರುತ್ತಾರೆ. ಆದ್ದರಿಂದ ಇದೇನು ಪ್ರಮಾದದ ವಿಷಯ! 'ಕರ್ನಾಟಕ' ಎಂಬುದು ಎಲ್ಲಿ ಬಂದಿದೆ? ಎಷ್ಟು ದಿವಸದಿಂದ ಬಂತು? 1952ನೆಯ ಇಸವಿಯಲ್ಲಿ ಬಂದ ಒಂದು ಹೆಸರಿದು. ಅದೂ ಸಾಹಿತಿ ಗಳಿಂದ. ಸಾಹಿತಿಗಳು ಹೊಗಳುಭಟ್ಟರು. ಬಹು ಮಾನ ಹೊಂದುವುದಕ್ಕೆ ಹೇಳಿದ್ದು. ಅಷ್ಟೇ ಹೊರತು, ಕರ್ನಾಟಕ' ಎನ್ನುವುದಕ್ಕೆ ಅರ್ಥವಿಲ್ಲ. 'ಮೈಸೂರು', ಎಂಬುದಕ್ಕಾದರೋ ಇತಿಹಾಸದ ಹಿನ್ನೆಲೆಯಿದೆ. ಬೊಂಬಾಯಿನಲ್ಲಿ ಹೋಗಿ ಯಾವ ಸೈಕಲ್ ಷಾಪನ್ನು ಕೇಳಿ, ಯಾವ ಸೆಕ್ಯೂರಿಟಿಯೂ ಇಲ್ಲದೆ ನಿಮಗೆ ಸೈಕಲ್ ಕೊಡುತ್ತಾನೆ. ಅದೇ ಹೈದರಾಬಾದಿನವನು ಹೋಗಿ ಕೇಳಲಿ, 'ಜಾಮೀನು ಕೊಡಿ' ಎನ್ನುತ್ತಾನೆ. ಮದ್ರಾಸಿನವನು ಕೇಳಿದರೆ ಇಬ್ಬರು ಸೆಕ್ಯೂರಿಟಿ ಕೊಡ ಬೇಕಾಗುತ್ತದೆ. ಇಂಥ ಹೆಸರು ಗಳಿಸಿರುವ ಮೈಸೂರಿನ ಹೆಸರನ್ನು ಮುಂದುವರಿಸುವುದರಿಂದೇನೂ ನಷ್ಟವಿಲ್ಲ. ಏನೂ ಅಡ್ಡಿ ಆತಂಕಗಳು ಬರುವುದಿಲ್ಲ. ಕಾಶ್ಮೀರ ಇಂಡಿಯಾ ದೇಶಕ್ಕೆ ಸೇರಿದಾಕ್ಷಣ ಇಂಡಿಯಾ ದೇಶದ ಹೆಸರು ಬದಲಾವಣೆಯಾಗುತ್ತದೆಯೆ? ಹಾಗೆಯೇ ನಮ್ಮ ಮೈಸೂರು ದೇಶಕ್ಕೆ ಯಾವುದೋ small pocketಗಳು ಸೇರಿತೆಂದು ನಮ್ಮ ಹೆಸರು ಬದಲಾಯಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಇಂಥ ಸಮಸ್ಯಾತ್ಮಕವಾದ ನಿರ್ಣಯವನ್ನು ಮಾನ್ಯ ಸದಸ್ಯರು ವಾಪಸು ತೆಗೆದುಕೊಂಡರೆ ದೇಶದಲ್ಲಿ ಒಳ್ಳೆಯ ವಾತಾವರಣ ಬೆಳೆಯುತ್ತದೆ. ಈಗ ನಿರ್ಣಯ ತಂದು ಕಲುಷಿತ ವಾತಾವರಣವನ್ನುಂಟು ಮಾಡುವುದು ಬೇಡ. ಏನೋ ನಿರ್ಣಯ ಕಳುಹಿಸಬೇ ಕೆಂದು, 'ಹೆಚ್ಚು ಜನ ಬೇಕಾಗಿಲ್ಲ; ಒಂದು ಕೋಟಿಗೆ ಒಂದು ರಾಜ್ಯ ಸ್ಥಾಪನೆ ಮಾಡಲಿ' ಎಂದು ನಿರ್ಣಯ ಕಳುಹಿಸಿ ಬಿಟ್ಟರೆ ಇಲ್ಲಿ ಜನ ಏನು ಯೋಚನೆ ಮಾಡುತ್ತಾರೆ? ಹೀಗಾದರೆ ನಾವು ರಾಜ್ಯ ಕಟ್ಟುವುದು ಯಾವಾಗ? ನಾವೂ ನೀವೂ ಒಂದು ಎಂಬ ಭಾವನೆ ಬರುವುದು ಯಾವಾಗ? ಇಷ್ಟಕ್ಕೆಲ್ಲಾ ಅವಕಾಶ ಕೊಡದೆ ಮಾನ್ಯ ಪಾಟೀಲರು ಇದನ್ನು ವಾಪಸು ತೆಗೆದುಕೊಳ್ಳಬೇಕು. ಅಲ್ಲದೆ ಈ ನಿರ್ಣಯವು ಪಾಸಾದರೂ ಇದು ಪ್ರೆಸಿ ಡೆಂಟರಿಗೆ ಹೋಗಿ ಅಲ್ಲಿಂದ ಮತ್ತೆ ಲೆಜಿಸ್ಲೇಚರ್ ಮುಂದೆ ಬರಬೇಕು. ಅದಕ್ಕೆ ಎರಡು ಮೂರು ವರ್ಷ ವಾಗುತ್ತೆ. ಅಷ್ಟು ಹೊತ್ತಿಗೆ ಈ ವಿಷ ಬೀಜ ವೃಕ್ಷ ವಾಗುತ್ತದೆ. ಮುಂದಿನ ಜನಾಂಗದಲ್ಲಿ ರಕ್ತಪಾತ ವಾಗುತ್ತದೆಂಬುದು ಖಂಡಿತ. ಹಳೆಯ ಮೈಸೂರಿನವ ರನೇಕರು ಚಳವಳಿ ಹೂಡುವುದರಲ್ಲಿ ಅಡ್ಡಿಯಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಣಯದ ಸೂಚಕರು ನಿರ್ಣಯವನ್ನು ವಾಪಸು ತೆಗೆದುಕೊಂಡು ಸಹಾಯ ಮಾಡಬೇಕು. ಕಾಂಗ್ರೆಸಿನವರೂ ಇದಕ್ಕೆ ಸಹಾಯಕರಾಗಿ, ಮುಖ್ಯ ಮಂತ್ರಿಗಳು ಮನಸ್ಸು ಮಾಡಿ ಈ ವಿಷದ ಬೀಜ ಮೈಸೂರಿನಲ್ಲಿ ಬೆಳೆದು ದುಷ್ಪರಿ ಣಾಮಗಳುಂಟಾಗದಿರುವಂತೆ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

†ಶ್ರೀ ತಾವರೆ ಫಕೀರಪ್ಪ ಸಿದ್ದಪ್ಪ (ಷಿಗ್ಗಾಂವ್).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಪಾಟೀಲ್‌ರವರು ತಂದಂಥ ಈ ಸೂಚನೆಯನ್ನು ಅನುಮೋದಿಸುತ್ತ ನನ್ನ ಅಭಿಪ್ರಾಯಗಳನ್ನು ಸಭೆಯ ಮುಂದಿಡ ಬಯ ಸುತ್ತೇನೆ. ಈ ಸಭೆಯಲ್ಲಿ ನಡೆದಿರುವ ಚರ್ಚೆಯನ್ನು ನೋಡಿದರೆ ಎರಡು ಪ್ರಣಾಲಿಯ ವಿಚಾರದ ಜನಗಳು ನಮಗೆ ಕಾಣಬರುತ್ತಿದ್ದಾರೆ. ಒಬ್ಬರು ಮೈಸೂರೆಂದೇ ಹೆಸರಿಡಬೇಕೆಂದು ಹೇಳಿಕೊಂಡು ಬಂದಿದ್ದಾರೆ. ಕರ್ನಾಟಕ ವಾದಿಗಳು ಅದನ್ನು ಕೇಳಿದ ಕೂಡಲೆ ಕಿವಿ ತುಂಬ ಬೆರಳು ಹಾಕಿಕೊಳ್ಳುತ್ತಿದ್ದರು. 'ಕರ್ನಾಟಕ' ವೆಂದ ಕೂಡಲೇ ಮೈಸೂರಿನ ಜನ ಕಿವಿ ಮುಚ್ಚಿ ಕೊಳ್ಳುತ್ತಿದ್ದರು. ಈ ರೀತಿ ನಿದ್ದೆ ಹತ್ತಿದವರನ್ನು 'ಟಕ್' ಎಂದು ಬೆಲ್ ಹೊಡೆದು ಎಬ್ಬಿಸುತ್ತಿತ್ತು. ಇಂಥ ಎರಡೂ ತೆರದ ದೃಶ್ಯವನ್ನು ಜುಗುಪ್ಸೆಯಿಂದ ನಾವು ನೋಡುತ್ತಿದ್ದೇವೆ. ಈ ರೀತಿ ಹೋಗುವುದನ್ನು ಬಿಟ್ಟು ಎರಡೂ ಕಡೆಯ ವಾದಗಳನ್ನೂ ಪರಸ್ಪರ ಅರ್ಥ ಮಾಡಿಕೊಂಡು ಯೋಗ್ಯವಾದ ರೀತಿಯಲ್ಲಿ ಹೋಗುವ ಪ್ರವೃತ್ತಿ ನಮ್ಮಲ್ಲಿ ಬೆಳೆದು ಬರಬೇಕೆಂದು ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

5-00 P.M.

ಅನೇಕ ಮಾನ್ಯ ಸದಸ್ಯರು ಈ ಹೊತ್ತು ಒಂದು ಭಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಮೈಸೂರೆಂಬ

(ಶ್ರೀ ತಾವರೆ ಪಕೀರಪ್ಪ ಸಿದ್ಧಪ್ಪ)

ಹೆಸರಿನ ಮೇಲೆ ಇಂದು ಗದಾಪ್ರಹಾರವೇ ನಡೆಯುತ್ತಿದೆ; ಕರ್ನಾಟಕ' ಎಂಬ ಹೆಸರನ್ನು ಒತ್ತಾಯದಿಂದ ಹೇರುತ್ತಿದ್ದಾರೆ ಎಂದು ಅವರು ಹೇಳಿದರು. ಅವರಿಗೆ ಇಷ್ಟೇ ನನ್ನ ವಿನಂತಿ. 'ಕರ್ನಾಟಕ' ಎಂಬ ಹೆಸರನ್ನು ತಮ್ಮ ತಲೆಯಮೇಲೆ ಯಾರೂ ಹೇರುತ್ತಿಲ್ಲ. ಇದ್ದುದನ್ನು ಹೊರಕ್ಕೆ ತರುತ್ತಿದ್ದೇವೆ ಅಷ್ಟೆ. ಅದಕ್ಕೆ ಪ್ರಕಾಶ ಕೊಡುತ್ತಿದ್ದೇವೆ; ಜಾಜ್ವಲ್ಯಮಾನವಾಗಿ ಮಾಡುತ್ತಿದ್ದೇವೆಯೇ ಹೊರತು ಒತ್ತಾಯಮಾಡಿ ಇಡುತ್ತಿಲ್ಲ. ಹೇಗೆಂದರೆ ನೃಪತುಂಗ ಮಹಾಕವಿ ಕರ್ನಾಟಕದ ಬಗ್ಗೆ ವರ್ಣನೆ ಮಾಡುತ್ತಾ ಕರ್ನಾಟಕದ ಎಲ್ಲೆ "ಕಾವೇರಿಯಿಂದ ಗೋದಾವರಿ ವರಮಿರ್ದ ನಾಡದಾ ಕನ್ನಡದೋಳ್" ಎಂದು ಹೇಳಿದ್ದಾನೆ. ಇದನ್ನು ನೋಡಿದರೆ ದಕ್ಷಿಣ ಕನ್ನಡದಲ್ಲಿ ಕಾವೇರಿಯಿಂದ ಉತ್ತರದಲ್ಲಿ ಗೋದಾವರಿವರೆಗೆ ಈ ಒಂದು ಕರ್ನಾಟಕ ರಾಜ್ಯ ಹಬ್ಬಿತ್ತು. ಮೈಸೂರು ರಾಜ್ಯವೂ ಸಹ ಆವತ್ತು ಇದರೊಳಗೆ ಆವರಿಸಿಕೊಂಡಿತ್ತು ಎಂಬ ಮಾತು ನಮ್ಮೆಲ್ಲರಿಗೂ ಸ್ಪಷ್ಟವಾಗಿ ಕಾಣುತ್ತದೆ. ಅದಕ್ಕೆ ಬೇಕಾದಷ್ಟು ಕಾರಣಗಳಿವೆ. ದೇಶ ಪರಕೀಯರ ದಾಳಿಗೆ ತುತ್ತಾದಮೇಲೆ ರಾಜ್ಯ ಒಡೆದು ವಿಚ್ಛಿನ್ನವಾಯಿತು. ಹಾಗೆಯೇ ಮೈಸೂರು, ಕೊಡಗು, ಹೈದರಾಬಾದು, ಬೊಂಬಾಯಿ ರಾಜ್ಯಗಳೆಲ್ಲವೂ ಒಡೆದುಹೋಯಿತು. ಆ ಭಾಗದಲ್ಲಿದ್ದಂತಹ ಸಹೋದರರು, ಅಣ್ಣತಮ್ಮಂದಿರು ತಮಗೆ ಪ್ರೇಮ, ಪ್ರೀತಿ, ವಿಶ್ವಾಸ ತೋಚಿದಂತೆ ಒಂದು ಹೆಸರನ್ನು ಕೊಟ್ಟರು. ಹಿಂದೆ ಆ ರೀತಿ ಮೈಸೂರು ಎಂಬ ಒಂದು ಪ್ರೀತಿಯ ಶಬ್ದ ಸೇರಿತ್ತು; ಆ ರೀತಿ ಸೇರಿರುವುದರಿಂದ ಯಾರಿಗೂ ಜಿಗುಪ್ಸೆ ಇಲ್ಲ, ಕೆಟ್ಟ ವಾತಾವರಣವೇನೂ ಇಲ್ಲ. ನಮಗೆ ಬೇಕಾದ ರೀತಿಯಲ್ಲಿ ಒಂದು ಪ್ರೀತಿಯ ಶಬ್ದವನ್ನು ಇಟ್ಟುಕೊಂಡು ಹೋಗುವಹಾಗೆ ಬಂತು. ಆ ರೀತಿ ಒಂದು ಪ್ರೀತಿಯ ಹೆಸರು ಆಯಿತು. ಪೂರ್ವದಲ್ಲಿದ್ದ ಹಾಗೆ ನಮ್ಮ ನಾಡಿನ ಹೆಸರನ್ನು ಕರೆಯುವುದರಿಂದ ನಮ್ಮೆಲ್ಲರಿಗೂ ಆನಂದ ಮತ್ತು ಒಂದು ಹೆಮ್ಮೆ ಆಗಿದೆ. ಸುಮ್ಮನೆ ಯಾವಾಗಲೂ ಹೆಸರಿಗೆ ಅಂಟಿಕೊಂಡು ನಾವು ಕೂಡಬಾರದು ಎಂದು ಕೆಲವರು ಹೇಳುವುದು ಸರಿಯಲ್ಲವೆಂದು ನಾನು ವಿನಂತಿಸುತ್ತೇನೆ. ಇನ್ನು ಮಾನ್ಯ ಸದಸ್ಯರೆಲ್ಲರೂ ಅಣ್ಣತಮ್ಮಂದಿರಿದ್ದ ಹಾಗೆಯೇ. ಈಗ ನಿಮ್ಮ ನಿಮ್ಮ ಜವಾಬ್ದಾರಿ, ಹೊಣೆ ಇಟ್ಟುಕೊಂಡು ಮಾತನಾಡಬೇಕಾಗಿರುತ್ತದೆ. ಆದರೆ ಸುಮ್ಮನೆ ಉದ್ದಕ್ಕೂ ಭಾವೋದ್ರೇಕವಾಗಿ ಅಥವಾ ಭಾವನಾಪರವಶರಾಗಿ ಈ ಬಗ್ಗೆ ಮಾತನಾಡುವುದರಿಂದ ಏನು ಪ್ರಯೋಜನ? ಒಂದಕ್ಕೊಂದು ಜಟಿಲವಾಗುತ್ತದೆಯೇ ಹೊರತು ಮತ್ತೇನೂ ಇಲ್ಲ. ಸರ್ಕಾರದವರು ಈ ಸಂದರ್ಭದಲ್ಲಿ ತಾವು ಎಷ್ಟು ಜವಾಬ್ದಾರಿ ಸ್ಥಾನದಲ್ಲಿದ್ದೇವೆಂಬುದನ್ನು ಮನಗಾಣಬೇಕು. ಲಕ್ಷಾಂತರ ಜನಗಳ ಪ್ರತಿನಿಧಿಗಳಾಗಿ ನಾವು ಇಲ್ಲಿಗೆ ಬಂದಿದ್ದೇವೆ. ಜನಸಾಮಾನ್ಯರು ಇದನ್ನೆಲ್ಲಾ ಕಣ್ಣು ತೆರೆದು ನೋಡುತ್ತಿದ್ದಾರೆ. ತೂಕ ತಪ್ಪಿ ಆಡುವುದು ಸರಿಯಲ್ಲ. ಜನಸಾಮಾನ್ಯರು ತಪ್ಪುದಾರಿಯಲ್ಲಿ ಸರ್ಕಾರ ನಡೆಯುತ್ತಿದೆ ಎಂದು ಹೇಳುವ ಮಾರ್ಗದಲ್ಲಿ ಹೋಗಬಾರದು. ಗುಜರಾತ್-ಮಹಾರಾಷ್ಟ್ರಗಳು ಆದಕಾಲಕ್ಕೆ ಅದರ ಬಗ್ಗೆ ನಿರ್ಣಯ ಮುಂಬೈ ಬೀದಿಯಲ್ಲಿ ತೀರ್ಮಾನವಾಯಿತು. ಅದಾದಕೂಡಲೆ ಎಷ್ಟೋ ಜನ ಬಲಿಗೆ ತುತ್ತಾದರು ಎಂಬ ಮಾತನ್ನು ನಾವೆಲ್ಲರೂ ಕೇಳಿದ್ದೇವೆ. ಆ ಕಾಲಕ್ಕೆ ನಮ್ಮ ಸರ್ಕಾರದವರು ಸ್ವಲ್ಪಮಟ್ಟಿಗೆ ತಮ್ಮ ಒಂದು ಜವಾಬ್ದಾರಿಯನ್ನು ಅರಿತು ಕೆಲಸ ಮಾಡಿದ್ದರೆ ಇಷ್ಟೊಂದು ಅನಾಹುತಕ್ಕೆ ಕಾರಣವಾಗುತ್ತಿರಲಿಲ್ಲವೆಂಬುದಾಗಿ ನಾನು ಮಾನ್ಯ ಸದಸ್ಯರಿಗೆ ವಿನಂತಿ ಮಾಡುತ್ತೇನೆ. ಆದ್ದರಿಂದ ನಮ್ಮ ರಾಜ್ಯವನ್ನು ಕರ್ಣಾಟಕವೆಂಬ ಹೆಸರಿನಿಂದ ಕರೆಯುವ ಒಂದು ಭಾಗ್ಯ ನಮ್ಮ ಪಾಲಿಗೆ ಬಂದಿರುವುದು ನಿಮ್ಮ ನಮ್ಮ ಸುಯೋಗಕ್ಕೆ ಮುಖ್ಯ ಕಾರಣವೆಂಬುದಾಗಿ ಮಾನ್ಯ ಸದಸ್ಯರೆಲ್ಲರೂ ತಿಳಿಯಬೇಕು. ಕನ್ನಡ ಜನಾಂಗದವರಿಗೆ ಇಂದಿನ ದಿನ ಒಂದು ಸುದಿನವೆಂದೇ ನಾವೆಲ್ಲರೂ ತಿಳಿಯಬೇಕು. ಏಕೆಂದರೆ, ನಮ್ಮ ಕನ್ನಡ ನಾಡಿನಲ್ಲಿ ಹಿರಿಯರಾದ, ಕನ್ನಡಭಾಷಾ ಪ್ರೇಮಿಗಳಾದ, ಕನ್ನಡ ಪ್ರಾಂತರಚನೆಗಾಗಿ ದುಡಿದಿರುವ ಕನ್ನಡ ಜನಗಳ ಕುಲಪುರೋಹಿತರಾದ ಶ್ರೀಮಾನ್ ಆಲೂರು ವೆಂಕಟರಾಯರು ಈ ಬಗ್ಗೆ ಒಂದು ಶ್ಲೋಕವನ್ನು ಬಹಳ ಚೆನ್ನಾಗಿ ಹಾಡಿ ತೋರಿಸಿದ್ದಾರೆ. ಅದು ತಮ್ಮೆಲ್ಲರಿಗೂ ಬಹಳ ಚೆನ್ನಾಗಿ ಗೊತ್ತಿದೆ. ಇಂತಹ ಒಂದು ಪವಿತ್ರವಾದ ಕನ್ನಡನಾಡು ಎಂಬುದಾಗಿ ಹೆಸರಿಡುವುದು ಮತ್ತು ಅದರ ಒಂದು ಹೊಣೆ ನಮ್ಮ ನಮ್ಮ ಪಾಲಿಗೆ ಬಂದಿರುವುದು ನಮ್ಮ ಒಂದು ಭಾಗ್ಯವೇ ಎಂದು ತಿಳಿಯಬೇಕು. ಇನ್ನು ಕೆಲವು ಸದಸ್ಯರು ನಮಗೆ ಇವತ್ತು ಒಂದು ರೀತಿಯ ವಾದವನ್ನು ಇಡುತ್ತಿದ್ದಾರೆ. ಇವತ್ತು ಏಕೀಕರಣವಾಗುವುದಕ್ಕೆ ಮುಂಚೆ ನಮ್ಮಲ್ಲಿ ಬಂದಂಥ ರಾಜ್ಯಗಳು ಬಹಳ ಅಭಿವೃದ್ಧಿ ಸ್ಥಿತಿಗೆ ಬಂದಿವೆ. ಗುರುತರವಾದ ಜವಾಬ್ದಾರಿಯಿಂದ ನಿಂದ್ದಾಗಿವೆ. ಈಗ ನಾನು ಹೇಳುವುದೇನೆಂದರೆ, ಕರ್ಣಾಟಕ ಏಕೀಕರಣ ಜೊತೆಯಲ್ಲಿ ಕನ್ನಡನಾಡು ಎಂಬ ವಾದ ನಮ್ಮಲ್ಲಿಲ್ಲವೆಂದು ತಿಳಿದುಕೊಂಡಿದ್ದರೆ ಅದು ತಪ್ಪು. ಅದರ ಜೊತೆಯಲ್ಲಿ ನಮ್ಮದೂ ಇದೆಯೆಂಬ ವಾದ ಉಂಟೇ ಉಂಟು. ದೇಶಕ್ಕೆ ಒಳ್ಳೆಯದಾಗುವ ಕಾಲದಲ್ಲಿ ಒಂದು ಮಾತನ್ನೇನಾದರೂ ಹಿಂದಕ್ಕೆ ತೆಗೆದುಕೊಂಡರೆ ಅಡ್ಡಿ ಇಲ್ಲ. ಉದಾರತನ ಬೇಕು. ನಮ್ಮ ಮೈಸೂರಿನಲ್ಲಿ ಎಲ್ಲರೂ ಅಣ್ಣತಮ್ಮಂದಿರೋಪಾದಿಯಲ್ಲಿದ್ದುಕೊಂಡು ಬೇರೆ ಪ್ರಾಂತಗಳಲ್ಲಿರತಕ್ಕ ಕನ್ನಡಿಗರನ್ನೆಲ್ಲಾ ಕರೆದುಕೊಂಡು ಕರ್ಣಾಟಕವೆಂಬ ರಾಜ್ಯವನ್ನು ಕಟ್ಟೋಣ. ಮೊದಲು ಎಲ್ಲರೂ ಒಂದಾಗಲಿ ಎಂಬ ವಿಚಾರ ಈಗ ಎಲ್ಲೆಲ್ಲೂ ಅಂಟಿಕೊಂಡಿದೆ. ಆದರೆ ಇರತಕ್ಕ ದೇಶವನ್ನೂ ಮತ್ತು ಆ ಭಾಗದ ಜನರನ್ನೂ ಹೊರದೂಡುವುದು ಸರಿಯಲ್ಲ. ಅಂತಹ ಗೋಜಿಗೆ ಹೋಗುವುದೂ ನ್ಯಾಯವಲ್ಲ. ಅದು ಬೇಡ; ನಮ್ಮ ಮನಸ್ಸಿಗೆ ದುಃಖವಾದರೂ ಚಿಂತೆಯಿಲ್ಲ. ನಾವು ಉದಾರಮನಸ್ಸಿನಿಂದ ಈ ರಾಜ್ಯವನ್ನು ಕಟ್ಟೋಣ. ತಾವು ದಯಮಾಡಿ ನಮ್ಮದು ಹೆಡ್ಡತನವೆಂದು ಯಾರೂ ತಿಳಿಯಬೇಡಿ. ಸಾಮಾನ್ಯವಾಗಿ ಆರು ವರ್ಷಗಳವರೆಗೆ ನಮ್ಮ ಮನಸ್ಸಿನ ನೋವನ್ನು ನಾವೇ ಸಹಿಸಿದ್ದೇವೆ. ಈಗ ನಮ್ಮನ್ನು ತಮ್ಮ ಜೊತೆಗೆ ಸೇರಿಸಿಕೊಂಡ ಮುಖ್ಯೋದ್ದೇಶ ನಾವೆಲ್ಲರೂ ಸುಖವಾಗಿ ಜೀವನ ಸಾಗಿಸುವುದಕ್ಕೆ ಅಂದರೆ ತಪ್ಪೇನಿಲ್ಲವೆಂದು ಕಾಣುತ್ತದೆ. ಅಂದಮೇಲೆ ಇವತ್ತು ಈ ರಾಜ್ಯಕ್ಕೆ ಕರ್ಣಾಟಕವೆಂಬುದಾಗಿ ಹೆಸರನ್ನು ಇಡುವುದರಲ್ಲಿ ಎಲ್ಲಾ ಸದಸ್ಯರೂ ನನಗೆ ಬೆಂಬಲವನ್ನು ನೀಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಕೆಲವು ಸದಸ್ಯರು ಎಸ್. ಆರ್. ಸಿ. ರಿಪೋರ್ಟನ್ನು ನೋಡಿದ್ದರೆ ಈ ರೀತಿಯಾಗಿ ಹೇಳುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. 1956ನೇ ನವಂಬರ್ 1ನೇ ತಾರೀಖು ರಾಜ್ಯ ನಿರ್ಮಾಣವಾದ ಕಾಲಕ್ಕೆ ಎಸ್. ಆರ್. ಸಿ. ವರದಿಯಲ್ಲಿ ಒಂದು ಮಾತನ್ನು ಹೇಳಿದೆ. ಇವತ್ತಿನ ದಿವಸ ಹಳೆಯ

ಮೈಸೂರು 'ಬಿ' ಸ್ಟೇಟ್ ಆಗಬೇಕು. ಆದು ಸಂಪೂರ್ಣ ಹೋಗಿ ಹೈದರಾಬಾದ್ ಸ್ವಲ್ಪ ಭಾಗ, ಮುಂಬೈ, ಕೊಡಗು ರಾಜ್ಯ—ಇತ್ಯಾದಿ ಒಳಗೊಂಡ ಒಂದು 'ಎ' ಸ್ಟೇಟ್ ನಿರ್ಮಾಣವಾಯಿತು. ಆಗ 'ಎ' ಸ್ಟೇಟಿಗೆ ಯಾರೂ ಯಾರೊಡನೆಯೂ ಕೂಡಲಿಲ್ಲ. ಒಂದು ಹೊಸ 'ಎ' ಸ್ಟೇಟು ನಿರ್ಮಾಣವಾಯಿತು. ಆಗ ಆ 'ಎ' ಸ್ಟೇಟಿಗೆ ಮೈಸೂರು ಎಂದು ಹೆಸರು ಇಟ್ಟರೇ ಹೊರ್ತು ಬೇರೆಯಾವ ಹೆಸರನ್ನೂ ಇಡಲಿಲ್ಲ.

ಇನ್ನು ಕೆಲವು ಸ್ನೇಹಿತರು ಈ ಬಗ್ಗೆ ಒಂದು ಜಾತಿಯ ಬಣ್ಣ ಬಳಿಯುತ್ತಿರುವುದರಿಂದ ಇದು ದುಃಖದ ಸಂಗತಿಯಾಗಿದೆ. ಇಂಥಾದ್ದನ್ನೆಲ್ಲಾ ಜ್ಞಾನಿಗಳು ತಮ್ಮ ಒಂದು ಸಂಘಶಕ್ತಿಯಿಂದ ಹೆಚ್ಚಿಸಿಕೊಂಡು ಹೋಗುತ್ತಾರೆ. ಆದರೆ ನಮ್ಮಲ್ಲಿ ಇಂಥಾದ್ದಕ್ಕೆ ಜಾತೀಯತೆಯ ಬಣ್ಣ ಹಚ್ಚುವುದು ಸರಿಯಲ್ಲ. ನಮ್ಮಲ್ಲಿ ಶೀಲವಿದೆ, ಚಾರಿತ್ರ್ಯಾಂಶಗಳಿವೆ. ಮೈಸೂರಾದರೂ ಆಗಲಿ ಅಥವಾ ಕರ್ನಾಟಕವೇ ಆಗಲಿ, ಯೋಗ್ಯರಾದ ಜನಗಳು ನಮ್ಮಲ್ಲಿದ್ದಾರೆ. ಆದ್ದರಿಂದ ದಯವಿಟ್ಟು ಈಗಿನ ಹೆಸರಿನ ಬದಲಾವಣೆಯ ಪ್ರಸ್ತಾಪಕ್ಕೆ ಜಾತಿಯ ಹೆಸರನ್ನು ಮುಂದೆಮಾಡಬೇಡಿ ಎಂಬುದಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅನೇಕ ನನ್ನ ಮಾನ್ಯಮಿತ್ರರ ವಿಷಯವಾಗಿ ನನಗೆ ವಿಶೇಷವಾದ ಅಭಿಮಾನವಿದೆ. ಮೈಸೂರು ಎಂಬುದಾಗಿಯೇ ಕರೆಯಬೇಕೆಂಬ ಒಂದು ಜಾಡ್ಯ ಕೆಲವು ವರ್ಷಗಳು ಇಲ್ಲದೆ ಇರುವ ಹಾಗೆ ಮಾಡಲು ಇತರ ಕನ್ನಡೇತರರನ್ನು ನಾವು ಕರೆದುಕೊಳ್ಳುವ ಪ್ರಯತ್ನ ಮಾಡೋಣ; ಇದರಲ್ಲಿ ಸಂಪೂರ್ಣ ವಿಶ್ವಾಸವಿದೆ. ಈ ಜಾಡ್ಯ ಅಂಟಿಕೊಂಡಿರುವತನಕ ಅದನ್ನು ಬಿಡಲಿಕ್ಕೆ ಆಗುವುದಿಲ್ಲ. ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀ ಹನುಮಂತಯ್ಯನವರು ರಾಜ್ಯಗಳ ಪುನರ್ವಿಂಗಡಣಾಕಾಲದಲ್ಲಿ ಈ ಹೆಸರಿನ ಬದಲಾವಣೆಯ ಗೊಂದಲ ಹಿಂದೆ ಬಂದಿದ್ದಾಗ ಮೈಸೂರು ಎಂಬುದಾಗಿಯೇ ಈ ರಾಜ್ಯವನ್ನು ಹೇಳುತ್ತಿದ್ದರು.

ಅವರು ಉತ್ತರ ಕರ್ನಾಟಕಕ್ಕೆ ಪ್ರವಾಸ ಬಂದಿದ್ದಾಗ ಅಲ್ಲಿಯ ನೆಲ, ಅಲ್ಲಿಯ ಜಲ, ಅಲ್ಲಿಯ ಜನತೆಯಲ್ಲಿರತಕ್ಕ ರಾಷ್ಟ್ರೀಯ ಭಾವನೆಗಳನ್ನು ನೋಡಿದ ನಂತರ ಹುಬ್ಬಳ್ಳಿಯಲ್ಲಿ ಒಂದು ಮಾತನ್ನು ಹೇಳಿದರು. ಅದೇನೆಂದರೆ ಕರ್ನಾಟಕ ಏಕೀಕರಣವನ್ನು ಸಾಧಿಸುವುದರಲ್ಲಿ ನಾನು ಕನ್ನಡದ ದಾಸಯ್ಯ ಎಂದು.

ಶ್ರೀಮಾನ್ ಮುಕ್ಕಣ್ಣಪ್ಪನವರು ಮಾತನಾಡಿದ್ದನ್ನು ನೋಡಿದರೆ ಕೆಲವರು ಯಾವುದೋ ಒಂದು ಜಾಡ್ಯಕ್ಕೆ ಒಳಗಾಗಿದ್ದಾರೆಂಬ ಭಾವನೆ ನನಗೆ ಕಂಡುಬರುತ್ತದೆ. ನಾನು ತಮ್ಮಲ್ಲಿ ಬೇಡಿಕೊಳುವುದು ಇಷ್ಟೇ. ನಾವೆಲ್ಲರೂ ಈಗ ಒಂದುಗೂಡಿದ್ದೇವೆ. ಆದ್ದರಿಂದ ಈ ವಿಚಾರದಲ್ಲಿ ತಾವುಗಳೆಲ್ಲರೂ ಸಹಕರಿಸಿ ಈ ಮೈಸೂರಿಗೆ ಕರ್ನಾಟಕ ಎನ್ನುವ ಹೆಸರನ್ನು ಇಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri L. B. BIRJE (Khanapur).—(*Spoke in Marathi*).

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಇದುವರೆಗೂ ಕರ್ನಾಟಕ ಪ್ರಾಂತವಾಗಬೇಕೆಂಬ ನಿರ್ಣಯದ ಬಗ್ಗೆ ಅನೇಕವಾದ ವಿವಾದಗಳೂ, ಚರ್ಚೆಗಳೂ ನಡೆದಿವೆ. ಇದನ್ನು ನೋಡಿದರೆ ರಾತ್ರಿಯೆಲ್ಲಾ ರಾಮಾಯಣ ಕೇಳಿ ರಾಮನಿಗೆ ಸೀತೆಯು ಏನಾಗಬೇಕೆಂದು ಯಾರೋ ಒಬ್ಬರು ಬೆಳಿಗ್ಗೆ ಕೇಳಿದರಂತೆ. ಕರ್ನಾಟಕ ಪ್ರಾಂತ ಏಕೆ ಆಗಬೇಕೆಂದು ಯಾರಾದರೂ ಕೇಳಿದರೆ ರಾಮನಿಗೆ ಸೀತೆ ಏನಾಗಬೇಕೆಂದು ಕೇಳಿದಂತೆಯೇ ಆಗುತ್ತದೆ. ಕನ್ನಡನಾಡು ಒಂದಾಗಬೇಕೆಂದು—ಕರ್ನಾಟಕ ಪ್ರಾಂತವಾಗಬೇಕೆಂದು ಅಖಂಡ 50-60 ವರ್ಷಗಳ ಕಾಲ ಹೋರಾಟ ನಡೆಸಿ ಹೆಸರಿಗಾಗಿ ಈಗ ಚರ್ಚಿಸುತ್ತಿರುವುದು ಬುದ್ಧಿವಂತಿಕೆಯ ಲಕ್ಷಣವೇ ಎಂಬ ಸಂದೇಹ ನನಗೆ ಬರುತ್ತದೆ. ಕನ್ನಡಿಗರ ಜೀವದುಸಿರಾದ ಕರ್ನಾಟಕಪ್ರಾಂತ ಎಂದು ಕರೆಯಲು ಭವ್ಯವಾದ ಹಿನ್ನೆಲೆ ಇದೆ. ಕನ್ನಡ ಪ್ರಾಂತ ಈಗ ನಾವು ಪಡೆದಿರುವುದಕ್ಕಿಂತಲೂ ಬಹಳ ದೊಡ್ಡದಿತ್ತು. ಕಾವೇರಿಯಿಂದ ಗೋದಾವರಿಯವರೆಗೂ ಹಬ್ಬಿತ್ತು. ಕರ್ನಾಟಕ ರತ್ನಸಿಂಹಾಸನಾಧೀಶ್ವರರೆಂಬ ಪದವಿ ನಾಡನ್ನಾಳಿದವರೆಲ್ಲರಿಗೂ ಇದ್ದಿತು. ಇಂತಹ ಅಖಂಡ ರಾಜ್ಯವನ್ನು ಇಂಗ್ಲಿಷರು ಹರಿದುಹಂಚಿದರು, ಅವರ ಗುರಿ ಇಷ್ಟೆ. ಕನ್ನಡಿಗರು ಸತ್ವಶಾಲಿಗಳು, ಪುರುಷರಷ್ಟೆ ಅಲ್ಲ. ಸ್ತ್ರೀಯರೂ ರಣಚಂಡಿಗಳೆ; ಕಿತ್ತೂರು ಚನ್ನಮ್ಮ, ಕೆಳದಿ ಚನ್ನಮ್ಮ, ಬೆಳವಡಿ ಮಲ್ಲಮ್ಮ, ಒನಕೆಯ ಓಬವ್ವ ರಣಚಂಡಿಯರಿದ್ದ ದೇಶ, ಎಂದಿದ್ದರೂ ನಮಗೆ ಗಂಡಾಂತರ ಎಂದು ತಿಳಿದು ಇಂಗ್ಲೀಷರು, ಮರಾಠರು, ನೈಜಾಮರು ಹಂಚಿಕೊಂಡು ಉಳಿದ ಸ್ವಲ್ಪಭಾಗವನ್ನು ಮೈಸೂರು ರಾಜರಿಗೆ ಬಿಟ್ಟು ಕೊಟ್ಟರು. ಕನ್ನಡಿಗ ಅಣ್ಣತಮ್ಮಂದಿರನ್ನು ಅಗಲಿಸಿದರು. ಕನ್ನಡಿಗರ ಸತ್ವಶಾಲಿ ದೇಹವನ್ನು ತುಂಡರಿಸಿ, ರುಂಡವೊಂದು ಕಡೆ, ಮುಂಡ ಒಂದು ಕಡೆ, ಕೈಕಾಲುಗಳನ್ನೊಂದು ಕಡೆ ಎಸೆದು ತಮ್ಮ ಸೇಡನ್ನು ತೀರಿಸಿಕೊಂಡರು. ಮರಾಠರ ಅಧೀನಕ್ಕೆ ಹೋದವರು ಅವರ ಪ್ರಭಾವಕ್ಕೆ ಒಳಗಾಗಿ "ಬೆಳಗಾಂ ಕೋಣಾಂಚ" ಎಂದು ಕೇಳಲಿಕ್ಕೆ ಹತ್ತಿದರು. ನಿಜಾಮರ ಅಧೀನಕ್ಕೆ ಹೋದವರು "ಅಚ್ಛಾ ರಾಯಚೂರ್, ಗುಲ್‌ಬರ್ಗ್, ಬೀದರ್, ಸಬ್ ಕನ್ನಡ ಆದ್ಮೀ ಎಂಬೋದ್ ಖೂನ್ ಆತ್ರಿ" ಎಂದು ಹೇಳಲಿಕ್ಕೆ ಹತ್ತಿದರು. ಮೈಸೂರು ರಾಜರ ಆಡಳಿತಕ್ಕೆ ಬಂದವರು "ಏನ್ರಿ ಸ್ವಾಮಿ, ಹೇಗಿದೆ ಅಂತೀರಿ ನಮ್ಮ ಮೈಸೂರು, ನಮ್ಮ ವೈಶಿಷ್ಟ್ಯವೇನು? ನಮ್ಮ ಬೆಟ್ಟಗಳೇನು, ನಮ್ಮ ಕಟ್ಟೆಗಳೇನು? ದರ್ಬಾರೇನು? ದೀಪಗಳೇನು? ನೋಡಲಿಕ್ಕೆ ಎರಡು ಕಣ್ಣೂ ಸಾಲದು, ದಯಮಾಡಿ ನೋಡಿ ಬನ್ನಿ ದೇವರು" ಎಂಬ ನಾಜೂಕನ್ನು ಕಲಿತರು; ಧಾರವಾಡ, ಬಿಜಾಪುರದವರು "ಇಲ್ಲಿ ನೋಡ್ಲಿಕ್ಕಾ ಬಂದದ್ದು ಬರೋ ಬರಿ ಆತ್ರಿ, ಖರೇ ಅಂದ್ರೆ ಇಂಥಾದ್ದು ನೋಡಿದ್ದಿಲ್ರಿ ಎಪ್ಪ" ಎಂಬ ಮಧ್ಯಮವರ್ಗದವರಾದರು. ಅತ್ತ ಕೊಡಗು ಮಂಗಳೂರು ಕಡೆಯವರು "ಏನುಂಟು, ನಮಗೆ ಕನ್ನಡ ಗೊತ್ತುಂಟು, ಎಲ್ಲರೂ ಸೇರುವುದು ಗೌಜು ಮಾಡುವುದು ಏನಾಯ್ತು ಹಾಳಾಯ್ತು ನಾವು ಹೋಗಲಿಕ್ಕೇ ಸಾಕು" ಎಂದು ಹೇಳುವ ಮಿಶ್ರ ಪ್ರಭಾವಿಗಳಾದರು. ಹೀಗಿದ್ದ ಕನ್ನಡಿಗರೆಲ್ಲರೂ ಭುವನೇಶ್ವರಿಯ ಕೃಪೆಯಿಂದ ಒಂದಾಗಿ ಕೂಡಿ ಆರೇಳು ವರ್ಷಗಳಾದರೂ ಕನ್ನಡ ನಾಡಿಗೆ ಕರ್ನಾಟಕ ಪ್ರಾಂತ ಎಂಬ ಸಹಜವಾದ ಹೆಸರನ್ನಿಡುವುದಕ್ಕೆ ಆಗಿಲ್ಲವೆಂದರೆ ನಮ್ಮ ಆಲಸ್ಯತನಕ್ಕೆ ಬೇರೆ ಉದಾಹರಣೆ ಬೇಕೇ? ಇಷ್ಟು ವಿಳಂಬವಿರುವಾಗ ಇನ್ನು ನಮಗೆ ಬರಬೇಕಾಗಿರುವ ಸುಮಾರು 7,000 ಮೈಲಿ ಕನ್ನಡ ಪ್ರದೇಶವನ್ನು ಮತ್ತು ಸುಮಾರು 35 ಲಕ್ಷ ಕನ್ನಡಿಗರನ್ನು ಬರಮಾಡಿಕೊಳ್ಳಲು ಮನಸ್ಸು ಮಾಡುತ್ತೇವೆಯೋ? ಎಂಬ ಸಂದೇಹ ನನಗೆ ಬರುತ್ತದೆ. "ನೆನವುದೆನ್ನ ಮನಂ ಬನವಾಸಿ ದೇಶಮಂ" ಎಂದು ಅರ್ಜುನ ಅವನ ಕಾಲದಲ್ಲಿ ಕನ್ನಡ ರಾಜ್ಯವಾಗಿದ್ದ ಬನವಾಸಿಯನ್ನು ಕುರಿತು ಹೇಳಿದ್ದಾನೆ. ಮರೆತು ಹೋದ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಸಾಮ್ರಾಜ್ಯ ವಿಜಯನಗರವನ್ನು ಪರಕೀಯರು ಸಹ ಮನಮೆಚ್ಚಿ ವರ್ಣಿಸಿದ್ದಾರೆ. ಅದರಂತೆ ಮೈಸೂರನ್ನು ಹೊಗಳಿದ್ದಾರೆ. ಮೈಸೂರ್ ಹೆಸರೇ ಇರಲಿ ಎಂದರೆ ಬನವಾಸಿ ಪ್ರಾಂತದವರು ಅರ್ಜುನ ಕಾಲದಿಂದ ಇದೆ, ಅದೇ ಇರಲಿ ಎನ್ನುತ್ತಾರೆ. ಕೊಡಗಿನವರು 'ಕೊಡಗುಪ್ರಾಂತ' ಎಂದಾಗಲಿ ಎನ್ನುತ್ತಾರೆ. ವಿಜಾಪುರ ಕಡೆಯವರು 'ವಿಜಯನಗರ' ಎಂದಿರಲಿ ಎನ್ನುತ್ತಾರೆ. ಶಿವಮೊಗ್ಗ ಮಂಗಳೂರಿನ ಕಡೆಯವರು 'ಇಕ್ಕೇರಿರಾಜ್ಯ' ಅಥವಾ 'ಕೆಳದಿರಾಜ್ಯ' ಎಂದು ಕರೆಯಿರಿ ಎನ್ನುತ್ತಾರೆ. ಅಂದಮೇಲೆ ಒಂದು ಗೂಡಿದಂತಾದೀತೆ? ಎಲ್ಲರಿಗೂ ಬೇಕಾದ ಪಕ್ಷಪಾತವೇ ಇಲ್ಲದ ಕರ್ನಾಟಕ ಎಂದರೆ ಎಲ್ಲರಿಗೂ ತೃಪ್ತಿಯಾಗುತ್ತದೆ. ಹೀಗೆ ಕವಿಗಳು ಹಾಡಿರುವ, ಪಂಡಿತರು ಹೇಳಿರುವ, ರಾಜಕಾರಣಿಗಳು ಹೋರಾಡಿರುವ, ಪತ್ರಿಕೆಗಳು ಪ್ರಚಾರ ಮಾಡಿರುವ, ಬಹುತೇಕ ಜನಸಾಮಾನ್ಯರೂ ಅಪೇಕ್ಷೆಪಟ್ಟಿರುವ ಕರ್ನಾಟಕಪ್ರಾಂತ ಎಂದು ಕರೆಯಲು ಕೆಲವರು ಏನೋ ಸಂಕೋಚ, ಏನೋ ಅಭಿಮಾನ, ಏನೋ ವೈಶಿಷ್ಟ್ಯ ಎಂದು ಹೇಳುತ್ತಾ ವಿರೋಧಿಸುತ್ತಿರುವುದಕ್ಕೆ ಆಶ್ಚರ್ಯಪಡಬೇಕಾಗಿದೆ. ಇನ್ನೂ ಕೆಲವು ಸೋದರರು ತೊಟ್ಟು ರಕ್ತ ಇರುವವರೆಗೂ ವಿರೋಧಿಸುತ್ತೇವೆಂದು ಹೇಳಿದ್ದಕ್ಕೆ ನಗಬೇಕೋ, ಅಳಬೇಕೋ ಗೊತ್ತಾಗದಂತಾಗಿದೆ. ಕರ್ನಾಟಕ ಎಂದಾಗಬೇಕೆಂದಿರುವ ಬಹುಸಂಖ್ಯಾತರು "ನಾಳೆ ಬಪ್ಪುದು ಇಂದೇ ಬರಲಿ, ಇಂದು ಬಪ್ಪುದು ಈಗಲೇ ಬರಲಿ, ಇದಕಾರಂಜುವರು, ಇದಕಾಂಳಕುವರು, ಜಾತಸ್ಯ ಮರಣಂ ಧ್ರುವಂ ಎಂದಿರುವುದರಿಂದ ನಾವೂ ಸಿದ್ಧರಿದ್ದೇವೆ" ಎನ್ನುತ್ತಾರೆ. ಈ ವಿಚಾರಕ್ಕೆ ಕುರುಕ್ಷೇತ್ರ ಏಕೆ? ತಾಳೀಕೋಟೆ ಏಕೆ? ಉದ್ವೇಗದಿಂದ ಉಪಯೋಗವಿಲ್ಲ. "ಮನೆಯೊಳಗಣ ಕಿಚ್ಚು ಮನೆಯನ್ನು ಸುಡುವುದಲ್ಲದೆ ನೆರೆಮನೆ ಸುಡದು ನೋಡಾ" ಎಂಬಂತೆ ಇದರಿಂದ ನಮಗೇ ಅಪಾಯ, ಇಂತಹ ಗೋಜಿಗೆ ಯಾರೂ ಹೋಗಬಾರದು.

ತಿಳಿವಳಿಕೆ ಇಲ್ಲದ ಹಳೇ ಮೈಸೂರಿನ ಹಳ್ಳಿಗನೊಬ್ಬ 'ಎನ್ ಬುದ್ಧಿ, ಮೈಸೂರೆಸ್ರೇ ಒಳ್ಳೆ ಸಂದಾಕಿತ್ತಲ್ಲ, ಅದೇನೋ ಕರ್ನಾಟ ಅನ್ಬೇಕಂತೆ ಅದ್ಯಾಕ್ ದ್ವಾಪ್ರು" ಎಂದು ಕೇಳಿದ್ದರೆ ವಿಚಾರ ಗೊತ್ತಿಲ್ಲ ಕೇಳುತ್ತಿದ್ದಾನೆ ಎನ್ನಬಹುದಿತ್ತು. ಅದರಂತೆಯೇ ಹೊಸ ಕರ್ನಾಟಕದ ಹಳ್ಳಿಗನೊಬ್ಬ "ಯಾಕೋ ತಮ್ಮಾ ಎಪ್ಪನಿಗೆ ಎಪ್ಪಾ ಅನ್ನೋದು ಬರೋಬ್ಬರೀನೋ ಕಾಕಾ ಅನ್ನೋದು ಬರಾಬರೀನೋ ಖರೇ ಹೇಳಲ್ಲಾ. ಬಾಜೀರಾಯನ ಕಾಲದ್ದು ಹೆಸ್ರು ಮೈಸೂರ ನ್ನೋದು ಅದು ಹ್ಯಾಂಗ ಅನ್ಲಿಕ್ಕಾ ಬಂದೀತು" ಎಂದಿದ್ದರೆ ಈತನಿಗೂ ವಿಮರ್ಶನಾಶಕ್ತಿ ಇಲ್ಲ ಎನ್ನಬಹುದಿತ್ತು. ಆದರೆ ನಾವು ಶಾಸಕರು, ತಿಳಿದವರು, ದೇಶದ ಆಗುಹೋಗುಗಳ ಹೊಣೆಗಾರರು, ನ್ಯಾಯವಾದ ವಿಚಾರಕ್ಕೆ ಇಲ್ಲದ ಸಲ್ಲದ ವಾದವಿವಾದ ಮಾಡುವುದು ಉಚಿತವೇ, ನ್ಯಾಯವೇ ಎಂದು ನಾವು ಯೋಚಿಸಬೇಡವೆ? ಬಹುಮತದ ಅಭಿಪ್ರಾಯವನ್ನು ಹತ್ತಿಕ್ಕುವುದು ಸಾಧ್ಯವೇ! ಬೇಡವೆನ್ನುವ ಮಾನ್ಯ ಸೋದರರು ಯೋಚಿಸಲಿ. ಇನ್ನೂ ಕೆಲವರು ನಾವು ಹಾಗಿದ್ದೆವು, ಹೀಗಿದ್ದೆವು ನೀವು ಬಂದು ಹಾಗಾಯ್ತು, ಹೀಗಾಯ್ತು, ಇನ್ನೂ ಏನೇನೋ ಮನನೋಯುವ ಮಾತುಗಳನ್ನಾಡಿದ್ದಾರೆ. ಕಿಚ್ಚುರೊಚ್ಚುಗಳಿಂದ ಹೇಳಿದ್ದಾರೆ. "ಸರಿಯಬಹುದು ಒಂದುವೇಳೆ ಅಚಲಗಿರಿ ಹಿಮಾಲಯ, ತೊರೆಯಲಾರೆ ಕರ್ನಾಟ ಪ್ರಾಂತವೆಂಬ ಧ್ಯೇಯ" ಎಂದು ಪಣತೊಟ್ಟಿರುವ ಶ್ರೀ ದೊಡ್ಡಮೇಟಿಯವರಂತಹ ಲಕ್ಷಾಂತರ ಜನರು ಕರ್ನಾಟಕದಲ್ಲಿದ್ದಾರೆಂಬುದನ್ನು ಕಿಚ್ಚುರೊಚ್ಚುಗಳಿಂದ ಮಾತನಾಡಿದ ಸೋದರರು ಗಮನಿಸಿದಂತೆ ಕಾಣಲಿಲ್ಲ. ಇದು ಸರಿಯಲ್ಲ. ಈ ವಾದವಿವಾದ ಕೇಳಿ ಹೊರಗಿನವರು "ವಾಟ್ ಈಜ್ ದಿಸ್, ದೀಜ್ ಕ್ಯಾನರೀಜ್ ಪೀಪಲ್ ಫೈಟಿಂಗ್ ಲೈಕ್ ಮಂಕೀಸ್ ಫಾರ್ ಎ ನೇಮ್" ಎಂದು ಕೆಲವು ದೊಡ್ಡ ಮನುಷ್ಯರು ಮಾತನಾಡಿಕೊಂಡು ಹೋಗುತ್ತಿದ್ದರು. ನಿಜವಾಗಿಯೂ ಆ ಮಾತು ಬಹಳ ನೋವನ್ನುಂಟುಮಾಡಿತು.

ಶ್ರೀ ಎಸ್. ಎಂ. ಕೃಷ್ಣ.—ಆ ಸ್ಥಿತಿಗೆ ನಮ್ಮನ್ನು ತಂದುಬಿಟ್ಟಿರಿ!

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ವಿದ್ಯಾವಂತರಾದ ನೀವೇ ಈ ಸ್ಥಿತಿಗೆ ತಂದುಕೊಳ್ಳುತ್ತಾ ಇದ್ದೀರಿ. ಆ ರೀತಿ ಹಾಸ್ಯ ಮಾಡುವಂತಾಗಿದೆ ನಾವು ಮಾಡುತ್ತಿರುವ ವಾದ. ಇಂತಹ ವಾದ ನಿಲ್ಲಬೇಕು. ಪರಿಸ್ಥಿತಿಗಳು ಬದಲಾಯಿಸಿವೆ. ಪ್ರಗತಿಯನ್ನು ತಡೆಯಲು ಯಾವ ಶಕ್ತಿಗೂ ಆಗುವುದಿಲ್ಲ ಕೆಲವರಿಗೆ ಬೇಕಿರಲಿ, ಬೇಕಿಲ್ಲದೆ ಇರಲಿ ಬಹುಸಂಖ್ಯಾತ ಜನತೆಗೆ ಬೇಕಾಗಿರುವ ಪ್ರಶ್ನೆ "ಕರ್ನಾಟಕ ಪ್ರಾಂತ" ಎಂದಿದ್ದರೂ ಈ ಹೆಸರನ್ನೇ ಇಡಬೇಕೆಂಬುದು ಸೂರ್ಯಪ್ರಕಾಶದಷ್ಟು ಸತ್ಯವಾದ ವಿಚಾರ. ಕಾರಣ "ವಾರವ ನೋಡಾ, ತಿಥಿಯ ನೋಡಾ, ದೋಷವ ನೋಡಾ, ದುರಿತವ ನೋಡಾ, ವಿಘ್ನವ ನೋಡಾ, ಭಗ್ನವ ನೋಡಾ, ಕರ್ನಾಟಕ ನಾಮಕರಣಕೆ ಏನನ್ನು ನೋಡಾ, ಕನ್ನಡ ಪ್ರೇಮಿ ತಾಯಿ ಭುವನೇಶ್ವರಿ," ಎಂಬಂತೆ ತಾವೆಲ್ಲರೂ ಒಮ್ಮನಸ್ಸಿನಿಂದ ಒಪ್ಪಿಕೊಳ್ಳುತ್ತೀರೆಂದು ನಂಬಿದ್ದೇನೆ.

ಮೊನ್ನೆ ನನಗೆ ಎಂಡಗುದ್ಯರತ್ನ ಸಿಕ್ಕಿದ್ದ. ಏನಪ್ಪಾ ವಾದವಿಚಾರ ನಡೀತಾ ಇದೆ, ನಿನ್ನ ಅಭಿಪ್ರಾಯ ಏನಪ್ಪಾ ಈ ಬಗ್ಗೆ ಎಂತ ಪ್ರಶ್ನಿಸಿದೆ. ಕೂಡಲೇ ಆತ "ನರಕಕ್ಕಿಳಿ, ನಾಲ್ಗೆಸೀಳಿ, ಬಾಯಿ ಒಲ್ಸಾಕಿದ್ರೂನೆ, ಮೂಗಿನಲ್ ಕನ್ನಡ ಪ್ರಾಂತಾಂತೀನಿ, ನನ್‌ಮನಸನ್ ನೀಕಾಣೆ" ಎಂದು ಹೇಳಿ ಹೊರಟುಹೋದ. ಹೀಗಿರುವಾಗ ನಾವು ಶಾಸಕರು, ವಿಳಂಬ ಮಾಡಬಾರದು. ಹಿಂಜರಿಯಬಾರದು. "ಕರ್ನಾಟಕದಾ ನಾಮಕರಣಕೆ ತೊರೆಯಿರಿ ಎಲ್ಲರು ಮಮಕಾರ, ಪುಣ್ಯದ ನಾಡಿನ ಗಣ್ಯತೆ ಹೆಚ್ಚಲು ತೋರಿರಿ ಎಲ್ಲರೂ ಸಹಕಾರ" ಎಂದು ನಮ್ರತೆಯಿಂದ ವಿನಂತಿಸುತ್ತೇನೆ. ಮಾನ್ಯ ಸದಸ್ಯರು ತಂದಿರುವಂಥ ಈ ನಿರ್ಣಯವನ್ನು ತಾವೆಲ್ಲರೂ ಕೂಡ ಸಂತೋಷದಿಂದ ಒಪ್ಪಿಕೊಳ್ಳಬೇಕೆಂದು ವಿನಂತಿಸುತ್ತೇನೆ.

ಕರ್ನಾಟಕಂ ಗೆಲ್ಗೆ—ಸಿರಿಗನ್ನಡಂ ಬಾಳ್ಗೆ.

5-30 P.M.

†ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಮಾನ್ ತಾವರೆಯವರು ಭಾಷಣ ಮಾಡುವಾಗ ಮಾಜಿ ಮುಖ್ಯ ಮಂತ್ರಿ ಶ್ರೀಮಾನ್ ಹನುಮಂತಯ್ಯನವರ ಹೆಸರನ್ನು ಉಚ್ಚಾರ ಮಾಡಿ, 'ಕನ್ನಡದ ಜನರ ಆಸೆಗೆ ದಾಸ ನಾನು' ಎಂದು ಅವರು ಉತ್ತರ ಕರ್ನಾಟಕದಲ್ಲಿ ಮಾಡಿದ ಭಾಷಣದ ವಿಷಯವನ್ನು ಉದಹರಿಸಿದರು. ಅವರು ಈಗ ರಾಜ್ಯದ ಸಾರಥ್ಯವನ್ನು ಕಳೆದುಕೊಂಡು ದಾಸರಾಗಿದ್ದಾರೆಂಬುದನ್ನು ಶ್ರೀಮಾನ್ ತಾವರೆಯವರು ಮರೆತಂತೆ ಕಾಣುತ್ತದೆ. ಶ್ರೀಮಾನ್ ಕೃಷ

ಶೆಟ್ಟಿಯವರು 'ನಾವು ವಿಚಾರವಂತರಾಗೋಣ, ವಿಕಾರವಂತರಾಗುವುದು ಬೇಡ' ಎಂದು ಹೇಳಿದರು. ವಿಚಾರವಂತರು ಯಾರು, ವಿಕಾರವಂತರು ಯಾರು ಎನ್ನುವ ಭೇದವನ್ನು ಮಾಡಿ ಒಂದು ಗೆರೆಯನ್ನು ಹಾಕುವುದು ತುಂಬಾ ಕಷ್ಟಸಾಧ್ಯವಾದ ಕೆಲಸವೆಂದು ನನಗನಿಸುತ್ತದೆ. ಈ ಮಹಾಸಭೆಯ ಮುಂದೆ ಎರಡು ಕರ್ಣಾಟಕಗಳ ವಾದವೂ ಬಂತು, ಬಹುಮತದ ವಾದವೂ ಬಂತು, ಮಾತಿನಲ್ಲಿ ರಕ್ತ ಪ್ರವಾಹ ಬಂದು ಹರಿದು ಹೋಯಿತು, ಜನತೆಯ ಭವಿಷ್ಯವನ್ನು ಕಟ್ಟತಕ್ಕ ಜನರು ಒಂದು ಹೆಸರಿನ ಬಗ್ಗೆ ಈ ರೀತಿ ಕಚ್ಚಾಟ ಮಾಡುತ್ತಿದ್ದಾರೆ ಎಂದು ಉದ್ವೇಗ ಪೂರ್ಣವಾದ ಮಾತು ಕೂಡ, ನನಗೆ ಅಕ್ಕನೋ ತಂಗಿಯೋ ಆಗಬೇಕು, ಅವರಿಂದ ಬಂತು. ಈ ಮಾತನಾಡುವುದಕ್ಕೆ ಒಂದು ಅವಕಾಶ ಕಲ್ಪನೆಯಾದ ಸನ್ನಿವೇಶವೇನೆಂಬುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕು. ಈ ನಿರ್ಣಯ ಈ ಸಭೆಯ ಮುಂದೆ ಬಾರದೇಯಿದ್ದ ಪಕ್ಷದಲ್ಲಿ ಈ ರೀತಿ ಮಾತನ್ನು ಜನರಿಂದ ನಾವು ಕೇಳತಕ್ಕ ಪರಿಸ್ಥಿತಿ ಬರುತ್ತಿರಲಿಲ್ಲವೆಂದು ನಾನಾದರೂ ಬಹು ಭಕ್ತಿವಿನಯದಿಂದ ಹೇಳಬಯಸುತ್ತೇನೆ. ಕರ್ಣಾಟಕದ ಜನರ ಜೊತೆಯಲ್ಲಿ ಹೊಂದಿಕೊಂಡು, ಸಹಬಾಳ್ವೆಯನ್ನು ನಡೆಸುವ ದಿಕ್ಕಿನಲ್ಲಿ ಹಿಂದಿನ ಮೈಸೂರಿನವರಾದ ನಾವು ಭಗೀರಥ ಪ್ರಯತ್ನವನ್ನು ಮಾಡುತ್ತ ಬಂದಿದ್ದೇವೆ. ಕರ್ಣಾಟಕದ ಜನರ ಆಸೆ ಆಕಾಂಕ್ಷೆಯೇನಿತ್ತೋ ಅದೆಲ್ಲವೂ ಈಡೇರಿದೆ. ಕರ್ಣಾಟಕ ಬೇಕೆಂಬ ವಾದ ಕಳೆದ 50-60 ವರ್ಷಗಳಿಂದ ಇತ್ತೆಂದು ಶ್ರೀಮತಿ ನಾಗರತ್ನಮ್ಮನವರು ಅಭಿಪ್ರಾಯಪಟ್ಟರು. ಕರ್ಣಾಟಕಪ್ರಾಂತ ಉದಯವಾಗಿ ಆರು ವರ್ಷಗಳಾದವು; ನಮ್ಮ ಮುಂದಿರುವ ಜಟಿಲ ಪ್ರಶ್ನೆಯೇನೆಂದರೆ ಕನ್ನಡದ ವಿವಿಧ ಭಾಗಗಳಿಂದ ಬಂದಿರತಕ್ಕ ಜನರನ್ನು ಒಂದು ದಾರಿಯಲ್ಲಿ, ದೊಡ್ಡ ದಾರಿಯಲ್ಲಿ ಕರೆದುಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮ ಮೇಲೆ ಬಿದ್ದಿದೆ. ಹೀಗಿರುವ ಸಮಯದಲ್ಲಿ ಈ ಹೆಸರಿನ ವಿಷಯವನ್ನು ಯಾರಿಗೂ ನೆಮ್ಮದಿ ತರದೇ ಇರುವ ರೀತಿಯಲ್ಲಿ ಇತ್ಯರ್ಥ ಮಾಡಬೇಕೆಂದು ಹೊರಟಿರುವ ಸಾಹಸವನ್ನು ನಾನಂತೂ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ವಿಚಾರವಂತರಾಗಿರಬೇಕು, ನಿಜ. ವಿಕಾರವಂತರಾಗಬಾರದು, ನಿಜ. ಆದರೆ ಇದು one-way traffic ಎನ್ನುವ ರೀತಿಯಲ್ಲಿರಬಾರದು, ಇದು ಸಹಜವಾಗಿ ಎಲ್ಲರಿಗೂ ಅನ್ವಯವಾಗುವಂತಿರಬೇಕು. ಇದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ಹೃದಯವನ್ನು ನಾವು ಕೇಳಬೇಕು. ಆರು ವರ್ಷಗಳಿಂದ ನಾವು ಸಹಬಾಳ್ವೆಗೆ ಪ್ರಯತ್ನ ಮಾಡುತ್ತಿದ್ದೇವೆ. ಆರು ವರ್ಷಗಳಲ್ಲಿ ನಮಗೆ ಬೇಕಾದಷ್ಟು ಹೃದಯವೇದನೆಯಾಯಿತೆಂದು ತಿಳಿಸಿದರು, ಯಾರೂ ಈ ಹೃದಯವೇದನೆಯಿಂದ ಮಡಿಯಲಿಲ್ಲ. ಇದೇ ರೀತಿ ಮೈಸೂರು ಎನ್ನುವ ಹೆಸರು ಸುಂದರವಾಗಿದೆ, ನಾನೂ ಇದು ಸುಂದರವೆಂದು ತಿಳಿದುಕೊಂಡಿದ್ದೆ, ಈಗ ಮೈಸೂರು ಎನ್ನುವ ಹೆಸರು ಹೋಗಬೇಕೆಂದು ಶ್ರೀಮತಿ ನಾಗರತ್ನಮ್ಮನವರು ಹೇಳಿದರು. ಗಂಧದ ಗುಡಿಯ ಮೈಸೂರು, ಚಿನ್ನದ ನಾಡು ಮೈಸೂರು ಎಂದಿದ್ದುದು ಈಗ ಗಂಧ, ಚಿನ್ನ ಎಲ್ಲವೂ ಹೋಯಿತೆಂದು ಹೇಳಿದರು. ಕರ್ಣಾಟಕ ಏಕೀಕರಣವಾದ ಮೇಲೆ ಚಿನ್ನವನ್ನು ಸಾಗಿಸುತ್ತಿದ್ದೀರಿ, ಗಂಧವನ್ನು ಸಾಗಿಸುತ್ತಿದ್ದೀರಿ, ಇನ್ನೇನೇನು ಸಾಗಿಸುವುದಕ್ಕೆ ಪ್ರಯತ್ನಪಡುತ್ತಿದ್ದೀರಿ ಎಂದು ನಾನು ಕೇಳುತ್ತೇನೆ. ಈಗ ನಿಮ್ಮ ಕಣ್ಣು ರಾಜಧಾನಿಯ ಮೇಲಿದೆಯೆ ಎನ್ನುವ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ಎದ್ದಿದೆ. ನಾನು ಉದ್ವೇಗದಿಂದ ಮಾತನಾಡುತ್ತಿಲ್ಲ. ಕರ್ಣಾಟಕ ಪ್ರಜಾಸೋಷಿಯಲಿಸ್ಟ್ ಪಾರ್ಟಿ ಎಂದು ನಾಮಧೇಯವುಳ್ಳದ್ದಾಗಿದೆ, ನಿಜ. ನಮ್ಮ ಮುಂದಿರುವ ಈ ಠರಾವು ಭಾಷಾವಾರು ತತ್ವದ ಆಧಾರದ ಮೇಲೆ ಏನು ಪ್ರಾಂತ ನಿರ್ಮಾಣ ಮಾಡಿದ್ದೇವೋ ಆ ಪ್ರಾಂತವನ್ನು ಒಡೆಯಬೇಕೆಂಬ ಪ್ರಶ್ನೆಯ ಚರ್ಚೆ ಈ ಸಮಯದಲ್ಲಿಲ್ಲ. ಈ ಚರ್ಚೆ ವಿಷಯ ಸಣ್ಣದು, ಈ ರಾಜ್ಯದ ಹೆಸರೇನು ಇರಬೇಕೆಂಬುದು. ನನ್ನ ಸ್ನೇಹಿತರು ಶ್ರೀಮಾನ್ ಗೋಪಾಲಗೌಡರು ಮೈಸೂರಿಗೆ ವೈಶಿಷ್ಟ್ಯವಿದೆ, ಜರತಾರಿ ಪೇಟದ ವೈಶಿಷ್ಟ್ಯವಿದೆ ಎಂದು ಹೇಳಿದರು. ಅಲ್ಲದೆ ಯಾರೋ ಕರಾರು ಮಾಡಿಕೊಂಡರೆ, ನಾವೇಕೆ ಅದಕ್ಕೆ ಬದ್ಧರಾಗಿರಬೇಕು ಎಂದು ಸೂಯಜ್ ಮತ್ತು ಕಾಂಗೋ ಉದಾಹರಣೆಯನ್ನು ಕೊಟ್ಟರು. ಸೂಯಜ್ ರಾಷ್ಟ್ರೀಕರಣ ಮಾಡುವಾಗ ಇದ್ದ ಪ್ರಬಲವಾದ ಕಾರಣವೇನು ಎನ್ನುವುದು ನನಗಿಂತ ಅವರಿಗೆ ಚೆನ್ನಾಗಿ ಗೊತ್ತಿದೆ. ಅವರು ಇಂಥ ತರ್ಕಬದ್ಧವಲ್ಲದ ಒಂದು ವಾದಸರಣಿಯನ್ನು ಹಿಡಿಯುವುದು ಸಾಧುವಲ್ಲವೆಂದು ನಾನು ಭಾವಿಸುತ್ತೇನೆ. ಹೀಗೆ ಹಿಂದಿನವರು ಮಾಡಿರತಕ್ಕ ಕರಾರುಗಳು ನಮ್ಮ ಮೇಲೆ ಬದ್ಧವಲ್ಲ. ನಾವು ಅದಕ್ಕೆ ಸಹಿ ಹಾಕಿಲ್ಲ, ಯಾರೋ ಯಾರೊಡನೆಯೋ ಕರಾರು ಮಾಡಿಕೊಂಡರೆ ಅದಕ್ಕೆ ನಾವೇಕೆ ಒಪ್ಪಬೇಕು ಎನ್ನುವ ವಾದಕ್ಕೆ ಕೊನೆ ಯಾವುದು, ಮೊದಲು ಯಾವುದು ಎನ್ನುವುದನ್ನು ಯೋಚನೆಮಾಡಬೇಕು. 1955ನೆಯ ಇಸವಿಯಲ್ಲಿ ಹಿಂದಿನ ಮೈಸೂರಿನಲ್ಲಿ ಕರ್ಣಾಟಕ ಪ್ರಾಂತ ಆಗಬಾರದು, ಅದು ಆಗುವುದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ ಎಂಬ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ ವ್ಯಕ್ತಿಗಳಲ್ಲಿ ನಾನೂ ಒಬ್ಬನು, ಒಳ್ಳೆಯದನ್ನು ಮಾಡಿದೆನೊ ಅಥವಾ ಕೆಟ್ಟದ್ದು ಮಾಡಿದೆನೊ ಎನ್ನುವದು ನನಗೆ ಚೆನ್ನಾಗಿ ಗೊತ್ತು. ಹಾಗೆ ನಾನು ಹೇಳಿದಾಗ ನನ್ನ ಕ್ಷೇತ್ರದ ಜನತೆಯ ನನ್ನ ಭಾಗದ ಜನತೆಯ ಮನೋಭಾವವನ್ನು, ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೆ. ಈ ಹೊತ್ತು ದೈವವಶಾತ್ ಅದೇ ಕ್ಷೇತ್ರದ ಜನತೆಯ ಅಭಿಪ್ರಾಯವನ್ನು ಈ ಮಹಾಸಭೆಯ ಮುಂದೆ ನಿವೇದನೆ ಮಾಡುವ ಒಳ್ಳೆಯ ಅವಕಾಶ ಬಂದಿದೆ. ಯಾರು ಬಂದರೂ, ನಾವು ನಿಮ್ಮಲ್ಲಿ ಬಂದು ಸೇರಿದೆವೆ ಅಥವಾ ನೀವು ನಮ್ಮಲ್ಲಿ ಸೇರಿದಿರಾ ಎನ್ನುವ ಪ್ರಶ್ನೆಯನ್ನು ಹಲವಾರು ಜನರು ಹಾಕಿದರು. ಒಂದು ವಿಷಯವನ್ನು ಹಲವಾರು ದೃಷ್ಟಿಕೋನಗಳಿಂದ ನೋಡುವದು ಸಾಧ್ಯ. ಆ ವಿಷಯವನ್ನು ಸಮರ್ಥಿಸುವುದಕ್ಕೂ ವಿರೋಧಿಸುವುದಕ್ಕೂ ಸಾಧ್ಯ. ಅದೇ ರೀತಿ ನೀವು ನಮ್ಮಲ್ಲಿ ಬಂದಿರೊ, ನಾವು ನಿಮ್ಮಲ್ಲಿ ಬಂದೆವೋ ಎನ್ನುವ ಪ್ರಶ್ನೆಯಾಗಿಲ್ಲ. ಎರಡು ಕರ್ಣಾಟಕ ಆಗಬೇಕೆಂಬ ಸೂಚನೆಯನ್ನು ಹಲವಾರು ಸದಸ್ಯರು ಈ ಸಭೆಯಮುಂದೆ ಮಂಡಿಸುವವರಾಗಿದ್ದಾರೆ, ಅದನ್ನು ಆಗ ಚರ್ಚೆಮಾಡೋಣ. ಆ ನಿರ್ಣಯ ಯಾವ ರೂಪ ತಾಳುತ್ತದೆ ಯಾವ ಘಟ್ಟವನ್ನು ಮುಟ್ಟುತ್ತದೆಯೋ ನೋಡೋಣ.

(MR. SPEAKER in the Chair.)

ಆದರೆ ಈಗ ನಮ್ಮ ಮೈಸೂರಿನ ಭವಿಷ್ಯ ಈ ನಿರ್ಣಯದ ಮೇಲೆ ನಿಂತಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಕರ್ಣಾಟಕ ಎನ್ನುವ ಹೆಸರು ಕರ್ಕಶವಾಗಿದೆ ಎಂದು ಕೆಲವರು ಹೇಳುತ್ತಾರೆ. ಆ ವಾದವನ್ನು ನಾನು ಒಪ್ಪುವುದಿಲ್ಲ. ಹೆಸರಿನಲ್ಲಿ ಏನಿದೆ? ಕರ್ಕಶವಾಗಿರಲಿ ಇಲ್ಲದಿರಲಿ, ಸರಿಯೇ, ತಪ್ಪೆ ನೆಪ್ಪೆ ಎಂಬುದಲ್ಲ. ಈ ರಾಜ್ಯಕ್ಕೆ 1956 ರಲ್ಲಿ ಒಂದು ನಾಮ

(ಶ್ರೀ ಎಸ್. ಎಂ. ಕೃಷ್ಣ)

ಕರಣ ಮಾಡಿದ್ದಾಯಿತು ; ಆ ನಾಮಕರಣ ಯಾವ ರೀತಿ ಆಯಿತು ಎಂಬುದನ್ನು, ಆ ಸನ್ನಿವೇಶವನ್ನು ಒಳಹೊಕ್ಕು ನೋಡಬೇಕಾಗಿದೆ. ಶ್ರೀಮಾನ್ ಚನ್ನಪ್ಪ ವಾಲಿಯವರು ಕರ್ಣಾಟಕಕ್ಕಾಗಿ ತಮ್ಮದೆಲ್ಲವನ್ನೂ ಅರ್ಪಣೆ ಮಾಡಿದ್ದಾರೆ. ಶ್ರೀಮಾನ್ ದೊಡ್ಡಮೇಟಿಯವರೂ ಹಾಗೆ ಮಾಡಿದ್ದಾರೆ, ಹಲವಾರು ಜನರು ಮಾಡಿದ್ದಾರೆ. ಇದೇ ರೀತಿ ಮೈಸೂರಿನ ಉನ್ನತಿಗಾಗಿ ಹಲವಾರು ಮಹಿಳೆಯರೂ ಮಹನೀಯರೂ ಕಷ್ಟಪಟ್ಟಿದ್ದಾರೆ. ತಮ್ಮ ಸರ್ವಸ್ವವನ್ನೂ ಅರ್ಪಣೆ ಮಾಡಿದ್ದಾರೆ. ಇದನ್ನೂ ಕೊಂಚಮಟ್ಟಿಗೆ ಅರ್ಥಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಇವತ್ತು ಬೆಳಗಿನ ಪತ್ರಿಕೆಯಲ್ಲಿ ಒಂದು ಸುದ್ದಿಯನ್ನು ಓದಿದೆವು. ಅದು ಹೊಸದೇನೂ ಅಲ್ಲ. ನಮ್ಮ ಭಾರತ ದೇಶದ ಮೇಲೆ ಚೈನಾ ದೇಶದವರು ಅಕ್ರಮಣ ನಡೆಸುತ್ತಲೇ ಬಂದಿದ್ದಾರೆ ಎಂಬುದೇ ಆ ಸುದ್ದಿ. ಇದು ಯಾವ ರೂಪ ತಾಳುತ್ತದೆ ಎಂಬುದು ನಮ್ಮ ದೇಶದ ಪ್ರಧಾನಿಗಳಿಗೂ ಕೂಡ ತಿಳಿಯದಾಗಿದೆ. ಒಂದು ಕಡೆ ನಮ್ಮ ಗಡಿಯಲ್ಲಿ ಬಂದೋಬಸ್ತಿದೆ. ಇನ್ನೊಂದು ಪಕ್ಕದಲ್ಲಿ ಪಾಕಿಸ್ತಾನದ ಗಲಾಟೆ. ಅದರ ಜೊತೆಗೆ ನಮ್ಮಲ್ಲಿ ಹೆಸರಿನ ಬಗ್ಗೆ ಆಕ್ರೋಶ. ಇಲ್ಲಿನ ಆಕ್ರೋಶಕ್ಕೂ ಉಳಿದ ವಿಚಾರಗಳಿಗೂ ಹೇಗೆ ಸಂಬಂಧ ಕಲ್ಪಿಸುತ್ತೀರಿ ಎಂದು ಮಾನ್ಯ ಸದಸ್ಯರು ಕೇಳಬಹುದು. ಹೇಗೆಂದರೆ ಗಡಿಸಮಸ್ಯೆ ಇನ್ನೂ ನಿವಾರಣೆಯಾಗಿಲ್ಲ. ನಮ್ಮ ಇಡೀ ಭಾರತದ ಜನತೆಯ ಆರ್ಥಿಕ ಜೀವನವನ್ನೇ ಒಂದು ರೀತಿಯಲ್ಲಿ ಮಾರ್ಪಾಡು ಮಾಡುವ ಪಂಚವಾರ್ಷಿಕ ಯೋಜನೆ ಎಷ್ಟು ಮಟ್ಟಿಗೆ ಸಫಲವಾಗಬಲ್ಲದು ಎಂಬ ವಿಷಯವನ್ನು ಯಾರೂ ಕೂಡ ಕರಾರುವಾಕ್ಕಾಗಿ ಹೇಳುವ ಸ್ಥಿತಿಯಲ್ಲಿಲ್ಲ. ಕರ್ಣಾಟಕದ ಹೆಸರಿನ ವಾದಿಗಳೂ ಸಹ ಈ ಹೆಸರಿನ ಬಗ್ಗೆ ಜನ ಸಾಮಾನ್ಯರಿಗೆ ಯಾವ ವಿಧವಾದ ಆಶೆಯಾಗಲಿ, ಅಗತ್ಯವಾಗಲಿ ಕಂಡುಬಂದಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಜನರಿಗೆ ಬೇಡವಾದಂಥ ಜನರ ಜೀವನಕ್ಕೆ ಅವಶ್ಯಕವಲ್ಲದಂಥ ಇಂಥ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ಇಟ್ಟಿದ್ದರ ಔಚಿತ್ಯವನ್ನು ಪ್ರಶ್ನಿಸಬೇಕಾಗಿದೆ.

ಸ್ವಾಮಿ, ಈಗತಾನೆ ಕಳೆದ ಚುನಾವಣೆಗಳು ಮುಗಿದಿವೆ. ಈ ಚುನಾವಣೆಯಲ್ಲಿ ಕರ್ಣಾಟಕ ಎಂಬ ಹೆಸರಿನ ಪ್ರಶ್ನೆ ಪ್ರಾಮುಖ್ಯವಾಗಿತ್ತೆ ? ಹಾಗಿದ್ದರೆ ಆ ವಿಚಾರ ಕೂಡ ಆಲೋಚನೆ ಮಾಡೋಣ. ಅಂದ ಮೇಲೆ ಜನರಿಗೆ ಈ ವಿಚಾರ ಬೇಕಾಗಿಲ್ಲ. ನನಗೆ ತಿಳಿದಮಟ್ಟಿಗೆ ಉತ್ತರ ಕರ್ಣಾಟಕದಲ್ಲಾಗಲಿ ಅಥವಾ ದಕ್ಷಿಣ ಕನ್ನಡದಲ್ಲಾಗಲಿ ಅಥವಾ ಹೈದರಾಬಾದು ಪ್ರದೇಶದಲ್ಲಾಗಲಿ ಈ ಹೆಸರಿನ ಬಗ್ಗೆ ಆಂದೋಳನ ಅಥವಾ ಚಳವಳಿ ನಡೆದಿಲ್ಲ. ಚಳವಳಿ ನಡೆದದ್ದು, ಪಾಪ, ಬೆಂಗಳೂರು ಮತ್ತು ಹಳೇ ಮೈಸೂರು ಭಾಗದಲ್ಲಿ. ಅದು ಯಾವುದೆಂದರೆ ವಿದ್ಯಾರ್ಥಿಗಳ ಮುಷ್ಕರ. ಈ ಚಳವಳಿಗೆ ಸಮಾಧಾನವನ್ನು ಕೊಡಲೇ ಇಲ್ಲ. ನಾವು ಇಲ್ಲದ ಹೊಸ ಚಳವಳಿ ಹೂಡಿದರೆ ಅನಾನುಕೂಲವಾಗುತ್ತದೆ. ಹೆಸರಿನ ಬಗ್ಗೆ ದ್ವೇಷ, ಆಕ್ರೋಶ, ಭಾವೋದ್ರೇಕದಿಂದ ಕೂಡಿದ ಭಾಷಣಗಳು ಇವುಗಳೆಲ್ಲವನ್ನೂ ಕೂಡ ತಪ್ಪಿಸಬಹುದಾಗಿತ್ತು. ಇದರ ಜವಾಬ್ದಾರಿ ಈ ಸಭೆಗೆ ಮತ್ತು ಈ ನಿರ್ಣಯದ ಸೂಚಕರಿಗೆ ಸೇರಿದೆ.

ನಾವು ಹೇಡಿಗಳಲ್ಲ ಎಂದು ಶ್ರೀಮಾನ್ ತಾವರೆಯವರು ಹೇಳಿದರು. ನನ್ನ ಆಶೆಯಾದರೂ ಕೂಡ ಮಹಾ ಮೈಸೂರು ಸಂಸ್ಥಾನದ ವಿಸ್ತೃತ ಸಂಸ್ಥಾನದ ಎಲ್ಲ ಜನರೂ ವೀರ್ಯವಂತ ಪ್ರಜೆಗಳಾಗಬೇಕು ಎಂಬುದೇ ಆಗಿದೆ. ಇದರಮೇಲೂ ಕೂಡ ಈ ಸಭೆಯಲ್ಲಿ ನಮಗೆ ಬಹುಮತದ ಬೆಂಬಲವಿವೆ, ಸಾಕಾದಷ್ಟು ಬಹುಮತವನ್ನು ಪಡೆದು ಈ ನಿರ್ಣಯವನ್ನು ಅಂಗೀಕಾರವಾಗುವಂತೆ ಮಾಡುತ್ತೇವೆ, ಓಟಿಗೆ ಹಾಕಿ ಯಾರ ಯಾರ ಅಭಿಪ್ರಾಯ ಹೇಗಿದೆ ಎಂಬುದನ್ನು ತೀರ್ಮಾನಮಾಡಿ ನಿರ್ಣಯಿಸುತ್ತೇವೆ ಎಂದು ಆ ಒಂದು ಸಾಹಸಕ್ಕೆ ಯಾರಾದರೂ ಪ್ರಯತ್ನ ಪಟ್ಟರೆ ನಾನಾದರೂ ಹೇಳುವುದು ಏನೂ ಇಲ್ಲ. ಮುಂದೆ ಉತ್ತರೋತ್ತರ ಇದರಿಂದಾಗುವ ಫಲಾಫಲವೆಲ್ಲವೂ ಕೂಡ ನಿರ್ಣಯದ ಸೂಚಕರನ್ನು ಅವಲಂಬಿಸಿರುತ್ತದೆ, ಈ ನಿರ್ಣಯವನ್ನು ಸಮರ್ಥಿಸಿದ ಮಾನ್ಯಮಿತ್ರರಿಗೆ ಸೇರುತ್ತದೆ ಎಂದು ಸೂಚಿಸಿ, ಈ ಸಮಯದಲ್ಲಿ ಒಂದೇ ಒಂದು ವಾಕ್ಯವನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. When Jesus Christ was crucified, Christ said "Father, forgive them, for they know not what they do."

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ನಗರ).—ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಯಾರು ಎಷ್ಟೇ ಭಾಷಣವನ್ನು ಮಾಡಿದರೂ ಕೂಡ ಒಬ್ಬರನ್ನೊಬ್ಬರು ಒಲಿಸಿಕೊಳ್ಳುವುದಕ್ಕೆ ಸಾಧ್ಯವಾಗಲಾರದು ಎಂಬ ಭಾವನೆ ಈವರೆಗೆ ಚರ್ಚೆಯಾದ ಮೇಲೆ ಮನವರಿಕೆಯಾಗುತ್ತಿದೆ. ಒಲಿಸಿಕೊಳ್ಳುವುದಕ್ಕೆ ಪ್ರಯತ್ನಪಡಬಹುದಾಗಿತ್ತು, ಅವಕಾಶ ಕೊಡಬಹುದಾಗಿತ್ತು, ಮಾಡಿದ್ದರೆ ಚೆನ್ನಾಗಿತ್ತು ಎಂದು ಹೇಳುವವರಲ್ಲಿ ನಾನೊಬ್ಬ. ಈಗ ಭಾಷಣಮಾಡಿದ ಅನೇಕ ಮಹನೀಯರು ಭಾವೋದ್ರೇಕವನ್ನು ವ್ಯಕ್ತಪಡಿಸಿದರು. ವಾದವನ್ನು ಮಾಡುವಾಗ ಒಬ್ಬರು ಇನ್ನೊಬ್ಬರನ್ನು ದೂಷಣೆ ಮಾಡುವುದಾಗಿ ಬಾಯಲ್ಲಿ ಹೇಳದಿದ್ದರೂ ತಮ್ಮ ವಾಕ್‌ಚತುರತೆಯಿಂದ ಆ ಒಂದು ಹವ್ಯಾಸಕ್ಕೆ ತೊಡಗಿದರು. ಕೂಪಕೂರ್ಮನ್ಯಾಯ, ಬಾವಿಯೊಳಗೆ ಕಪ್ಪೆಯಿದ್ದ ಹಾಗೆ ಎಂದು ಒಬ್ಬರು ಹೇಳಿದರು. ಹೊರಗಿನ ದೇಶ ಕಾಣದೆ ದೊಡ್ಡ ದೇಶ, ದೊಡ್ಡ ಜನಾಂಗ, ಸಂಸ್ಕೃತಿ, ಸಂಪತ್ತು ಬೆಳೆಸುವಾಗ ವೈಮನಸ್ಸುಗಳಿದ್ದರೆ ಮರೆಯೋಣ ಎಂದು ಹೇಳಬಹುದು. ಅನೇಕರಿಗೆ ಬೇಡದಿರುವ ನಿರ್ಣಯ ಚರ್ಚೆ ಮಾಡುವಾಗ ಸಂಕುಚಿತ ಭಾವನೆ ಎಂದು ಭಾವಿಸುವುದು ಸೂಕ್ತವಲ್ಲ. ಏಕೆಂದರೆ ಶ್ರೀಮಾನ್ ಕೃಷ್ಣರವರು ಹೇಳಿದ ಹಾಗೆ ಸರಿಯೋ, ತಪ್ಪೋ ಈಗ ಈ ನಿರ್ಣಯ ಚರ್ಚೆಮಾಡುತ್ತಿದ್ದೇವೆ, ಇದಕ್ಕಿಂತ ಜರೂರಾದ ವಿಷಯಗಳು ಕಾದಿವೆ. ಈ ದೇಶ ಜನ್ಮ ತಾಳುವುದಕ್ಕೆ ಅವಕಾಶ ಮಾಡಿದಾಗಲೂ ಇದೇ ರೀತಿ ಭಾಷಣಗಳಾದುವು. ಆಗಿದ್ದ ರಾಜಕಾರಣಿಗಳು ಬಹಳವಾಗಿ ಯೋಚನೆ ಮಾಡಿ ದೇಶದಲ್ಲಿನ ವಾತಾವರಣವನ್ನು ಹಾಗೆಯೇ ಬಿಟ್ಟರೆ ಮುಂದೆ ವಿರಸವಾಗಬಹುದು ಎಂದು ಭಾವಿಸಿ, ದೇಶಕ್ಕೆ ಹೆಚ್ಚು ಘಾತಕ ಕೊಡದಿರಬೇಕಾದರೆ ಆ ದಿವಸ ಇರುವುದನ್ನು ಉಳಿಸಿಕೊಳ್ಳಬೇಕೆಂದು ಅದಕ್ಕೆ ಪ್ರಯತ್ನ ಪಟ್ಟರು. ಆಗ ಕೆಲವು ಒಪ್ಪಂದ ಮಾಡಿಕೊಂಡು ಅಥವಾ ಆಶ್ವಾಸನೆ ಕೊಟ್ಟು ವಿಶಾಲವಾದ ದೇಶಕ್ಕೆ ಒಂದು ಹೆಸರಿಟ್ಟರು. ಮಗು ಹುಟ್ಟಿ ನಾಮಕರಣಮಾಡಿದ ಆರು ವರ್ಷಗಳ ಮೇಲೆ ತಂದೆ ತಾಯಿ, ವ್ಯಾಜ್ಯಮಾಡಿದ ಹಾಗಿದೆ ಇದು. ಮಗು ಕೆಂಪಗಿದೆ, ಹೆಸರು ಬದಲಾಯಿಸಬೇಕು ಎಂದು ಆರು ವರ್ಷಗಳ ಮೇಲೆ ಹೇಳಿದರೆ ಅರ್ಥವೇನು ? ಅವತ್ತು ತಾವು ಹೇಳಲಿಲ್ಲ. ಕೆಲವು ವಿಚಾರಗಳನ್ನು

ಶ್ರೀ ದೇವರಾಜ ಅರಸರು ಓದಿ ಹೇಳಿದರು. ಅನೇಕ ವಿಷಯಗಳನ್ನು ಹೇಳಬಹುದು. ಇಲ್ಲಿಯವರೆಗೆ ಈ ದೇಶಕ್ಕೆ ಇಂಥ ಹೆಸರೇ ಇರಲಿ, ಜನರನ್ನು ಉಳಿಸೋಣ, ಹಿಂದುಸ್ಥಾನಕ್ಕೆ ಒಳ್ಳೆಯದಾಗುತ್ತದೆ ಎಂದು ಒಂದು ರೀತಿ ಭಾವಿಸಿದ್ದರು. ಈಗ ಇಷ್ಟು ತೀವ್ರವಾಗಿ ಹೀಗಾಗಬೇಕೆಂದು ಏಕಾಏಕಿ ಯೋಚನೆ ಮಾಡಬೇಕಾದ ಪರಿಸ್ಥಿತಿ ಇತ್ತೆ? ಆ ದಿವಸ ಕನ್ನಡ ನಾಡಿನ ಜನರು ಒಂದಾಗಬೇಕು, ವಿಶ್ವಾಸಕರರಾಗಿರಬೇಕು, ರಾಜ್ಯ ವಿಶಾಲವಾಗಬೇಕು ಎಂದು ಹೇಳಿದರು. ಆ ವಿಚಾರದಲ್ಲಿ ಅಳಿಲು ಸೇವೆ ಮಾಡಿದವರಲ್ಲಿ ನಾನೂ ಒಬ್ಬ.

ಅವತ್ತಿನ ವ್ಯವಹಾರಗಳನ್ನು ತಿಳಿದವರು ನಾವು ಕೆಲವರು ಇದನ್ನು ಹೇಳಿದರೆ, ಅವತ್ತು ಯಾರು ಒಪ್ಪಿಕೊಂಡರು, ಅದನ್ನು ಏಕೆ ಒಪ್ಪಿಕೊಳ್ಳಬೇಕಾಗಿತ್ತು, ಅವತ್ತು ಮಾಡಿದ ತೀರ್ಮಾನಕ್ಕೆ ಜವಾಬ್ದಾರರು ಯಾರು, ಅದನ್ನು ಬದಲಾಯಿಸಬಹುದು ಎಂದು ವಾದಿಸುವುದು ಸರಿಯೆ? ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಹೇಳಿದರು ಮೈಸೂರು ಹೋಯಿತು ಎಂಬುದು ಗಂಡನನ್ನು ಕಳೆದುಕೊಂಡಂತೆ ಎಂದರವರು. ಶ್ರೀಮತಿಯವರು ಮೈಸೂರಿನಲ್ಲಿ ವಾಸಮಾಡಿದಂಥವರು, ಮೈಸೂರಿನ ವೈಭವವನ್ನು ನೋಡಿದಂಥವರು. ಅಂಥವರು ಮೈಸೂರು ಕಳೆದು ಹೋಯಿತೆಂದು ಎಷ್ಟು ವ್ಯಸನಪಟ್ಟಿದ್ದಾರೋ ಅವರ ಹೃದಯದಲ್ಲಿ ಅದು ಎಷ್ಟರಮಟ್ಟಿಗೆ ನಾಟಿತ್ತೋ ಎಂಬುದನ್ನು ಇದರಿಂದ ಅರ್ಥಮಾಡಿಕೊಳ್ಳಬಹುದು.

ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಜನ ಬಸ್ಸಿನಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ. ಲೆಜಿಸ್ಲೇಚರ್ ಕೆಲಸವನ್ನು Monkeying ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದು. ಇದಕ್ಕೇಕೆ ಅವಕಾಶಕೊಡಬೇಕು? Why should you create that scene? Monkeying ಮಾಡಿದ್ದು ಯಾರು? ಇದನ್ನು ಇಂದು ಮಾಡದೆ ಹೋದರೆ ಸಂಸ್ಥಾನದ ಬೊಕ್ಕಸಕ್ಕೆ ಬರುವ ಹಣ ನಿಂತುಹೋಗುತ್ತದೆಯೇ ಏನು? ನಾಳೆ ಆದಾಯ ಬರುವ ಪ್ರಯತ್ನವನ್ನು ಕೈಬಿಟ್ಟಂತಾಗುತ್ತದೆಯೇ ಏನು? ಅಂಥಾದ್ದೇನೂ ಇಲ್ಲ. ಆದರೆ ಭಾವೈಕ್ಯತೆ ಸಾಧಿಸುತ್ತಿದ್ದೇವೆ, ಅದನ್ನು ಸಾಧಿಸಬೇಕು ಎಂದು ಹೇಳಿದ್ದಾರೆ. ಅದನ್ನು ಸಾಧಿಸಲಾಗುವುದೆ? ಆದರೆ ಇಂದು ನಮ್ಮಲ್ಲಿ ಎಷ್ಟೋ ಜನ ಹುಬ್ಬಳ್ಳಿ, ಕಾರವಾರ ನೋಡದವರೂ ಇದ್ದಾರೆ. ಹಾಗೆಯೇ ಆ ಪ್ರಾಂತ್ಯದಲ್ಲಿಯೂ ಬಹುಶಃ ಅನೇಕರು ಈ ಪ್ರಾಂತ್ಯವನ್ನು ನೋಡದವರಿದ್ದಾರೆ. ಆ ಜನರೂ ನಮ್ಮವರು ಎಂಬ ಭಾವನೆ ಬೆಳೆದುಬರುವ ಸಂದರ್ಭದಲ್ಲಿ ಈ ರೀತಿ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಈ ವಿಚಾರದಲ್ಲಿ ಹಿಂದೆ ಮಾಡಿದ ಕಾನೂನುಗಳನ್ನು ನಾವೇಕೆ ಒಪ್ಪಿಕೊಳ್ಳಬೇಕು, ಸಮಯವರಿತು ತಿದ್ದಿಕೊಂಡು, ಸಮಯ ಬಂದಹಾಗೆ ಬದಲಾಯಿಸಿಕೊಳ್ಳಬೇಕು ಎಂದು ಹೇಳಿದರು. ಆಗಲಿ, ಒಪ್ಪಿಕೊಳ್ಳೋಣ. ಈ ಹೊತ್ತು ಯಾವ ಮಹತ್ತರವಾದ ಕೆಲಸವೇನಿದೆ? ಈಗಲೇ ಆಗಬೇಕೆನ್ನುವುದಕ್ಕೆ ಇರತಕ್ಕ ತರಾತುರಿ ಯಾದರೂ ಏನು? ಮೈಸೂರೆಂಬ ಹೆಸರನ್ನು ತೆಗೆದು ಹಾಕಿದ್ದರಿಂದ ಆಗುವ ಲಾಭವೇನು? ಮೈಸೂರೆಂತಲೇ ಇದ್ದರೆ ಆಗುವ ಅನ್ಯಾಯವೇನು?

ಒಬ್ಬ ಮಾನ್ಯ ಸದಸ್ಯರು.—ಮೈಸೂರು ಹೋಗಿ ಕರ್ನಾಟಕವಾದರೆ ಏನು ಅನ್ಯಾಯವಾಗುತ್ತದೆ?

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಮೈಸೂರೆಂತಲೇ ಇದ್ದರೆ ಲಾಭವಿದೆ. ಈ ದೇಶಕ್ಕೆ ಹಿಂದಿನ ಉತ್ತಮ ಹಿನ್ನೆಲೆಯನ್ನು ಬಿಟ್ಟರೂ ಕಳೆದ 6 ವರ್ಷಗಳ ಕೆಳಗೆ ಹೆಸರಿಟ್ಟು ಅದಕ್ಕೆ ದೇಶವಿದೇಶಗಳಲ್ಲಿ ಒಂದು good will ಗಳಿಸಿಕೊಟ್ಟಿದ್ದೇವೆ ಇದಕ್ಕೂ ಹಿಂದೆ ಇದ್ದುದನ್ನೆಲ್ಲಾ ಬಿಟ್ಟರೂ ಈಚಿನ 6 ವರ್ಷಗಳಿಂದ ಸಂಪಾದಿಸಿದ good will ನ್ನು ಬಿಟ್ಟು, ಈಗ ಹೆಸರು ಬದಲಾಯಿಸಿಕೊಂಡು ಹೋದರೆ ಏನು ಸಾಧಿಸಿದಂತಾಗುತ್ತದೆ, ಹೊರಗಿನವರು ಏನು ಹೇಳುತ್ತಾರೆ? ಮೈಸೂರೆಂದಿತ್ತು, ಕರ್ನಾಟಕವೆಂದು ಈಗ ಹೇಳುತ್ತಾರೆ, ಇದೆಲ್ಲಿದೆ ಎಂದು ಕೇಳುತ್ತಾರೆ. ಆದ್ದರಿಂದ ನಾವು ಮತ್ತೆ good will ಬೆಳೆಸಿಕೊಂಡು ಹೋಗುವುದಕ್ಕೆ ಪ್ರಯತ್ನಪಡಬೇಕು. ಆದ್ದರಿಂದ ಆ ವಾದಕ್ಕೆ ಬಲವಿಲ್ಲವೆಂದು ಹೇಳಿದರೆ, India-China ಸಂಬಂಧದಂತೆ ಹಿಂದೆ ಮಾಡಿಕೊಂಡ ಒಪ್ಪಂದ, ಕೊಟ್ಟ ಆಶ್ವಾಸನೆಗಳನ್ನು ಯಾವತ್ತೂ ಒಪ್ಪಿಕೊಳ್ಳಲೇ ಇಲ್ಲ ಎಂದು ಹೇಳಿದರೆ ಹೇಗೆ? ಕೆಲವರಿಗೆ ಉದ್ರೇಕ ಬರುತ್ತದೆ, ಕರ್ನಾಟಕ ಬರಬೇಕೆಂದು ಎಂದು ವಾಲ ಚನ್ನಪ್ಪನವರು ಹೇಳಿದರು. ಹೆಸರಿನಲ್ಲಿ ಏನಿದೆಯೆಂದರು ಅವರು. ಹಾಗಿದ್ದರೆ ಇಂಡಿಯಾ ದೇಶಕ್ಕೆ ಹೆಸರಿಡುವ ಪ್ರಶ್ನೆ ಕಾನ್‌ಸ್ಟಿಟ್ಯುಯಂಟ್ ಅಸೆಂಬ್ಲಿಯ ಮುಂದೆಯೂ ಬಂತು ವೇದಗಳ ಕಾಲದಿಂದ ಈ ದೇಶಕ್ಕೆ ಭಾರತವರ್ಷವೆಂದು ಹೆಸರಿತ್ತು. ಅಂದ ಮೇಲೆ ಏಕೆ ಅವರು ಭಾರತವರ್ಷವೆಂದು ಹೆಸರಿಡಲಿಲ್ಲ, ಇಂಡಿಯಾ ಎಂದೇಕೆ ಇಟ್ಟರು? ಇಂಡಿಯಾ ಎಂಬ ಪದಕ್ಕೆ ಏನು ಮೇಲ್ಮೆಯಿತ್ತು? ಅದು ಬ್ರಿಟಿಷರು ಇಟ್ಟ ಹೆಸರು. ಉಭಯ ಮನೆಗಳಲ್ಲೂ ಈ ಹೆಸರನ್ನಿಡಕೂಡದೆಂದು ಕೆಲವರು ಹೇಳಿದರು. ಆದರೂ ಈ ಹೆಸರನ್ನೇ ಏಕೆ ಇಟ್ಟರು? ಇಂಡಿಯಾ ದೇಶ ಬರೀ ಹಿಂದೂಗಳ ದೇಶವಲ್ಲ. ಇಲ್ಲಿರುವ ಜನಾಂಗದವರೆಲ್ಲರ, ಹಾಗೂ ಪ್ರಪಂಚದಲ್ಲೇ ಒಂದು ಸ್ಥಾನವನ್ನು ಈ ಹೆಸರು ಗಳಿಸಿದೆ. ಈ ಹೆಸರನ್ನು ಕೇಳಿದರೇನೆ ಅನೇಕ ಜನರಿಗೆ ಉತ್ಸಾಹ ಬರುತ್ತದೆ. ಈ ಎಲ್ಲ ಕಾರಣದಿಂದ 'ಇಂಡಿಯಾ' ಎಂದು ಹೆಸರಿಟ್ಟರು. ಅದೇರೀತಿ ಮೈಸೂರು ದೇಶ ಒಂದು ಭಾಷೆ ಮಾತನಾಡುವವರ ದೇಶವಲ್ಲ. ಬರೀ ಕನ್ನಡ ಮಾತನಾಡುವವರ ದೇಶವಲ್ಲ. ಅನೇಕ ಭಾಷೆಗಳನ್ನು ಮಾತನಾಡುವ ಜನಗಳದಿದು. ಇದು Multi-Lingual State ಆಗಿರುವುದರಿಂದ, ಮೈಸೂರೆಂದು ಹಿಂದೆ ಹೆಸರಿಟ್ಟರು. ಬಹುಶಃ 90 per cent ಜನರು ಅಚ್ಚ ಕನ್ನಡ ಮಾತನಾಡುವವರಿರಬಹುದು. ಇವತ್ತು ತೆಲುಗರೂ, ತಮಿಳರೂ ಇಲ್ಲಿದ್ದಾರೆ. ಆದ್ದರಿಂದ ಅಂದು ಇದಕ್ಕೆ ಈ ಹೆಸರಿಟ್ಟರು. ಮದ್ರಾಸಿನ ಉದಾಹರಣೆ ತೆಗೆದುಕೊಳ್ಳೋಣ. ಅಲ್ಲಿ ಆಂಧ್ರರು ಮಲೆಯಾಳಿಗಳು ತಮಿಳರೂ ಎಲ್ಲರೂ ಇದ್ದಾರೆ. ಶೇಕಡ 90 ಜನ ತಮಿಳರೇ ಇದ್ದಾರೆ. ಅಂಥಾದ್ದರಲ್ಲಿ ಮದ್ರಾಸ್ ಎಂತಲೇ ಅವರು ಹೆಸರಿಟ್ಟರು. ಆದರೆ ಆಂತರಿಕ ವ್ಯವಹಾರಕ್ಕಾಗಿ ತಮಿಳುನಾಡೆಂದು ಹೇಳಬಹುದೆಂದು ಮಾಡಿಕೊಂಡಿದ್ದಾರೆ. ಅದರಂತೆಯೇ ನಾವೂ ದೊಡ್ಡಮೇಟಿಯವರೂ ವ್ಯವಹಾರ ಮಾಡುವುದರಲ್ಲಿ ಕರ್ನಾಟಕ ರಾಜ್ಯವೆಂದೇ ಹೇಳೋಣ, ಬಾಧಕವಿಲ್ಲ. ವಿರೋಧ ಭಾವನೆಗೆ ಇನ್ನೊಂದು ಮಾತು ಹೇಳುತ್ತೇನೆ. 'ಕರ್ನಾಟಕ ಸಾಮ್ರಾಜ್ಯ' ಎಂದರು ಅವರು. ನಾನು ಅವರನ್ನು ಕೇಳುತ್ತೇನೆ, ಹಾಗೆಂದು ಯಾವಾಗ ಇತ್ತು? ಗೋದಾವರಿಯಿಂದ ಹಿಡಿದು ತಂಜಾವೂರಿನವರೆಗೂ ಈ ರಾಜ್ಯ ಎಂದರು. ಯಾವದು ಆ ರಾಜ್ಯ? ಅದು ಬಹುಶಃ ವಿಜಯನಗರ ರಾಜ್ಯವಿರಬಹುದು. ವಿಜಯನಗರ ರಾಜ್ಯ ತೆಲುಗರ

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್)

ರಾಜ್ಯವೋ, ಕನ್ನಡ ರಾಜ್ಯವೋ ಇನ್ನೂ ತೀರ್ಮಾನವಾಗಿಲ್ಲ. ಆ ಹೊತ್ತು ರಾಜರಾರು ? ಹೈದರ್‌ರಾಜ್ಯ, ಟಿಪ್ಪೂಸುಲ್ತಾನ್ ರಾಜ್ಯ ಅದು. ಹರಿದುಹಂಚಿ ಹೋಗಿದ್ದ ರಾಜ್ಯ ಎಲ್ಲಿ ಹೋಯಿತು? ಬ್ರಿಟಿಷರು ಮೈಸೂರು ರಾಜ್ಯ ಒಂದಾಗಿದ್ದರೆ ತೊಂದರೆಯಾಗುತ್ತದೆಂದು ಹೇಳಿ ನೈಜಾಮರಿಗೆ, ಮಹಾರಾಷ್ಟ್ರದವರಿಗೆ ಹರಿದು ಹಂಚಿಹಾಕಿದರು ಎಂದು ಹೇಳಿದರು. ಆಗ ಹಂಚಿದ್ದು ಯಾವುದನ್ನು? ಮೈಸೂರನ್ನು. ಮಹಾರಾಷ್ಟ್ರಕ್ಕೆ ಹೋದರಾಜ್ಯ ಮೈಸೂರಿನದು. ಕಾಸರಗೋಡಿಗೆ ಸೇರಿದ ರಾಜ್ಯ ಮೈಸೂರಿನದು. ಬಹುಶಃ ಸಾಹಿತಿಗಳು ಹೇಳಬಹುದು. ಇಂದ್ರ, ಚಂದ್ರ, ದೇವೇಂದ್ರ ಎಂದು ಮೈಸೂರ ಅರಸರನ್ನು ಕರೆಯಬಹುದು. ಅದರಿಂದ ಆತ ಹಾಗೆ ಆಗಿಬಿಡುತ್ತಾನೆಯೇ? ಹಾಗೆ ಅವರು ಹೊಗಳಿದಾಕ್ಷಣ, ಅಥವಾ ಬಿರುದು ಬಾವಲಿಗಳನ್ನಿಟ್ಟುಕೊಂಡು ದೊಡ್ಡಮನುಷ್ಯನೆಂದು ಹೇಳಿದಮಾತ್ರಕ್ಕೇ, ಅದಕ್ಕೆ ಚಾರಿತ್ರಿಕ ಶಕ್ತಿ ಬರುತ್ತದೆಯೇ? ಆದ್ದರಿಂದ ಇದನ್ನೇ ಯಾರೂ ದಯವಿಟ್ಟು ಬೆಳಸಿಕೊಂಡುಹೋಗಿ ವಿರಸಕೆ ಅವಕಾಶ ಕೊಡಬಾರದು. ಕರ್ನಾಟಕ ಸಂಗೀತ, ಮೈಸೂರಿನದೆಂದೂ, ಅದು ಹಿಂದಿನ ಕರ್ನಾಟಕ ನವಾಬರ ಆಶ್ರಯದಲ್ಲಿ ಬೆಳೆಯಿತೆಂದೂ, ಅಂದಿನ ಸಾಹಿತಿಗಳು ಮೈಸೂರಿನವರೆಂದೂ ಚರಿತ್ರೆಯಿದೆ. ದೇಶದಲ್ಲಿ ಇನ್ನೂ ಅನೇಕ ಭಾವನೆಗಳಿವೆ. ಆದ್ದರಿಂದ ಇದನ್ನು ಯೋಚನೆ ಮಾಡತಕ್ಕ ಕಾಲ ಇನ್ನೂ ಇದೆ. ಬಹುಶಃ ನಾವಿರುವುದು 5 ವರ್ಷ. ಆದರೆ ದೇಶ ನಮಗಿಂತ ಹೆಚ್ಚುಕಾಲ ಇರುತ್ತೆ. ನಮಗಿಂತ ಹೆಚ್ಚು ಶಾಶ್ವತ. ಈ ಕಾರಣ, ಇದನ್ನು ತೀರ್ಮಾನ ಮಾಡುವಾಗ, ಆತುರದಿಂದ ಅವಸರದಿಂದ ತೀರ್ಮಾನ ಮಾಡುವುದು ಬೇಡ. ಎಲ್ಲರೂ ನಿಧಾನವಾಗಿ ಕುಳಿತು ಮಾಡೋಣ. 1956ನೆಯ ಇಸವಿಯಲ್ಲಿಯೂ ಕೂಡ, ಅವಸರದ ಕೆಲಸ ಮಾಡಕೂಡದೆಂದು ಹೇಳಿದ ನಮಗಿಂತ ಪ್ರಭಾವಶಾಲಿಗಳಾದ ನಾಯಕರು, ಹಿರಿಯ ರಾಜಕಾರಣಿಗಳು ಹಾಗೂ ದೇಶದ ಆಗುಹೋಗುಗಳನ್ನು ಕೈಯಲ್ಲಿ ಹಿಡಿದಿದ್ದವರು ಹೇಳಿದರು. ಇನ್ನೂ ಆ ಕಾಲ ಮಿಂಚಿಹೋಗಿಲ್ಲ. ಹೆಸರನ್ನು ಬದಲಾಯಿಸುವ ಕಾಲ ಇನ್ನೂ ಒದಗಿಲ್ಲ. ಈ ಕಾರಣದಿಂದ ಈ ಹೊತ್ತು ಯಾರು ಈ ನಿರ್ಣಯವನ್ನು ತಂದು, ಸಭೆಯ ಮುಂದೆ ಇಷ್ಟು ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೋ ಅವರನ್ನು ನಾನು ಕೇಳಿಕೊಳ್ಳುತ್ತೇನೆ, ದಯವಿಟ್ಟು ಅವರು ಈ ಚರ್ಚೆ ನಿಲ್ಲುವಂತೆ ಮಾಡಲಿ. ಈ ಚರ್ಚೆಯನ್ನು ಸಭೆಯಿಂದ ಹೊರಕ್ಕೆ ತರುವುದು ಬೇಡ. ಅದರಿಂದ ಅನಾಹುತ ಆಗಬಹುದು. ಆದ್ದರಿಂದ ಇದನ್ನು ನಾಯಕರಿಗೆ, ಹಿರಿಯರಿಗೆ ಬಿಡೋಣ. ಇಂಡಿಯ ಸರ್ಕಾರದವರೊಡನೆ ಕಲೆತು ಮಾತನಾಡಿ ಕಾಲ ಪರಿಪಕ್ವವಾಗಿ ಬಂದಾಗ ಮಾಡೋಣ. ಅದಕ್ಕೆ ತಾವುಗಳೆಲ್ಲರೂ ಅವಕಾಶ ಮಾಡಿಕೊಡಿ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

6-00 P.M.

†ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರುಗುಪ್ಪ).—ಮಾನ್ಯ ಅಧ್ಯಕ್ಷರೇ, ಇಂದು ಪ್ರಾಂತದ ಹೆಸರು ಕರ್ನಾಟಕವೆಂದು ಇರಬೇಕೆಂದು ಹೇಳುವ ಈ ಒಂದು ಸೂಚನೆಯನ್ನು ನಾನು ಅನುಮೋದಿಸುತ್ತೇನೆ; ಮತ್ತು ಈಗಾಗಲೇ ಮಾತನಾಡಿದ ಮಿತ್ರರು ಅನೇಕರು ಇರತಕ್ಕಂಥ ಮೈಸೂರು ಎಂಬ ಹೆಸರಿನಿಂದ ಯಾವ ತರಹ ದೇಶಕ್ಕೆ ಕೆಡಕು ಆಗಿದೆ, ಇದರಿಂದಾಗತಕ್ಕ ಅನಾಹುತವೇನು, ಆಗಿರತಕ್ಕ ಅನ್ಯಾಯವೇನು ಎಂಬುದನ್ನೆಲ್ಲಾ ಹೇಳಿದ್ದನ್ನು ನಾನು ಕೇಳಿದ್ದೇನೆ. ಆದರೆ ಅಂಥಾದ್ದು ಯಾವುದೂ ಆಗಿದೆಯೆಂದು ನಾನು ಕೇಳಿದವನಲ್ಲ. ಮೈಸೂರು ಎಂಬ ಹೆಸರು ಈ ಪ್ರಾಂತದ ವಸ್ತುಸ್ಥಿತಿಯನ್ನು ಸೂಚಿಸುವುದಿಲ್ಲ. ಇದು ಬದಲಾವಣೆಯಾಗಬೇಕು. ಈಗ ಕನ್ನಡ ಭಾಗಗಳು ಒಂದಾದ ಮೇಲೆ ಮೈಸೂರು ಎಂಬ ಹೆಸರು ಏಕೆ ಇರಬೇಕು? ಅದಕ್ಕೆ ಸೂಕ್ತವಾದ ಹೆಸರು ಇಡಬೇಕಾದುದು ನ್ಯಾಯ. ಈಗ ವಿಶಾಲ ಕರ್ನಾಟಕವಾಗಿದೆ. ಇದಕ್ಕೆ ಕರ್ನಾಟಕವೆಂಬುದಾಗಿ ಹೆಸರನ್ನು ಇಡಬೇಕೆಂದು ನಾನೂ ಸಹ ಹೇಳುತ್ತೇನೆ. ಮೈಸೂರು ಎಂಬ ಹೆಸರಿನಲ್ಲಿ ಕೆಡುಕು, ಅನ್ಯಾಯಗಳಿವೆ ಎಂದು ನಾನು ಹೇಳುತ್ತಾ ಇಲ್ಲ. ಆದರೆ ಇದು ವಸ್ತುಸ್ಥಿತಿಯನ್ನು ಸೂಚಿಸುವುದಿಲ್ಲ ಎಂಬ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮೈಸೂರು ಎಂಬ ಹೆಸರು ಈ ರಾಜ್ಯಕ್ಕೆ ಹಿಂದೆ ಬಹಳ ಸೂಕ್ತವಾಗಿತ್ತು. ಮೈಸೂರಿನ ರಾಜಕೀಯ, ಹಿನ್ನೆಲೆ ನೋಡಿದರೆ ಮತ್ತು ಮೈಸೂರಿನ ಚಾರಿತ್ರಿಕ ಅಂಶಗಳ ಅಳತೆ ಮಟ್ಟವೆಲ್ಲವನ್ನೂ ನೋಡಿದರೆ, ಮೈಸೂರಿನ ಅರಸರೇ ಈ ರಾಜ್ಯವನ್ನು ಆಳುತ್ತಿದ್ದರು. ಈಗ ಮೈಸೂರಿನ ರಾಜರುಗಳೇ ಹೋಗಿದ್ದಾರೆ. ಮೈಸೂರು ಮುಖ್ಯ ಪಟ್ಟಣ ಬೆಂಗಳೂರಿಗೆ ಬಂದಿದೆ. ಆಮೇಲೆ ಇತರ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋದ ಕನ್ನಡ ಭಾಗಗಳವರು ಮೈಸೂರಿನ ಜೊತೆಗೆ ಸೇರಿಕೊಂಡಿದ್ದಾರೆ. ಮೊದಲಿಗಿಂತ ಮೈಸೂರಿನಲ್ಲಿ ಹೆಚ್ಚಿಗೆ ಜನಸಂಖ್ಯೆ ಆಗಿದೆ. ಪ್ರಾಂತ ನಿರ್ಮಾಣ ಕಾಲದಲ್ಲಿ ಆ ಪ್ರಾಂತದ ಭಾಷೆಯ ಒಂದು ಅಳತೆಗೋಲನ್ನು ಇಟ್ಟುಕೊಂಡು ಪ್ರಾಂತ ನಿರ್ಮಾಣ ಮಾಡಿದ್ದಾರೆ. ಆದ್ದರಿಂದ ಈ ಪ್ರಾಂತವನ್ನು ಕರ್ನಾಟಕವೆಂಬ ಹೆಸರಿನ ಮೇಲೆ ಕರೆಯುವುದು ಉಚಿತವೆಂದು ನನಗನ್ನಿಸುತ್ತದೆ. ಕೆಲವು ಮಿತ್ರರು ಬೇರೆ ಭಾಗಗಳು ಮೈಸೂರಿಗೆ ಸೇರುವಾಗ ಬಹಳ ನಮ್ರತೆಯಿಂದ ಸೇರಿಕೊಂಡರು, ಈಗ ನಮ್ಮ ಮೇಲೆಯೇ ಕೈಮಾಡುತ್ತಿದ್ದಾರೆಂಬುದಾಗಿ ಹೇಳಿದರು. ನಾವೆಂದಿಗೂ ಅಂತಹ ಭಾವನೆಯಿಂದ ಸೇರಲಿಲ್ಲ. ಮೈಸೂರಿನ ಒಂದು ಸಂಪತ್ತನ್ನಾಗಲೀ ಮೈಸೂರಿನ ಶೀಲ, ದಕ್ಷತೆಯನ್ನು ಕಡಮೆ ಮಾಡಬೇಕೆಂದು ಸೇರಲಿಲ್ಲ. ಆದರೆ ಕನ್ನಡ ಮನೆಯ ತೌರುಮನೆ ಎಂಬುದಾಗಿ ನಾವು ಈ ರಾಜ್ಯವನ್ನು ಭಾವಿಸಿಕೊಂಡು ನಾವು ಕನ್ನಡಿಗರಾಗಿ ಈ ಅಖಂಡ ಕರ್ನಾಟಕ ರಚನೆಬೇಕೆಂಬ ಹೆಬ್ಬಯಕೆಯಿಂದ ಇಲ್ಲಿ ಸೇರಿದ್ದೇವೆಯೇ ಹೊರ್ತು ಇಲ್ಲಿನ ಸಂಪತ್ತನ್ನೆಲ್ಲಾ ದೋಚಿಕೊಂಡು ಹೋಗಬೇಕೆಂಬ ಅಭಿಲಾಷೆಯಿಂದಲ್ಲವೆಂಬುದನ್ನು ನಾನು ತಮ್ಮೆಲ್ಲರ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ದಿವಸ ಇಡೀ ನಮ್ಮ ದೇಶದ ಪೂರ್ವಭಾಷಾ ತಳಹದಿಯ ಮೇಲೆ ಪ್ರಾಂತಗಳನ್ನು ರಚನೆ ಮಾಡಬೇಕು. ಹಾಗಾದರೆ ಒಂದು ಆಡಳಿತ ಸುಲಲಿತವಾಗುತ್ತದೆ, ಇಲ್ಲವಾದರೆ ಏನೂ ಪ್ರಯೋಜನವಿರುವುದಿಲ್ಲ. 1956 ರಲ್ಲಿ ನಮ್ಮ ಪ್ರಾಂತ ನಿರ್ಮಾಣವಾಗಿದೆ. ಆಗ ನಿರ್ಮಾಣವಾದ ಅನೇಕ ಪ್ರಾಂತಗಳ ಹೆಸರೂ ಕೂಡ ಭಾಷೆಯ ಮೇಲೆಯೇ ನಡೆಯುತ್ತಿದೆ. ಅಂದಮೇಲೆ ಅದೇರೀತಿ ಈ ಒಂದು ಹೆಸರು ಏಕೆ ಇರಬಾರದು ಎಂದು ಈಗ ಈ ಸೂಚನೆಯನ್ನು ತಂದಿದ್ದಾಗಿದೆ ಮತ್ತು ಅನು

ವಿರೋಧಿಸಿದ್ದೂ ಸಹ ಆಗಿದೆ. ಕೆಲವು ಮಿತ್ರರು ಮದ್ರಾಸ್ ಹೇಗೆ ಉಳಿದಿದೆಯೋ ಹಾಗೆಯೇ ನಮ್ಮ ಮೈಸೂರು ಎಂಬ ಹೆಸರು ಉಳಿಯಬೇಕೆಂದು ಹೇಳಿದರು. ಮದ್ರಾಸ್ ಸಂಸ್ಥಾನಕ್ಕೂ ನಮ್ಮ ಮೈಸೂರು ಸಂಸ್ಥಾನಕ್ಕೂ ಬಹಳ ವ್ಯತ್ಯಾಸವಿದೆ. ಮದ್ರಾಸಿಗೆ ಯಾವ ಭಾಗಗಳೂ ಸೇರಲಿಲ್ಲ. ಮದ್ರಾಸ್ ಇಲ್ಲವೇ ತಮಿಳು ಪ್ರಾಂತ ಎಂದು ಕರೆಯುತ್ತಾರೆ. ಇನ್ನೂ ಇತರ ಭಾಗಗಳು ನಮಗೆ ಆ ಪ್ರಾಂತಗಳಿಂದ ಸೇರುವುದು ಉಳಿದಿದೆ. ಆದ್ದರಿಂದ ಆ ಒಂದು ಹೋಲಿಕೆ ನಮ್ಮ ಮೈಸೂರಿಗೆ ಅನ್ವಯಿಸಲಾರದೆಂದು ನಾನು ಭಾವಿಸಿದ್ದೇನೆ. ಕೆಲವರು ಉದ್ರೇಕದಿಂದ ಈ ರೀತಿ ಬದಲಾವಣೆಯಾದರೆ ರಕ್ತಪಾತವುಂಟಾಗುತ್ತವೆಂದು ಹೇಳಿದರು. ಕರ್ಣಾಟಕ ಆಗಬೇಕು ಎಂಬುದ ಕೇಳಿಕೆ ರೂಪದಲ್ಲದೆ, ಸೂಚನೆ ರೂಪದಲ್ಲದೆ. ಯಾರೂ ಪ್ರಚೋದನೆಯ ಕೋಪದಿಂದ ಮತ್ತು ವಿರಸದಿಂದ ಮಾತನಾಡುತ್ತಿಲ್ಲ. ಶ್ರೀಮಾನ್ ಮುಕ್ಕಣ್ಣಪ್ಪನವರು ರಕ್ತಪಾತವಾಗುತ್ತದೆಎಂಬುದಾಗಿ ಹೇಳಿದರು. ಶ್ರೀಮಾನ್ ಬಸಪ್ಪನವರೂ ಸಹ ಉತ್ತರದ ಗಡಿಯಲ್ಲಿ ಮೈಸೂರಿನ ಹೆಸರಿನ ಮೇಲೆ ಉಂಟಾದ ರಕ್ತಪಾತದ ವಿಷಯವನ್ನು ಹೇಳಿದರು. ಕರ್ಣಾಟಕದ ಎಲ್ಲಾ ಪ್ರಾಂತಗಳೂ ಸೇರಿರುವ ಕಾಲದಲ್ಲಿ ಕೆಲವು ಪ್ರದೇಶಗಳಲ್ಲಿ ಯಾವ ರೀತಿ ಭಾಷೆಯನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ಆಯಾ ಹೆಸರನ್ನು ಉಳಿಸಿದ್ದಾರೋ ಆ ರೀತಿ ಇವತ್ತು ನಮ್ಮ ರಾಜ್ಯಕ್ಕೆ ಕರ್ಣಾಟಕವೆಂದು ಹೆಸರು ಇಡುವುದು ಉಚಿತವೆಂದು ನಾನು ಹೇಳಬಯಸುತ್ತೇನೆ. ಮೈಸೂರು ಎಂದು ಹೇಳತಕ್ಕವಾದ ಪೂರ್ವಭಾವಿಯಾಗಿ ಆಲೋಚಿಸಿ ಈ ನಿರ್ಣಯವನ್ನು ಸಮರ್ಥಿಸಬೇಕೆಂದು ನಾನು ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಸ್ವಾಮಿ, ಈಗ ನಮ್ಮ ಮುಂದಿರತಕ್ಕ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ಆ ರೀತಿ ವಿರೋಧಿಸುವಾಗ ಈಗ ಮುಖ್ಯವಾಗಿ ಶ್ರೀಮಾನ್ ಅರಸು ಅವರು ವಿರೋಧಿಸಿ ಹೇಳಿದಂತಹ ಅಭಿಪ್ರಾಯ ನನ್ನ ಮನಸ್ಸಿನೊಳಗೆ ಒತ್ತಾಯಪಡಿಸುತ್ತಿದೆ. ನಾನಾದರೂ ಈ ಏಕೀಕರಣ ಸಮಸ್ಯೆ ಬಂದಾಗ ಈ ಭಾಷಾವಾರು ಪ್ರಾಂತಗಳಾಗಬಾರದು, ಈ ಭಾಷಾವಾರು ಪ್ರಾಂತದಿಂದ ನಮ್ಮ ಭರತ ಖಂಡದ ಚರಿತ್ರೆಯೇನಿದೆ ಅದು ಪುನರಾವೃತ್ತಿ ಆಗುತ್ತದೋ ಏನೋ ಎಂಬ ಸಂಶಯವನ್ನು ಆಗಲೇ ವ್ಯಕ್ತಪಡಿಸಿದ್ದೆ. ಇವರು ಈ ರೀತಿ ಭಾಷಾವಾರು ಪ್ರಾಂತಗಳನ್ನು ರಚನೆ ಮಾಡುತ್ತಿದ್ದರೆ ದೈವವೇ ಒಂದು ಬೇರೆ ವಿಷಯವನ್ನು ಹರಸುತ್ತದೋ ಏನೋ ಎಂಬ ಭಾವನೆಯನ್ನು ವ್ಯಕ್ತಪಡಿಸಿದವರ ಪೈಕಿ ನಾನೂ ಒಬ್ಬ. ಆದರೂ ಭಾಷಾವಾರು ಪ್ರಾಂತಗಳು ಆದವು. ಈಗಾಗಲೇ ಇದರಿಂದ ಭರತಖಂಡದಲ್ಲಿ ಅನೇಕ ಅನಾಹುತಗಳು ಕಣ್ಣಿಗೆ ಕಾಣುತ್ತಿವೆ. ಆ ರೀತಿ ಆಗಬಾರದು. ಈಗ ನಮ್ಮ ಭಾಷೆ ಹೆಚ್ಚು, ನಮ್ಮ ಚರಿತ್ರೆಯೇ ಹೆಚ್ಚು, ನಮ್ಮ ಸ್ಥಿತಿಗತಿಗಳೇ ಹೆಚ್ಚು ಎಂಬ ವೈಷಮ್ಯವನ್ನು ಬೆಳೆಸಿಕೊಂಡು ಹೋದರೆ ಏನಾಗುತ್ತದೋ ಏನೋ ಎಂಬ ಸಂಶಯ ಬರುತ್ತದೆ. ಈಗ ಭಾಷಾವಾರು ಪ್ರಾಂತಗಳಾದ ಮೇಲೆ ಹೊಸದಾಗಿ ಉತ್ತರ ಪ್ರದೇಶದಲ್ಲಿ ಹಿಂದಿ ಮಾತನಾಡತಕ್ಕ ರಾಜ್ಯಗಳು ಒಂದಲ್ಲ ಅನೇಕವಾಗಿವೆ. ಅವರು ಇತ್ತೀಚೆಗೆ ಬೇರೆ ಬೇರೆ ರಾಜ್ಯಗಳನ್ನು ಮಾಡಿಕೊಂಡಿದ್ದಾರೆ. ಕನ್ನಡ ಮಾತನಾಡತಕ್ಕ ಇತರ ಪ್ರದೇಶಗಳನ್ನೆಲ್ಲಾ ಒಂದುಗೂಡಿಸಿ ಒಂದು ದೊಡ್ಡ ರಾಜ್ಯವಾದರೆ ಏನಾದರೂ ಇದು ಸರಿಹೋಗುತ್ತದೋ ಏನೋ ಎಂದು ನಮ್ಮಲ್ಲಿ ಕೆಲವರು ಭಾವಿಸಿದ್ದರು. ಆಗ ಕೆಲವು ಸಂಪತ್ತುಗಳು ಹೆಚ್ಚುತ್ತವೆ ಎಂಬುದಾಗಿ ಹೇಳಿದರು. ವಿಶಾಲ ಮೈಸೂರು ಆಗಿಮಾಡುವುದರಿಂದ ನಮ್ಮ ಸಂಪತ್ತು ಜಾಸ್ತಿಯಾಗುತ್ತದೆ, ನಮಗೆ ಅರಣ್ಯ ಸಂಪತ್ತು ಮತ್ತು ಖನಿಜ ಸಂಪತ್ತು ಯಶಸ್ವಿಯಾಗಿ ಬರುತ್ತದೆ, ನಮ್ಮ ದೇಶದ ಬೆಳವಣಿಗೆ ಹೆಚ್ಚಾಗುತ್ತದೆ, ನಮ್ಮ ಭಾಷೆ ಇನ್ನೂ ಅತ್ಯುತ್ತಮವಾಗಿ ಬೆಳೆಯುತ್ತದೆ ಎಂದು ಹೇಳುತ್ತಾ ಬಂದರು. ಇಂತಹ ಅನೇಕ ಕಾರಣಗಳಿಂದ ಒಂದೇ ರಾಜ್ಯ ಆಯಿತು. ನನ್ನ ಕೆಲವು ಮಿತ್ರರು ಇದರಿಂದ ಏನೇನು ಆಗುತ್ತದೆಂದು ವಾಗ್ದಾನ ಮಾಡಿದ್ದರೋ ಮತ್ತು ಭರವಸೆಗಳನ್ನು ಕೊಟ್ಟಿದ್ದರೋ ಆ ರೀತಿ ನಡೆಯುತ್ತಾ ಕರ್ಣಾಟಕ ರಾಜ್ಯ ಸಂಪದ್ಯುಕ್ತವಾಗಿ ಆಗುತ್ತದೋ ಏನೋ ಎಂಬ ಒಂದು ಕನಸನ್ನು ನಾವು ಕಾಣುವವರಾಗಿದ್ದೇವೆ. ಇನ್ನು ಹತ್ತು ವರ್ಷಗಳಲ್ಲಿ ನಿಜವಾಗಿ ಆ ರೀತಿಯಾದ ಸಂಪದ್ಯುಕ್ತವಾದ ಕರ್ಣಾಟಕ ರಾಜ್ಯವಾಗುತ್ತದೆ ಎಂಬುದಾಗಿ ನಂಬೋಣ. ಆದರೆ ಈ ಮಧ್ಯೆ ಆಗುತ್ತಿರುವುದನ್ನೆಲ್ಲಾ ನೋಡಿದರೆ ಅದಕ್ಕೆಲ್ಲಾ ವ್ಯತಿರಿಕ್ತವಾಗಿಯೇ ಆಗುತ್ತಿದೆಯೆಂದು ನಾನು ಅನೇಕವೇಳೆ ಸಂಶಯ ಪಡುತ್ತಿದ್ದೇನೆ. ಅದಕ್ಕೆ ಕಾರಣ ಇಷ್ಟೆ. ಕನ್ನಡ ಏಕೀಕರಣವಾದ ಮೇಲೆ ಕನ್ನಡಕ್ಕೆ ಒಂದು ಹೆಚ್ಚಿನ ಪ್ರೋತ್ಸಾಹ ಸಿಕ್ಕುತ್ತದೆ ಎಂದು ನಾವು ಅಂದುಕೊಂಡಿದ್ದೆವು. ಭಾಷಾವಾರು ಪ್ರಾಂತವನ್ನು ರಚನೆ ಮಾಡುವುದರಿಂದ ಆಯಾ ಭಾಷೆಗೆ ಅತ್ಯುತ್ತಮವಾದ ಒಂದು ಪ್ರಾಮುಖ್ಯತೆ ದೊರೆಯುತ್ತದ ಎಂದು ಆಗ ಎಲ್ಲರೂ ಹೇಳಿದರು. ಕನ್ನಡ ರಾಜ್ಯ ವಿಶಾಲವಾಗಿ 6 ವರ್ಷಗಳಾಯಿತು. ಕನ್ನಡದ ಅಭಿವೃದ್ಧಿಗಾಗಿ ಇದುವರೆಗೆ ಏನು ಒಂದು ಕಾರ್ಯ ನಡೆದಿದೆ ಎಂದು ನನಗೆ ಸಂದೇಹವಾಗಿದೆ. ಈಗ ಉದಾಹರಣೆಗೆ ಹೇಳುವುದಾದರೆ, ನಮ್ಮ ಮೈಸೂರಿನಲ್ಲಿ ಅನೇಕ ವರ್ಷಗಳಿಂದ ಕನ್ನಡ ಶಿಕ್ಷಣ ಮಾಧ್ಯಮ ಮಾಡಬೇಕು, ಕನ್ನಡದಲ್ಲಿಯೇ ಎಲ್ಲಾ ಪಾಠ ಪ್ರವಚನಗಳೂ ನಡೆಯಬೇಕು, ಎಂದುಬೇಕಾದಷ್ಟು ಪ್ರಯತ್ನ ಪಟ್ಟಿದ್ದಾರೆ. ಅದು ಇನ್ನೂ ಆಗಿಲ್ಲ. ಅದರಲ್ಲೂ ಇತ್ತೀಚೆಗೆ ನಾವು ನೋಡುವುದರಲ್ಲಿ ಕನ್ನಡ ಮೀಡಿಯಂ ತೆಗೆದು ಹಾಕಿ ಇಂಗ್ಲೀಷ್ ಮೀಡಿಯಮ್ ಇರಬೇಕೆಂದು ವಾದಗಳು ನಡೆಯುತ್ತಿವೆ. ಕನ್ನಡದ ಭಕ್ತರು, ಕನ್ನಡದ ಅಭಿಮಾನಿಗಳು ಕನ್ನಡ ಮಕ್ಕಳು ಕನ್ನಡಕ್ಕೆ ಎಷ್ಟರ ಮಟ್ಟಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ.

ಮತ್ತೊಂದು ಉದಾಹರಣೆಯನ್ನು ಹೇಳುವುದಾದರೆ, ನಮ್ಮ ರಾಜ್ಯಭಾಷೆ ಕನ್ನಡ ಆಗಬೇಕು ಎಂದು ಅನೇಕ ವರ್ಷಗಳಿಂದ ಚಳುವಳಿಯನ್ನು ನಡೆಸಿದರು. ಇತ್ತೀಚೆಗೆ ಅಲ್ಲೊಂದು, ಇಲ್ಲೊಂದು ಮುನಿಸಿಪಾಲಿಟಿಗಳವರು ಕನ್ನಡವನ್ನು ರಾಜ್ಯಭಾಷೆಯಾಗಿ, (ಆಡಳಿತ ಭಾಷೆಯಾಗಿ) ಮಾಡುತ್ತಿದ್ದಾರೆ. ಆದರೆ ಆ ವಿಷಯದಲ್ಲಿ ನಮ್ಮ ಸರ್ಕಾರ ಇನ್ನೂ ವಿನಾಮೇಷ ಎಣಿಸುತ್ತಿದೆ. ನಮ್ಮ ದೇಶದಲ್ಲಿ ಇನ್ನೂ ಕನ್ನಡ ರಾಜ್ಯಭಾಷೆಯಾಗಿಲ್ಲ, ಆಡಳಿತ ಭಾಷೆಯಾಗಿಲ್ಲ. ಮೈಸೂರು ಎನ್ನುವ ಹೆಸರನ್ನು ತೆಗೆದುಹಾಕಿ ಕರ್ಣಾಟಕ ಎಂದು ಹೆಸರಿಡಬೇಕು, ನಾವು ಕನ್ನಡ ಭಾಷೆಯನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳತಕ್ಕ ಜನ ಕನ್ನಡದ ವಿಷಯದಲ್ಲಿ ಏನು ಅಭಿಮಾನ ತೋರಿಸುತ್ತಿದ್ದಾರೆಂಬುದನ್ನು ಯೋಚನೆ ಮಾಡಿ

(ಶ್ರೀ ಟಿ. ಮಾದಯ್ಯಗೌಡ)

ನೋಡಿದರೆ ತಲೆ ತಗ್ಗಿಸಬೇಕಾಗುತ್ತದೆ. ನಾಚಿಕೆ ಯಾಗುತ್ತದೆ. ಹಾಗಾದರೆ ನಿಮ್ಮ ಒಂದು ಏಕೀಕರಣ ಏನಾಯಿತು ಎಂದು ನಾನು ಕೇಳುತ್ತೇನೆ. ಈಗ ಟೆಕ್ಸ್ಟ್ ಬುಕ್ಕುಗಳು, ಪಾಠ ಪ್ರವಚನದ ಪುಸ್ತಕಗಳು ಬರುತ್ತಿವೆ. ಅವುಗಳನ್ನು ನೋಡಿದರೆ ನಗಬೇಕೋ ಅಳಬೇಕೋ ನನಗೆ ಗೊತ್ತಾಗುವುದಿಲ್ಲ. ನಮ್ಮ ಮಕ್ಕಳು ಇಂಥಾ ಪುಸ್ತಕಗಳನ್ನು ಓದಿದರೆ ಎಷ್ಟರ ಮಟ್ಟಿಗೆ ಕನ್ನಡವನ್ನು ಕಲಿತಾರು, ಎಷ್ಟರ ಮಟ್ಟಿಗೆ ಬುದ್ಧಿವಂತರಾದಾರು, ಎಂದು ನನಗೆ ಬಹಳ ವಿಷಾದ ವಾಗುತ್ತಿದೆ. ಇದನ್ನು ನೋಡಿದರೆ, ಕರ್ಣಾಟಕ ಆಗ ಬೇಕು, ಕನ್ನಡ ಅಭಿವೃದ್ಧಿ ಆಗಬೇಕು ಎಂದು ಹೇಳ ತಕ್ಕ ಜನ ಕನ್ನಡದ ಅಭಿವೃದ್ಧಿಗೆ ಕನ್ನಡ ನಾಡಿನ ಪ್ರಗ ತಿಗೆ ಏನು ಬೇಕೋ ಅದನ್ನು ಮಾಡದೆ ಬರೀ ಹೆಸರಿ ಗಾಗಿ ಹೊಡೆದಾಡುತ್ತಿದ್ದಾರೆ. ಕರ್ನಾಟಕ ಎಂದು ಹೇಳಿದರೆ ನಿಮಗೆ ಎಷ್ಟು ರುಚಿಯಾಗಿದೆಯೋ, ಮೈಸೂರು ಎನ್ನುವುದು ಅದಕ್ಕಿಂತ 10ರಷ್ಟು ರುಚಿ ಯಾಗಿದೆ ಎಂದು ಹೇಳುವ ಜನ ನಾವು ಇದ್ದೇವೆ. ಮೈಸೂರಿನಲ್ಲಿಯೇ ಹುಟ್ಟಿ ಬೆಳೆದು ಮೈಸೂರಿನ ಕೀರ್ತಿಯನ್ನು ನಾವು ಕಣ್ಣಾರೆ ಕಂಡಿದ್ದೇವೆ. 18 1ನೇ ಇಸವಿಯಲ್ಲಿಯೇ ನಮ್ಮ ದೇಶ ಮಾದರಿಯ ಮೈಸೂರು ದೇಶ ಎನ್ನುವಂಥಾ ಒಂದು ಹೆಸರನ್ನು ಪಡೆಯಿತು. ಅದಕ್ಕೋಸ್ಕರ ಈ ಮೈಸೂರು ಎನ್ನುವು ದರಲ್ಲಿ ನಮಗೆ ಹೆಚ್ಚು ಅಭಿಮಾನವಿದೆ. ಭರತ ಖಂಡದಲ್ಲಿ ಎಲ್ಲೂ ಪ್ರಜಾ ರಾಜ್ಯ ಇಲ್ಲದೇ ಇರುವಾಗ ನಮ್ಮ ಮೈಸೂರಿನಲ್ಲಿ ಪ್ರಜಾರಾಜ್ಯವನ್ನು ಸ್ಥಾಪನೆ ಮಾಡಿದರು. ಅನೇಕ ಭಾಷೆಗಳನ್ನು ಮಾತನಾಡು ವವರ ಸಂಪರ್ಕ ನಮ್ಮ ದೇಶಕ್ಕೆ ಬೆಳೆದು ಎಲ್ಲರೂ ಅಣ್ಣ ತಮ್ಮಂದಿರ ಹಾಗೆ ನಾವು ಬೆಳೆದವರು. ಹಳೆಯ ಮೈಸೂರಿನಲ್ಲಿ ಅನೇಕ ವರ್ಷಗಳಿಂದ ತೆಲುಗು ಮಾತ ನಾಡುವವರು, ತಮಿಳು ಮಾತನಾಡುವವರು ಕನ್ನಡ ದಲ್ಲಿ ವಿದ್ಯಾವಂತರಾಗಿ ಕವಿತೆಗಳನ್ನು ಕಾವ್ಯಗಳನ್ನು, ಮತ್ತು ಸಾಹಿತ್ಯ ಪುಸ್ತಕಗಳನ್ನು ಬರೆದು ಕೀರ್ತಿ ವಂತರಾಗಿದ್ದಾರೆ. ಕವಿಗಳಾಗಿದ್ದಾರೆ. ಈಗ ಉದಾಹರಣೆಗೆ ಹೇಳುವುದಾದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು, ಡಿ. ವಿ. ಗುಂಡಪ್ಪನವರು, ನಾ. ಕಸ್ತೂರಿ ಅವರು, ಇವರುಗಳೆಲ್ಲರೂ ನಮ್ಮ ಕನ್ನಡ ದೇಶಕ್ಕೆ ಹೊಂದಿಕೊಂಡು ಅನೇಕ ಕನ್ನಡ ಪುಸ್ತಕ ಗಳನ್ನು ಬರೆದು ಕೀರ್ತಿವಂತರಾಗಿ ನಮ್ಮ ದೇಶದಲ್ಲಿ ಬಾಳುತ್ತಿದ್ದಾರೆ. ಇಂಥಾ ದೇಶದಲ್ಲಿ ನಮ್ಮ ಭಾಷೆ ಯನ್ನೇ ಮಾತನಾಡುತ್ತಾ ನಮ್ಮ ಭಾಷೆಯನ್ನು ಅಭಿ ವೃದ್ಧಿ ಮಾಡತಕ್ಕ ಇತರ ಜನಗಳನ್ನೆಲ್ಲಾ ಧಿಕ್ಕರಿಸಿ ಕರ್ಣಾಟಕ ಎಂದು ಇಡಬೇಕೆಂದು ಒತ್ತಾಯ ಮಾಡುವುದರಲ್ಲಿ ಏನು ಅರ್ಥವಿದೆಯೋ ನನಗಂತೂ ಗೊತ್ತಾಗುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಇನ್ನೊಂದು ವಿಚಾರ ನಮಗೆ ಬಹಳ ವ್ಯಸನವನ್ನುಂಟು ಮಾಡು ತ್ತಿದೆ. ಅದೇನೆಂದರೆ, ಈಗ 6 ವರ್ಷಗಳ ಹಿಂದೆ ಇದ್ದಂಥ ಒಂದು ಸ್ಥಿತಿ ಏನಾದರೂ ಬದಲಾವಣೆ ಯಾಗಿದೆಯೇ? ಕನ್ನಡ ಬೆಳೆದಿದೆಯೇ, ದೇಶದ ಸಂಪತ್ತು ಬೆಳೆದಿದೆಯೇ, ಜನಗಳಲ್ಲಿ ಉತ್ಸಾಹ ಬೆಳೆ ದಿದೆಯೇ, ಭಾವೈಕ್ಯತೆ ಬೆಳೆದಿದೆಯೇ ಎಂದು ನನ್ನ ಮಿತ್ರರನ್ನು ಕೇಳಬೇಕಾಗಿದೆ. ಆ ತರಹ ಬದಲಾವಣೆ ಗಳೇನೂ ಆಗಿರುವ ಹಾಗೆ ನನ್ನ ಮನಸ್ಸಿಗೆ ಕಾಣುತ್ತಾ ಇಲ್ಲ. ಆರು ವರ್ಷಗಳ ಹಿಂದೆ ನಮ್ಮ ನಾಯಕರು ಒಂದು ತೀರ್ಮಾನವನ್ನು ತೆಗೆದುಕೊಂಡು ಮೈಸೂರೇ ಎಂದು ಇರಲಿ ಎಂದು ತೀರ್ಮಾನ ಮಾಡಿದ್ದಾರೆ. ಕರ್ಣಾಟಕ ವೆಂದು ಮಾಡದಿದ್ದರೆ ನಮ್ಮ ಮುಂದಿನ ಪೀಳಿಗೆ ಏನೆಂದಾರು ಎಂದು ನೀವು ಹೇಳಿದರೆ, ಆರು ವರ್ಷಗಳ ಹಿಂದೆಯೇ ಮೈಸೂರು ಎಂದು ಇರಲಿ ಎಂದು ಮಾಡಿ ದಂತಹ ಒಂದು ಕರಾರನ್ನು ಇವೊತ್ತು ಮುರಿದರೆ ನಮ್ಮ ಮುಂದಿನ ಪೀಳಿಗೆ ಏನೆಂದಾರು ಎಂದು ನಾವು ಕೇಳಬೇಕಾಗುತ್ತದೆ. ಹೀಗೆಯೇ ಅನೇಕ ಕಾರಣಗಳಿವೆ. ಈ ನಿರ್ಣಯವನ್ನು ತಂದಿರತಕ್ಕವರು ಈ ವಿಷಯದಲ್ಲಿ ಹೇಗೆ ದೃಢ ಮಾಡಿದ್ದಾರೋ ಹಾಗೆಯೇ ನಾವೂ ದೃಢ ಮಾಡಿದ್ದೇವೆ. ಈ ವ್ಯವಹಾರಿಕವಾದಂಥ ಹೆಸರನ್ನು ಬದಲಾವಣೆ ಮಾಡಿದರೆ ದೇಶದಲ್ಲಿ ಅಲ್ಲೋಲಕಲ್ಲೋಲ ವುಂಟಾಗುತ್ತದೆ. ಈಗ ಕರ್ಣಾಟಕ ಆಗ ಬೇಕೆಂದು ಯಾರು ಯಾರು ಹೇಳುತ್ತಿದ್ದಾರೆಯೋ ಅವರೆಲ್ಲರೂ ಕೂಡ ದೇಶದಲ್ಲಿ ಮುಂದೆ ಆಗತಕ್ಕಂಥ ಆಗು ಹೋಗು ಗಳಿಗೆಲ್ಲಾ ಜವಾಬ್ದಾರರಾಗಬೇಕಾಗುತ್ತದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri VIDYADHAR GURUJI SAYANNA (Gurmitkal).—(*Spoke in Hindi*)

†ಶ್ರೀ ಡಿ.ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಅಧ್ಯ ಕ್ಷರೇ, ಶ್ರೀ ಮಾಣಿ ಪಾಟೀಲರವರು ನಮ್ಮ ರಾಜ್ಯಕ್ಕೆ ಮೈಸೂರು ಎಂಬ ಹೆಸರು ಏನಿದೆ ಅದನ್ನು ಕರ್ನಾಟಕ ಎಂದು ಬದಲಾಯಿಸಬೇಕೆಂದು ತಂದಿರುವ ನಿರ್ಣ ಯಕ್ಕೆ ನನ್ನ ಸಂಪೂರ್ಣವಾದ ಒಪ್ಪಿಗೆಯನ್ನು ಕೊಡುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದಿ ದ್ದೇನೆ. ಈ ಒಂದು ನಿರ್ಣಯ ಈ ಸಭೆಯ ಮುಂದೆ ಬಹಳ ಹಿಂದೆಯೇ ಬಂದಿತ್ತು. ಈ ಒಂದು ಹೆಸರನ್ನು ಏಕೆ ಬದಲಾಯಿಸಬೇಕೆಂಬುದು ಮುಖ್ಯವಾದ ವಿಚಾರ. ಮಾನ್ಯ ಸದಸ್ಯರು ಪರವಾಗಿಯೂ ಮಾತನಾಡಿದ್ದಾರೆ, ವಿರೋಧವಾಗಿಯೂ ಮಾತನಾಡಿದ್ದಾರೆ. ಮಾತನಾಡ ತಕ್ಕ ಉದ್ವೇಗದ. ಉತ್ಸುಕತೆಯಲ್ಲಿ ಬಹುಶಃ ಈ ಹೆಸರು ಇರುವುದು ಉಚಿತವೇ ಅಲ್ಲವೇ, ಎಂಬ ವಿಷಯದಲ್ಲಿ ಹೆಚ್ಚು ಮಾತನಾಡದೇ ಇನ್ನು ಅನೇಕ ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದಾರೆ. ಎಂದರೆ ಪ್ರಸ್ತಾಪಿಸುವುದಕ್ಕೆ ಇರ ತಕ್ಕ ವಾತಾವರಣ ಮನಸ್ಸಿನಲ್ಲಿರತಕ್ಕ ಉತ್ಸುಕತೆ, ಉದ್ವೇಗ ಹಾಗೂ ಆಯಾಯಾ ಹೆಸರುಗಳಲ್ಲಿ ಅವರವ ರಿಗಿರತಕ್ಕ ಗೌರವ, ಪ್ರೀತಿಯೇ ಕಾರಣವಾಗಿದೆ. ಅವರು ತಪ್ಪು ಎಂದು ನಾನಾದರೂ ಭಾವಿಸುವುದಿಲ್ಲ. ಈಗಿರತಕ್ಕ ವಿಶಾಲ ಮೈಸೂರು ಹೇಗೆ ಆಯಿತು ಎಂದರೆ ಮೈಸೂರು ರಾಜ್ಯ ಇತ್ತು, ಹೈದರಾಬಾದು ಕರ್ನಾಟಕ ಪ್ರಾಂತ ಎಂದಿತ್ತು. ಬೊಂಬಾಯಿ ಕರ್ನಾಟಕ ಭಾಗ, ದಕ್ಷಿಣ ಕನ್ನಡ, ಕೊಡಗು ಈ ಎಲ್ಲಾ ಭಾಗಗಳೂ ಸೇರಿ ನಮ್ಮ ಈ ಒಂದು ಹೊಸ ರಾಜ್ಯ ಸ್ಥಾಪನೆ ಆಯಿತು. ಈ ರಾಜ್ಯ ಸ್ಥಾಪನೆ ಆದಾಗ ಎಂದರೆ, 19 6ನೇ ಇಸವಿಯಲ್ಲಿ ಇದಕ್ಕೆ ಹೆಸರು ಇಡುವಾಗ ಏಕೆ ಕರ್ನಾಟಕ ಎಂದು ಇಡಲಿಲ್ಲ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಅದಕ್ಕೆ ಉತ್ತರವಾದರೂ ಇಷ್ಟೇ: ಹೊರಗಡೆ ಪ್ರಾಂತದ ಕನ್ನಡ ಬಾಂಧವರು ಏಕೀಭವಿಸಬೇಕೆಂದು ಕೂಗಿದಾಗ ಮೈಸೂರಿನ ಅನೇಕ ಜನ ಮಾನ್ಯ ಸ್ನೇಹಿತರು ಮೈಸೂರನ್ನು ಮೈಸೂರಾಗಿಯೇ ಉಳಿಸಿಕೊಳ್ಳ ಬೇಕೆಂಬ ವಾದಮಾಡಿ, ಚಳವಳಿ ಎದ್ದು, ಅವರನ್ನು ಒಂದು ಸಮಾಧಾನ ಪಡಿಸಿ, ಅವರಿಗೆ ಒಂದು ತೃಪ್ತಿ ಕರವಾದ ರೀತಿಯಲ್ಲಿ ವ್ಯವಹರಿಸಬೇಕೆಂಬ ರಾಜಕೀಯ ಜಾಣ್ಮೆ, ದೂರ ದೃಷ್ಟಿಯಿಂದ, ಎಲ್ಲಕ್ಕಿಂತಲೂ ಹೆಚ್ಚಾಗಿ, ಹೆಸರು ಇಡುವುದಕ್ಕಿಂತಲೂ ಹೆಚ್ಚಾಗಿ, ಕನ್ನ ಡಿಗರ ಒಕ್ಕೂಟ ಆಗಬೇಕು, ಕನ್ನಡ ಭಾಷೆ ಮಾತನಾ

ಡತಕ್ಕ ಎಲ್ಲ ಜನಗಳಿಗೆ ಒಂದು ಸರ್ಕಾರ ಬರಬೇಕು, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಬೆಳೆಯ ಬೇಕು, ಕನ್ನಡನಾಡು ಸಾಮೂಹಿಕವಾಗಿ ದೊಡ್ಡದಾಗಬೇಕು, ಭರತ ಖಂಡದಲ್ಲಿ ಕನ್ನಡ ದೇಶದ ಕೀರ್ತಿ ವಿಸ್ತಾರವಾಗಿ ಬೆಳೆಯಬೇಕೆಂಬ ವಿಶಾಲವಾದ ದೃಷ್ಟಿಯಿಂದ ಮೈಸೂರು ಎಂಬುದಾಗಿ ಕರೆಯೋಣ ಎಂದು ಆಗ ವ್ಯವಹರಿಸಿದ ಮುಖಂಡರು ಮೈಸೂರು ಎಂದು ಕರೆದರು. ಆ ರೀತಿ ಒತ್ತಾಯ ಪಡಿಸಿದವರನ್ನಾಗಲೀ, ಕರ್ನಾಟಕ ಎಂದು ಕರೆದರೆ ಚೆನ್ನಾಗಿತ್ತು ಎಂದು ಭಾವನೆ ಇಟ್ಟುಕೊಂಡವರನ್ನಾಗಲೀ ಯಾರನ್ನೂ ನಾನು ಟೀಕಿಸುತ್ತಿಲ್ಲ. ಆ ರೀತಿ ಟೀಕೆ ಮಾಡುವುದರಲ್ಲಿ ಅರ್ಥವಿಲ್ಲ. ಈ ಒಂದು ಹೆಸರಿನಿಂದ ಕರೆದು, ಒಗ್ಗಟ್ಟಾಗಿ ಸೇರಿ, ಸಾಮರಸ್ಯದಿಂದ ಯಾವ ಭಾಗ ಆರ್ಥಿಕವಾಗಿ ಬೆಳೆದಿದೆ, ಯಾವ ಭಾಗದಲ್ಲಿ ಮಾರ್ಗ ಸೌಕರ್ಯವಿಲ್ಲ, ಪಾಠಶಾಲೆ ಇಲ್ಲ, ಆಸ್ಪತ್ರೆ ಇಲ್ಲ ಆ ಭಾಗಕ್ಕೆ ಇತರ ಕಡೆಗೆ ತೊಂದರೆ ಆದರೂ ಕೂಡ ಆ ಭಾಗದ ಸೌಕರ್ಯ ಮನಸ್ಸಿನಲ್ಲಿಟ್ಟುಕೊಂಡು ನಾವೆಲ್ಲಾ ಕನ್ನಡ ತಾಯಿಯ ಮಕ್ಕಳು ಎಂದು ಭಾವಿಸಿ ಎರಡುಕೋಟಿ ಕನ್ನಡಿಗರೂ ಸಂಕುಚಿತ ಭಾವನೆಯನಿಟ್ಟುಕೊಳ್ಳದೆ ಹೇಗೆ ಈವರೆಗೂ ನಡೆದು ಕೊಂಡು ಬಂದಿದ್ದೇವೆಯೋ ಈ ಒಂದು ಪರಿಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡ ಪಕ್ಷದಲ್ಲಿ ಈ ಹೆಸರಿನ ವಿಷಯದಲ್ಲಿ ಎಲ್ಲರೂ ಕೂಡ ತಾಳ್ಮೆಯಿಂದ ದೂಗದೃಷ್ಟಿಯಿಂದ ಆಲೋಚನೆ ಮಾಡಬೇಕೆಂದು ನಾನಾದರೂ ಕೂಡ ಪ್ರಾರ್ಥನೆ ಮಾಡುತ್ತೇನೆ. ಈ ಪ್ರಾಂತ ರಚನೆ ಆಗುವ ಕಾಲದಲ್ಲಿ ಅನೇಕ ಜನ ಮಾನ್ಯ ಸ್ನೇಹಿತರು ಎಂದರೆ, ಹೊರಗಡೆಯಿಂದ ಬಂದಂಥ ಜನ ಮೈಸೂರಿಗೆ ಬಂದು ನಾವು ಸೇರಿದೆವು ಎನ್ನುವುದು ತಪ್ಪಾಗುತ್ತದೆ ಎಂದು ಅಂದುಕೊಂಡರು. ಮೈಸೂರಿನವರು ನೀವು ಬಂದು ಸೇರಿದಿರಿ, ಸೇರಿಸಿಕೊಂಡೆವು ಎಂದು ಅಂದರು. ಸ್ಟೇಟ್ಸ್ ರೀಆರ್ಗನೈಸೇಷನ್ ರಿಪೋರ್ಟ್‌ನಲ್ಲಿ ಇದು ಸ್ಪಷ್ಟವಾಗಿದೆ.

6-30 P.M.

> "These differences relate principally to two matters, namely, the financial prospects of the Karnataka State and the desirability of integrating in the proposed Karnataka State the State of Mysore which claims to have a distinct administrative and cultural tradition."

ಹೊಸದಾಗಿ ಆಗತಕ್ಕ ಒಂದು ರಾಜ್ಯಕ್ಕೆ ಮಿಕ್ಕ ಭಾಗಗಳು ಹಾಗೂ ಮೈಸೂರೂ ಸೇರಿದವು. ಮೈಸೂರಿಗೆ ಒಂದು distinct administration and cultural tradition ಇತ್ತು ಎಂದು ನಾವು ಹೆಮ್ಮೆಪಡುವ ವಿಚಾರ. ಕರ್ನಾಟಕದಿಂದ ಬಂದವರೂ ಕೂಡ ಹೆಮ್ಮೆ ಪಡಬಹುದು. Distinct administration and cultural tradition ಏನೆಂದರೆ, ಮೈಸೂರಿನವರು ನೂರಾರು ವರ್ಷಗಳಿಂದ ಆದರ್ಶ ರಾಜರ ರಾಜ್ಯದಲ್ಲಿ ಬಂದ ಜನರು. ಭಾರತದ ಆರುನೂರು ಜನ ರಾಜರು ಸಿಂಹಾಸನವನ್ನು ಬಿಟ್ಟು ಹೋಗುವಾಗ ನಮ್ಮ ರಾಜರೂ ತಮ್ಮ ಸಿಂಹಾಸನವನ್ನು ಕಳೆದುಕೊಳ್ಳಬೇಕಾಯಿತು. ಆದರೂ ಜನರಿಗೆ ಇವರಲ್ಲಿರುವ ವಿಶ್ವಾಸದಿಂದ ಇವರನ್ನು ಗವರ್ನರ್ ಆಗಿ ಉಳಿಸಿಕೊಂಡಿದ್ದಾರೆ. ಹೊಸ ರಾಜ್ಯವನ್ನು ನಿರ್ಮಾಣ ಮಾಡಲು ಮೈಸೂರು ಬೇರೆ ಭಾಗಗಳಿಗೆ ಸೇರಿದೆಯೋ ಅಥವಾ ಮೈಸೂರಿಗೆ ಆ ಭಾಗಗಳು ಸೇರಿದುವೋ ಎಂಬ ಒಂದು ಪ್ರಶ್ನೆ ಬಂತು. ಶ್ರೀಮಾನ್ ದೇವರಾಜ ಅರಸಿನವರು ಹೇಳಿದ ಹಾಗೆ, 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ' ಎಂಬಂತಾಗಿದೆ. ಎರಡು ಕೋಟಿ ಜನ ಕನ್ನಡಿಗರು ಸೇರಿ ಹೊಸ ರಾಜ್ಯವನ್ನು ಸ್ಥಾಪನೆ ಮಾಡಿದೆವು. ಅದಕ್ಕೆ ತಾತ್ಕಾಲಿಕವಾಗಿ ಮೈಸೂರು ಎಂದು ಇಟ್ಟುಕೊಂಡೆವು. ನನ್ನ ಅಭಿಪ್ರಾಯದಲ್ಲಿ ಅದಕ್ಕೆ ಕರ್ನಾಟಕ ಎಂದು ಹೆಸರನ್ನಿಡಬೇಕಾಗಿತ್ತು. ಆದರೆ ಏಕೆ ಆಗಲೇ ಇಡಲಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದೇನೆ. ಅದೇ ವರದಿಯಲ್ಲಿ ಮುಂದುವರಿದು,

> "The Karnataka State so constituted will have a population of about 19 millions and an area of about 72,730 square miles, possessing large forest wealth and a good soil. Also there will be no serious dislocation because the existing Mysore State provides an administrative machinery, a Capital and a High Court and all the other appurtenances of a modern government".

ಎಂದು ಹೇಳಿದ್ದಾರೆ. ಮೈಸೂರಿನ ವೈಶಿಷ್ಟ್ಯವೇನೆಂದರೆ, ಹೈಕೋರ್ಟಿದೆ, ರಾಜಧಾನಿಗೆ ಸುಂದರವಾದ ಬೆಂಗಳೂರಿದೆ, ಪ್ರಪಂಚದಲ್ಲಿ ಎಲ್ಲಿಯೂ ಇಲ್ಲದ ವಾತಾವರಣ ಬೆಂಗಳೂರಿನಲ್ಲಿದೆ, ಇಲ್ಲಿ ಸುಂದರವಾದ ವಿಧಾನಸೌಧವಿದೆ. ಇವೆಲ್ಲವೂ ಇದಕ್ಕೆ ನೆರವು ಕೊಟ್ಟವು, ಹಿಂದೆ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಹನುಮಂತಯ್ಯನವರ ಹೆಸರನ್ನು ಪ್ರತಿಯೊಬ್ಬ ಕನ್ನಡಿಗನೂ ನೆನಸಬೇಕೆಂದು ಹೇಳುತ್ತೇನೆ. ಮೈಸೂರಿನ ದೊಡ್ಡಸ್ತಿಕೆ ಸಾರ್ಥಕವಾಗಬೇಕಾದರೆ, ನಾವೆಲ್ಲರೂ ವಿಶಾಲವಾದ ದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡಬೇಕು. ಶ್ರೀಗಳಾದ ಟಿ. ಮಾದಯ್ಯಗೌಡರೂ ಕೃಷ್ಣ ಅವರೂ ಬಹಳ ಆತ್ಮೀಯತೆಯಿಂದ ಮತ್ತು ನಯವಾದ ಹೃದಯದಿಂದ ಮಾತನಾಡಿದರು. ಅವರ ಮಾತನ್ನು ಮೆಚ್ಚಬೇಕು. ನಾವು ಅವರಿಗೆ ಕೃತಜ್ಞತೆಯನ್ನು ಸೂಚಿಸಬೇಕು. ಆದರೆ ಚಾರಿತ್ರಿಕವಾಗಿ, ಅನೇಕ ಘಟನಾವಳಿ, ನಾವು ಇಚ್ಛಿಸಲಿ ಇಲ್ಲದಿರಲಿ ನಡೆಯುತ್ತವೆ. ಹಾಗೆಯೇ ಕರ್ನಾಟಕವಾದಮೇಲೆ ಹೊರಗಿನಿಂದ ಬಂದ ಕೋಟ್ಯಂತರ ಜನರಲ್ಲಿ ಮೈಸೂರನ್ನೇ ಇಟ್ಟುಕೊಳ್ಳಬೇಕೆಂಬ ಪ್ರೀತಿ ಇದ್ದರೆ ಅದು ಬೇರೆ. ನಾವು ಒಂಭತ್ತು ಜಿಲ್ಲೆಗಳವರು ನಡೆಸಿಕೊಂಡು ಬಂದಿರುವ ಮೈಸೂರಿಗೆ ಒಂದು ಚರಿತ್ರೆ ಇದೆ, ಒಂದು ಸಂಸ್ಕೃತಿ ಇದೆ ನಿಜ. ಆದರೆ ಕರ್ನಾಟಕ ಎನ್ನುವುದಕ್ಕೆ ಇನ್ನೂ ಹೆಚ್ಚಾಗಿದೆ, ಅದು ವಿಶಾಲವಾದುದು. ಕರ್ನಾಟಕ ಎನ್ನುವದು ಚರಿತ್ರೆಯಲ್ಲಿ ಎಲ್ಲಿದೆ ಎಂದು ಶ್ರೀಮಾನ್ ದೇವರಾಜ ಅರಸಿನವರು ಕೇಳಿದರು. History of Deccan ಎಂಬ ಗ್ರಂಥವನ್ನು ನೋಡಿದರೆ ಗೊತ್ತಾಗುತ್ತದೆ. ಸಾವಿರ ವರ್ಷಗಳ ಹಿಂದಿನಿಂದಲೂ ಪಲ್ಲವರು, ಕದಂಬರು, ರಾಷ್ಟ್ರಕೂಟರು ಕರ್ನಾಟಕದಲ್ಲಿ ರಾಜ್ಯಭಾರ ಮಾಡಿದರೆಂಬುದು ಅದರಲ್ಲಿ ಉಲ್ಲೇಖವಾಗಿದೆ. ಚರಿತ್ರೆಯ ಅಧ್ಯಾಪಕರಾಗಿದ್ದ ಡಾ|| ಕೃಷ್ಣ

(ಶ್ರೀ ಡಿ. ಎಂ. ಸಿದ್ದಯ್ಯ)

ಎಂಬುವರು ದಕ್ಷಿಣ ದೇಶದ ಚರಿತ್ರೆಯಲ್ಲಿ ಕರ್ಣಾಟಕದ ಚರಿತ್ರೆ ಅರ್ಥದಪ್ಪಿದೆಯೆಂದು ಹೇಳಿದ್ದಾರೆ. ಈ ಎಲ್ಲ ದೃಷ್ಟಿಯಿಂದಲೂ ಮೊದಲಿನಿಂದ ಯಾವ ರೀತಿ ಈ ನಾಡು ಕರ್ಣಾಟಕವೆಂದು ಹೆಸರನ್ನಿಟ್ಟುಕೊಂಡು ಬಂದಿತೋ ಹಾಗೆ ಅದೇ ಹೆಸರನ್ನು ಪುನಃ ಇಡುವುದರಲ್ಲಿ ನಾವೆಲ್ಲರೂ ಸಹಕರಿಸಬೇಕು.

ಕರ್ಣಾಟಕ ಎಂಬ ಹೆಸರನ್ನೇ ಏಕಿಡಬೇಕೆಂದು ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದರು, ಅದಕ್ಕೆ ಉತ್ತರ ಹೇಳುತ್ತೇನೆ. ಕನ್ನಡ ನಾಡಿನ ಚರಿತ್ರೆಯನ್ನು ನೋಡಿದರೆ ಅದಕ್ಕೆ ಉತ್ತರ ದೊರಕುತ್ತದೆ.

"...ಕರ್ನಾಡು ಎಂಬ ಮಾತೇ ಶುದ್ಧ ದ್ರಾವಿಡ ಮೂಲದಿಂದ ಬಂದುದೆಂಬುದು, ಶಕ 556ರ (ಕ್ರಿ.ಶ. 634) ಗಂಗರಾಜ ಭೂವಿಕ್ರಮನ ತಾಮ್ರಶಾಸನವನ್ನು ನೋಡಿದರೆ ತೆರೆದು ಕಾಣುವುದು. ಅದನ್ನು ಬಹುಮಟ್ಟಿಗೆ ಸಂಸ್ಕೃತದಲ್ಲಿ ಬರೆದಿದ್ದರೂ ಜನದ ನುಡಿಯನ್ನು ಅಲ್ಲಿ ಕರ್ಣಾಟಕ ಎಂದು ಕರೆದಿದೆ. ಬಹುಶಃ ಈ ಮಾತಿನ ಅತಿ ಮೊದಲ ರೂಪ ಕನ್ನಾಡು ಇರಬೇಕು. ಹೆಸರುಗಳನ್ನೆಲ್ಲ ಸಂಸ್ಕೃತ ರೂಪಕ್ಕೆ ತಿರುಗಿಸುವ ಸರ್ವವ್ಯಾಪಕವಾದ ಆಗಿನ ಸಂಪ್ರದಾಯದ ಫಲವಾಗಿ ಆ ಮಾತನ್ನು ಕರ್ನಾಟ ಮತ್ತು ಕರ್ನಾಟಕವೆಂದು ತಿರುಗಿಸಿರಬೇಕು. ಆದ್ದರಿಂದಲೇ ಬಹುಶಃ ಕ್ರಿ.ಶ. 9 3ರ ಶಿಲಾಲೇಖವೊಂದರ ಸಂಸ್ಕೃತ ಭಾಗಗಳಲ್ಲಿ ಈ ಮಾತು ಕರ್ಣಾಟ ಎಂದಿರುವುದು. ಕನ್ನಾಡು ಅಥವಾ ಕರ್ನಾಡು ಎಂಬ ಪದದ ಮೂಲ ಅರ್ಥ "ಒಂದು ಮಹಾ ನಾಡು" ಅಥವಾ 'ಒಂದು ಎತ್ತರವಾದ ನಾಡು ಆಗಿದ್ದು ಅದನ್ನು ಸಂಸ್ಕೃತಕ್ಕೆ ತಿರುಗಿಸಿದಾಗ ಅದು "ಮಹಾರಾಷ್ಟ್ರ"ವಾಗಿ ಆದುದು ಅಸಂಭವವಲ್ಲ. ಬಹುಶಃ ಇದೇ ಅರ್ಥದಲ್ಲಿಯೇ ಪಶ್ಚಿಮ ಚಾಲುಕ್ಯ ಚಕ್ರವರ್ತಿ ಎರಡನೆಯ ಪುಲಕೇಶಿಯು ವಿಸ್ತಾರವಾದ ಚಕ್ರಾಧಿಪತ್ಯವನ್ನು ನಿರ್ದೇಶಿಸಲು ಅದನ್ನು ಉಪಯೋಗಿಸಿರುವುದು. ಆತನು (ಕ್ರಿ.ಶ. 7ನೆಯ ಶ.ಮಾ.) 99,000 ಹಳ್ಳಿಗಳುಳ್ಳ ತ್ರಿಮಹಾರಾಷ್ಟ್ರಗಳಿಗೆ ಒಡೆಯನೆಂದು ಹೇಳಿದೆ. ಕ್ರಮವಾಗಿ ಮಹಾರಾಷ್ಟ್ರ ಎಂಬ ಹೆಸರು ಕರ್ನಾಟಕದ ಒಡಲಿನ ಉತ್ತರ ಭಾಗಗಳಿಗೂ ಹೆಚ್ಚು ಪುರಾತನವಾದ ಕರ್ನಾಡು ಎಂಬ ಅಂಕಿತ, ದೇಶದ ಮಿಕ್ಕ ಭಾಗಕ್ಕೂ ಉಳಿದುಕೊಂಡಿರಬೇಕು."

ಈ ಗ್ರಂಥವನ್ನು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ಸಂಪಾದಕತ್ವದಲ್ಲಿ ಡಾ॥ ಸಾಲೆತೊರೆ, ಎಂ.ಎ., ಪಿ.ಎಚ್‌ಡಿ. ಅವರು ಬರೆದಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರಲ್ಲಿ ಎಲ್ಲವೂ ಊಹಾ ಪೋಹ, ಹೀಗಿತ್ತೋ ಏನೋ ಎಂದಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸದಸ್ಯರು ಏನಾದರೂ ಅಭಿಪ್ರಾಯವನ್ನಿಟ್ಟುಕೊಳ್ಳಬಹುದು.

ದೊಡ್ಡದಾದ ನಾಡಿಗೆ ಮಹಾರಾಷ್ಟ್ರ ಎಂದು ಅರ್ಥ. ಎರಡು ಕೋಟಿ ಕನ್ನಡಿಗರು ಕೂಡಿರತಕ್ಕ ಭಾಗವನ್ನು ಮೈಸೂರು ಎನ್ನುವುದು ಉಚಿತವೆ ಅಥವಾ ಕರ್ಣಾಟಕ ಎನ್ನುವುದು ಉಚಿತವೆ ಎಂಬುದನ್ನು ಯೋಚನೆ ಮಾಡಬೇಕು. ಅದರಲ್ಲಿಯೂ ಶ್ರೀಮಾನ್ ಮುಕ್ಕಣ್ಣಪ್ಪನವರಿಗೆ ಇದು ವೇದ್ಯವಾಗಿದೆ ಎಂದು ತಿಳಿದುಕೊಂಡಿದ್ದೇನೆ. ಈ ಸಂಬಂಧವಾಗಿ ನಾನು ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ಪ್ರಜಾಪ್ರಭುತ್ವ ತತ್ವಕ್ಕನುಸಾರವಾಗಿ ಇದನ್ನು ಓಟಿಗೆ ಹಾಕುವುದು ಆದರ್ಶ ಮಾರ್ಗವಾದರೂ ಎಲ್ಲ ಸದಸ್ಯರೂ ಏಕಕಂಠದಿಂದ ಒಪ್ಪಿ, ಈ ..ವರ್ಗಿಂಗೆ ಸುಂದರವಾದ ನಾಡಿಗೆ ಕರ್ಣಾಟಕ ಎಂದು ಹೆಸರನ್ನಿಡಬೇಕೆಂದು ಪ್ರಾರ್ಥಿಸುತ್ತೇನೆ.

Sri B. R. SUNTHANKAR (Belgaum City).—Mr. Speaker, I thank you for giving me an opportunity to express my views on this very important subject. I am a Maharashtrian and as a Maharashtrian, I submit, that I can take an objective view of things, a third man's view of the situation. Whenever I take such an objective view I feel surprised at such outbursts of passion, so much of wrangling and such heated debate and discussion for a long time on such a simple matter. It is a very simple matter—either the name should be Mysore or Karnatak. But looking to the discussion, charges and counter charges levelled against each others it only presents a sad and dismal feature. The first question that arises before one's mind is, as it arose before my mind, where are we leading to? Where are we going?. Is this emotional integration? Is this national integration? Is this unity? Is this the integration we are seeking for? Where are we going? That is the first question that comes up before my mind. The States have been re-organised and with the reorganisation of States, it was expected that emotional integration would be achieved in those different re-organised units of India. But whenever we look to such differences of opinion on such a simple matter, I feel, Sir, we are far from achieving this emotional integration. The first thing required particularly in this State, is the background for emotional integration which is lacking. That background is not there. Prior to 19 6, Kannadigas were scattered and were divided in 19 different administrative jurisdictions in the various Deccan States. They have now come together. Still, even though the State is reorganised, and most of the Kannada people have come under one administrative unit, there are large areas even now of considerable population of Kannada people which are included in different States. And, similarly, Sir, as my honourable colleague Sri V. S. Patil has pointed out, a large number, about seven lakhs of Marathi people are thrust into this State in spite of

their wishes. It is with only an objective view......

AN HON'BLE MEMBER—So this is your objective view.

Sri B. R. SUNTHANKAR.—Yes, it is not subjective. I am not bringing any new problem in this.

Sir, the President of India, Hon'ble Sri Radhakrishna, gave us a very good piece of advice the other day. He said that Mahishasura should be controlled. There has been too much of a spirit of Mahishasura in this House. That should be controlled first. Every speaker who spoke here appealed to the other side to look at this problem dispassionately. But, while he was so appealing, he was doing so in such a manner that he was himself overwhelmed with passion, with full of emotion and enthusiasm. He was appealing to the other side to be dispassionate. It is very essential, that the spirit of Mahishasura should be controlled and checked. Another very good piece of advice which the Hon'ble President gave us was that there are mental slums and that these mental slums should be removed first. There are here, in our thinking, so many mental slums that they have got to be removed first. That should be done first. The Chamundeswari of reason should come here and remove all the mental slums of all these Mahishasuras.

Sir, I was surprised at the declaration of the Leader of the Ruling Party that this is not a policy matter. I agreed with my Hon'ble friend Mr. Gopala Gowda when he said that it was a defeat of his leadership. Certainly, it is his defeat, a failure of his leadership I regret very much to note that Hon'ble Sri Nijalingappa, as Leader of the House and the leader of the ruling party, has failed to give a lead in this matter to this State, to the Kannada people. That has been his weakness. I do not say it is his bankruptcy. It is his weakness. To say that it is not a policy matter — that means it is lack of policy. He should have, as it is expected of him, as Leader of the new State, given a definite lead to this House, as well as to the people of the State. I think this weakness is his dismal failure.

Then, when there are such sharp differences of opinion, I think, we as democrats, should not try to impose a decision on others, especially when there is such a considerable volume of opposition. Any decision in haste should not be imposed. It should not be thrust on others. As democrat this House should do it. That is what I think. I appeal to all the Kannadawallas not to go fast, but go slowly. Then, Sir, about history...

Mr SPEAKER.—The hon. Member is beginning history now! I do not mind his beginning history. But he has only two minutes more There are several others. After all, he has given the best piece of advice.

Sri B. R SUNTHANKAR.—I will finish this point.

Mr. SPEAKER. -If the hon Member begins history, I will be certainly unhappy. If he can complete in two minutes, it will be allright.

Sri B. R. SUNTHANKAR Then, Sir, so much of history has been talked. But digging up of history is not going to serve the purpose of both. We learn many things from history. But, at times, history is a very slippery ground In the past what we call Karnataka, Maharashtra, Tamilnad, etc., never existed. This idea of regionalism and nationalism was thrown up with the advent of the British......

Mr. SPEAKER.—I thought he would finish. But he is developing a new point.

Sri B. R. SUNTHANKAR.—I will conclude, Sir. The consummation of Karnataka is not yet complete. It has just begun. It is yet to be completed. For that consummation, two things are necessary. For two reasons the consummation is not complete. The first reason is that there should be one uniformity throughout the whole of Kannada speaking region. That uniformity is lacking. I would take this opportunity to appeal to leaders in various fields of Karnatak to work for that uniformity which is lacking. Secondly, the consummation is not complete because, as I already said,

(SRI B. R. SUNTHANKAR)

there are a large number of Kannadigas outside the State. They should be brought inside. And, the Marathi people like us, who want to go back to Maharashtra—they should be sent out. Then the consummation will be complete and then really Karnataka will be a fit name. Till that time Karnataka should wait.

ಶ್ರೀ ಆವಲರೆಡ್ಡಿ (ಶಿಡ್ಲಘಟ್ಟ).—ಸ್ವಾಮಿ ಈ ದಿವಸ ಮೈಸೂರು ದೇಶಕ್ಕೆ ಕರ್ಣಾಟಕ ಎಂದು ಹೆಸರಿಡಬೇಕೆಂದು ತಂದಿರುವ ನಿರ್ಣಯದ ವಿಷಯದಲ್ಲಿ ನಮ್ಮ ಸ್ನೇಹಿತರನೇಕರು ಬಹಳವಾಗಿ ಮಾತನಾಡಿದ್ದಾರೆ. ನಾನು ಈ ನಿರ್ಣಯವನ್ನು ವಿರೋಧಿಸುತ್ತಾ ಹಲವಾರು ಮಾತುಗಳನ್ನಾಡಬೇಕೆಂದು ಇಚ್ಛಿಸುತ್ತೇನೆ. ಮೈಸೂರು ಎಂಬ ಹೆಸರಿರಬೇಕೇ ಅಥವಾ ಕರ್ಣಾಟಕ ಎಂಬ ಹೆಸರಿರಬೇಕೇ ಎಂಬ ವಿಷಯದಲ್ಲಿ ಮೆರಿಟ್ ಮತ್ತು ಡೀಮೆರಿಟ್ ವಿಚಾರ ಮಾತನಾಡಲು ನಾನು ಇಚ್ಛಿಸುವುದಿಲ್ಲ. ಮೈಸೂರಿನ ಒಂದು ವೈಶಿಷ್ಟ್ಯ, ಚರಿತ್ರೆ ಮುಂತಾದ್ದನ್ನು ಮಾನ ಮಿತ್ರರನೇಕರು ಬಹಳ ಚೆನ್ನಾಗಿ ಹೇಳಿದ್ದಾರೆ. ಇದನ್ನೂ, ಮಾನ್ಯ ಮಿತ್ರರ ಅಭಿಪ್ರಾಯವನ್ನೂ ನೋಡಿದರೆ ಎರಡು ಗುಂಪುಗಳು ಈ ಸಭೆಯಲ್ಲಿರುವುದು ಎದ್ದುಕಾಣುತ್ತದೆ. ಅನೇಕ ಜನರು ಕರ್ಣಾಟಕ ಎಂಬ ಹೆಸರು ಬಹಳ ಸೂಕ್ತ, ಬಹಳ ಸರಿಯಾಗಿದೆ ಎಂದು ಹೇಳುತ್ತಿದ್ದಾರೆ. ಹಾಗೆಯೇ ಅನೇಕ ಮಂದಿ ಮೈಸೂರು ಎಂಬುದು ಹಳೆಯ ಹೆಸರು, ಪುರಾತನ ಕಾಲದಿಂದ ಮೈಸೂರಿನಲ್ಲಿ ನಾವು ಬೆಳೆದಿದ್ದೇವೆ, ಅದೇ ಇರಬೇಕು ಎಂದು ಹೇಳುತ್ತಿದ್ದಾರೆ. ನಾನೂ ಮೈಸೂರು ಎಂಬ ಹೆಸರೇ ಇರಬೇಕೆಂದು ಹೇಳುವವರಲ್ಲಿ ಒಬ್ಬ. ನಮ್ಮ ಮಿತ್ರರು ಬಹಳ ಚೆನ್ನಾಗಿ ಹೇಳಿದ್ದಾರೆ. ರಾಜ್ಯ ದೊಡ್ಡದಾದಾಗ ಹೊರಗಿನಿಂದ ಬಂದ ನಾಯಕರು ಮತ್ತು ಹಳೆಯ ಮೈಸೂರಿನ ನಾಯಕರು ಸೇರಿ ಹೊಸ ರಾಜ್ಯಕ್ಕೆ ಒಂದು ಹೆಸರಿಟ್ಟಿದ್ದಾರೆ. ಆ ಹೆಸರಿಟ್ಟು ಕೇವಲ ಆರು ವರ್ಷಗಳಾಗಿವೆ. ಅದಾದಮೇಲೆ ಆ ಹೆಸರನ್ನು ಬದಲಾಯಿಸಬೇಕೆಂದು ಆಗಾಗಾಯ್ತು ಇಲ್ಲಿನವರೆಗೆ ಪರಂಪರೆಯಾಗಿ ನಿರ್ಣಯವನ್ನು ಈ ಸಭೆಯ ಮುಂದೆ ತರುತ್ತಿದ್ದಾರೆ.

ಮಾನ್ಯ ಮಂಜಪ್ಪನವರು ಹೇಳಿದ ಹಾಗೆ ಭಾವೈಕ್ಯತೆ ಇನ್ನೂ ನಮ್ಮಲ್ಲಿ ಬೆಳೆದಿಲ್ಲ. ಇನ್ನೂ ಅದು ಶೈಶವಾವಸ್ಥೆಯಲ್ಲಿದೆ. ಇನ್ನೂ ಹಲವಾರು ವರ್ಷಗಳು, ಅದು ಬೆಳೆಯುವ ತನಕ ಈ ಪ್ರಶ್ನೆಯನ್ನು ಬಿಡುವುದು ಒಳ್ಳೆಯದೆಂದು ಒಂದು ಒಳ್ಳೆಯ ಸೂಚನೆಯನ್ನು ಅವರು ಸಭೆಯ ಮುಂದಿಟ್ಟರು. ಹಾಗೆ ಹೇಳಿದ್ದರೂ, ಕರ್ಣಾಟಕದ ಪರವಾಗಿ ಮಾತನಾಡಿದ ನಮ್ಮ ಮಿತ್ರರು ಬಹಳ ಜೋರಾಗಿ, ಹಠ ಹಿಡಿದು ಕರ್ನಾಟಕವೆಂದು ಇಂದೇ ಹೆಸರಿಡಬೇಕೆಂದು ಹೊರಟಿದ್ದಾರೆ. ಅಷ್ಟೇ ಭಕ್ತಿ ನಿಷ್ಠೆಯಿಂದ 'ಮೈಸೂರು' ಪರವಾದ ಮಿತ್ರರೂ ಸಭೆಯ ಮುಂದೆ ತಮ್ಮ ವಾದವನ್ನು ಒತ್ತಿ ಹೇಳಿ ಅದಕ್ಕನುಸಾರವಾಗಿ ಟೀಕೆ ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಆದರೆ, ಒಟ್ಟಿನಲ್ಲಿ ಈ ಸಭೆಗೆ ಬಂದಿರತಕ್ಕ ಯಾವ ಸದಸ್ಯರೂ ಕೂಡ ತಮ್ಮ ಚುನಾವಣೆಯ ಕಾಲದಲ್ಲಿ ತಾವು ಮೈಸೂರಿನ ಹೆಸರನ್ನು ಬದಲಾಯಿಸುವುದನ್ನು ತೀರ್ಮಾನ ಮಾಡುವುದಕ್ಕೆ ಹೋಗುತ್ತಿದ್ದೇವೆಂದು ಹೇಳಿ, ಆ ಅಭಿಮತಕ್ಕೆ ಬೆಂಬಲ ಕೊಡಬೇಕೆಂದು ಹೇಳಿದ್ದರೆ, ಬಹುಶಃ ಅನೇಕ ಜನ ಸದಸ್ಯರು ಹಳೆಯ ಮೈಸೂರಿನ 9 ಜಿಲ್ಲೆಗಳಿಂದ ಚುನಾವಣೆಯಲ್ಲಿ ಗೆದ್ದು ಬರುತ್ತಿರಲಿಲ್ಲ. ಏಕೆಂದರೆ, ನಮ್ಮಲ್ಲಿ ಅನೇಕ ಜನ ಮೈಸೂರಿನ ಹೆಸರಿನ ಮೇಲೆ ಹೆಮ್ಮೆಯಿಟ್ಟಿದ್ದಾರೆ. ಶಾಸನಕಾರರ ಒಂದು creation ಈ ಪ್ರಶ್ನೆ, ಪ್ರಜೆಗಳ ಅಭಿಮತವಲ್ಲವೆಂದು ''ನಮ್ಮ ಮಿತ್ರರು ಹೇಳಿದರು. ಅದಕ್ಕೊಂದು ಉದಾಹರಣೆ ಹೇಳುತ್ತೇನೆ. ನಾನು ಕೋಲಾರ ಜಿಲ್ಲೆಗೆ ಹೋಗಿದ್ದಾಗ ಅಲ್ಲಿ ಹೊಲ ಉಳುತ್ತಿದ್ದ ಒಬ್ಬ ರೈತನಲ್ಲಿಗೆ ಹೋಗಿ ಕಾರು ನಿಲ್ಲಿಸಿ ಅತನನ್ನು ಕರೆದು, 'ಏನಪ್ಪಾ, ಈ ರಾಜ್ಯಕ್ಕೆ ಹೆಸರು ಬದಲಾಯಿಸಬೇಕೆಂದು ಹೇಳುತ್ತಿದ್ದಾರೆ, ಅದಕ್ಕೆ ನೀನು ಏನು ಹೇಳುತ್ತೀಯಾ' ಎಂದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ರೈತ ತಮಗೆ ಹೇಳಿದನೋ ; ತನಗೆ ಹೊಟ್ಟೆಗೆ ಹಿಟ್ಟಿಲ್ಲ ಮೈಗೆ ಬಟ್ಟೆಯಿಲ್ಲವೆಂದು !

Mr. SPEAKER.—If he does not yield the Hon'ble Member has no right to disturb him and that too from a wrong place. I thought it was the leader of the opposition who was intervening.

ಶ್ರೀ ಆವಲರೆಡ್ಡಿ.—ಆತ ಹೇಳಿದ, ''ರಾಜ್ಯದ ಆಡಳಿತವನ್ನು ಯಾರೇ ನಡೆಸಲಿ; ನಾನು ಕರ್ತವ್ಯನಿಷ್ಠನಾಗಿ ಬೆಳೆಯನ್ನು ಬೆಳೆದು ರಾಜ್ಯಕ್ಕೆ ಸಂಪಾದನೆ ಮಾಡಿಕೊಡುತ್ತೇನೆ. ಆದರೆ ಹೆಸರನ್ನು ಬದಲಾಯಿಸುವುದಾದರೆ ಅದಕ್ಕೆ ವಿರುದ್ಧವಾಗಿ ನಾನು ಏನು ಮಾಡಲೂ ಸಿದ್ಧವಾಗಿದ್ದೇನೆ'' ಎಂದ. ಹೀಗೆ 'ಕೇವಲ ಹೆಸರು ಬದಲಾಯಿಸುತ್ತಾರೆ' ಎಂದು ಹೇಳಿದ್ದಕ್ಕೆ ಆತನಿಗೆ ಇಷ್ಟೊಂದು ಆಕ್ರೋಶ ಉಂಟಾಯಿತು. ಇದೇ ರೀತಿ ಹಳೆಯ ಮೈಸೂರಿನಲ್ಲಿರತಕ್ಕ ಎಲ್ಲ ರೈತರೂ ಕೂಡ ವರ್ತಿಸುತ್ತಾರೆಂಬುದರಲ್ಲಿ ಸಂಶಯವಿಲ್ಲ. ಅದರಲ್ಲೂ ನಾನು ಕೋಲಾರ ಜಿಲ್ಲೆಯ ಪ್ರಜೆಗಳ ವಿಷಯವನ್ನು ಹೇಳುವುದಾದರೆ, ನನಗೆ ಈಗಾಗಲೇ ನೂರಾರು ಟೆಲಿಗ್ರಾಂಗಳು ದಿನವೂ ಬರುತ್ತಿವೆ ; ನೂರಾರು ಜನ ನನ್ನ ರೂಮಿನ ಹತ್ತಿರ ಕಾದಿರುತ್ತಾರೆ. ಒಂದು ವೇಳೆ ಈ ಸಭೆ ಹೆಸರನ್ನು ಬದಲಾಯಿಸುವುದಕ್ಕೆ ಒಪ್ಪಿದರೆ ಸತ್ಯಾಗ್ರಹ ಹೂಡಿ, ಮೈಸೂರಿನ ಹೆಸರನ್ನು ಉಳಿಸಿಕೊಳ್ಳುತ್ತೇವೆ, ಅದಕ್ಕೆ ಕಾಲ ಯಾವಾಗ, ತಿಳಿಸಿ ಎಂದು ಕೇಳುತ್ತಿದ್ದಾರೆ. ಇದೇ ರೀತಿ ಈ ಒಂಬತ್ತು ಜಿಲ್ಲೆಗಳ ಜನನಾಯಕರೂ ಕೂಡ ಈ ವಿಷಯದಲ್ಲಿ ಪರ್ಯಾಲೋಚನೆ ಮಾಡುತ್ತಿದ್ದಾರೆ. ಎಂದರೆ ಅದು ಅತಿಶಯೋಕ್ತಿಯಲ್ಲ. ಈ ರಾಜ್ಯವೇನೂ ಹೊಸದಾಗಿ ಏರ್ಪಾಡಾಗಿಲ್ಲ ; ಹೆಸರು ಬದಲಾವಣೆಯಾದರೇನೇ ರಾಜ್ಯದ ಅಭಿವೃದ್ಧಿ ಸಾಧನೆಯಾಗುವುದಿಲ್ಲ, ಹಿಂದುಳಿದ ಡಿಸ್ಟ್ರಿಕ್ಟ್‌ಗಳು ಹೋಗುವುದಿಲ್ಲವೆಂಬುದಾಗಿ ಅವರ ವಾದ. ಅಲ್ಲದೆ, ಈ ಸಂಸ್ಥಾನವನ್ನು ಬಹುಕಾಲ ಹೈದರಾಲಿ ಟಿಪ್ಪುಸುಲ್ತಾನ್ ಮುಂತಾದ ದೊರೆಗಳು ಆಳುತ್ತಿದ್ದರು. ಟಿಪ್ಪು ಕೋಲಾರ ಜಿಲ್ಲೆಯಲ್ಲಿ ಹುಟ್ಟಿದವನು. ಒಳ್ಳೆಯ ಮಂತ್ರಿಯಾಗಿ ಪೂರ್ಣಯ್ಯನವರಿದ್ದರು. ಅವರ ರಾಜ್ಯ ಸೇಲಂ, ಬಳ್ಳಾರಿ, ಮಂಗಳೂರುವರೆಗೂ ವಿಸ್ತರಿಸಿತ್ತು. ಮೇಧಾವಿಯಾದ ಪೂರ್ಣಯ್ಯನವರು ಈ ರೀತಿ ಹೆಸರು ಬದಲಾಯಿಸುವುದನ್ನು ಯೋಚಿಸಬಹುದಾಗಿತ್ತಲ್ಲವೇ ? ಅದನ್ನವರು ಯೋಚನೆ ಮಾಡಲಿಲ್ಲ. ಮೈಸೂರಿನ ಕೀರ್ತಿ ಕರ್ನಾಟಕದ ಜನರಮೇಲೆ ಅವಲಂಬಿಸಿದ್ದರೆ, ಆಗಿನ ಮಹಮ್ಮದೀಯ ಅರಸರು ಕರ್ನಾಟಕವೆಂತಲೇ

ಇಡಬಹುದಾಗಿತ್ತು. ಅವರು ಸ್ವತಂತ್ರ ಅರಸರಾಗಿದ್ದರು. ಆದರೂ ಅವರು ಅದನ್ನು ಮಾಡಲಿಲ್ಲ. ಮೈಸೂರೆಂಬ ಹೆಸರನ್ನೇ ಉಳಿಸಿಕೊಂಡರು. ಇದನ್ನರಿತೇ ನಮ್ಮ ನಾಯಕರು SRC ರಿಪೋರ್ಟ್ ಶಾಸನಸಭೆಯ ಮುಂದೆ ಬಂದಾಗ ಈ ಹೆಸರೇ ಈ ರಾಜ್ಯಕ್ಕಿರಬೇಕು, ಆ ಷರತ್ತಿನ ಮೇಲೆಯೇ ಒಪ್ಪುತ್ತೇವೆಂದು ಹೇಳಿ ರುಜು ಹಾಕಿದರು. ಆಗ ಈ ನಿರ್ಣಯದ ಪರವಾಗಿ ಮಾತನಾಡಿದ ಮಾನ್ಯ ಸ್ನೇಹಿತರುಗಳು ಕೂಡ ಒಪ್ಪಿದರು. ಈಗ ಆ ತೀರ್ಮಾನವನ್ನು ಬದಲಾಯಿಸುವುದಕ್ಕೆ ಪ್ರಯತ್ನಮಾಡಕೂಡದೆಂದು ಹೇಳುತ್ತೇನೆ.

ಕೆಲವು ಕವಿಗಳು ಈ ರಾಜ್ಯವನ್ನು 'ಕರ್ನಾಟಕ'ವೆಂದು ಹೇಳಿ ಹೊಗಳಿದ್ದಾರೆ, ಪಂಪ, ರನ್ನ ಎಲ್ಲರೂ ಕರ್ನಾಟಕ ಎಂಬ ಹೆಸರನ್ನೇ ಬಯಸಿದ್ದಾರೆ ಎಂದು ನಮ್ಮ ಮಿತ್ರರು ಹೇಳಿದರು. ''ರವಿ ಕಾಣದ್ದನ್ನು ಕವಿ ಕಂಡ'' ಎಂದು ನಾಣ್ಣುಡಿಯಿದೆ; ಅವರು ಕಲ್ಪನಾ ಪ್ರಪಂಚದಲ್ಲಿರುವವರು; ರಾಜರ ಕೃಪಾ ಪೋಷಣೆಯಲ್ಲಿ ಬೆಳೆಯುವವರು. ಬೊಮ್ಮನ ಪೋತನ್ನ ಎಂಬ ಒಬ್ಬ ಆಂಧ್ರ ಕವಿ, ರಾಜನ ಇಷ್ಟದಂತೆ ಕವಿತೆಯನ್ನು ಬರೆಯದೆ ಇದ್ದುದಕ್ಕಾಗಿ ರಾಜ ಆತನ ಹಲ್ಲುಗಳನ್ನು ಕೀಳಿಸಿದನಂತೆ. ಹೀಗಿರುವಾಗ ಕವಿಗಳು, ಬರಹಗಾರರು ಕರ್ನಾಟಕದ ಹೆಸರನ್ನು ಹೊಗಳಿದ್ದಾರೆಂದು ಹೇಳಿ ನಾವು ಈಗ ಅದಕ್ಕೆ ಪ್ರಶಸ್ತಿ ಕೊಡಬೇಕೆಂದು ಹೇಳುವ ವಾದವನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ನಮ್ಮ ಮಾನ್ಯ ಸ್ನೇಹಿತರು ಈ ನಿರ್ಣಯವನ್ನು ವಾಪಸು ತೆಗೆದುಕೊಂಡು ಸರಿಯಾದ ವಾತಾವರಣ ಒದಗಿದಾಗ ತರಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು ವಿರೋಧಿಸುತ್ತಾ ನಾನು ಈ ಸನ್ನಿವೇಶದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗಾಗಲೇ ಬಹುಮಂದಿ ಸದಸ್ಯರು ಈ ನಿರ್ಣಯದ ಪರ ಮತ್ತು ವಿರೋಧವಾಗಿ ಮಾತನಾಡಿರುವುದನು ಎರಡು ದಿವಸಗಳಿಂದಲೂ ನಾನು ಕೇಳಿದ್ದೇನೆ. ಅನೇಕ ಸದಸ್ಯರು ಈ ನಿರ್ಣಯವನ್ನು ಬಹಳ ತೆರದಲ್ಲಿ ಪುಷ್ಟೀಕರಿಸಿದ್ದಾರೆ. ಆದರೆ ಹೆಸರನ್ನು ಬದಲಾವಣೆ ಮಾಡುವ ಈ ಸಂದರ್ಭದಲ್ಲಿ ಇದು ಎಂಥ ಒಂದು ಕೆಟ್ಟಪರಿಣಾಮಕ್ಕೆ ಎಡೆಗೊಡುತ್ತದೆಂಬುದು ಎಲ್ಲರೂ ಯೋಚನೆ ಮಾಡಬೇಕಾದ ಅಂಶ. ಈ ಕೆಟ್ಟಪರಿಣಾಮಕ್ಕೆ ಅವಕಾಶ ಕೊಡುವುದಕ್ಕೆ ಮುಂಚೆ, ಈ ನಿರ್ಣಯಕ್ಕೆ ಇನ್ನೂ ಸರಿಯಾದ ಕಾಲ ಬಂದಿಲ್ಲ, ಇದರ ಪರವಾಗಿ ಬಹುಮಂದಿ ಇದ್ದರೂ, ವಿರೋಧವಾಗಿ ಸ್ವಲ್ಪ ಜನರಾದರೂ ಇದ್ದಾರೆ, ಅವರ ಮನಸ್ಸು ಪರಿವರ್ತನೆಯಾಗುವವರೆಗೂ ಅದನ್ನು ಮುಂದೂಡುವುದು ಉತ್ತಮ ಮಾರ್ಗವೆಂದು ಬಹುಮತವಿರತಕ್ಕ ಸದಸ್ಯರು ಅರಿತುಕೊಳ್ಳುವುದು ಉತ್ತಮ, ರಾಜಕಾರಣಿಗಳ ಲಕ್ಷಣವೆಂದು ಹೇಳುತ್ತೇನೆ. ಏಕೆಂದರೆ, ಈ ದಿವಸ ರಾಜಕೀಯದ ಜಾಣ್ಮೆಯಿಂದ ಈ ಹೆಸರನ್ನು ಮೈಸೂರು ಅಥವಾ ವಿಶಾಲ ಮೈಸೂರೆಂದೇ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು. ಆದರೆ, SRC ರಿಪೋರ್ಟಿನಲ್ಲಿರತಕ್ಕ ಒಂದು ತೀರ್ಮಾನವನ್ನು ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಉದಹರಿಸುವಂತೆ ಪ್ರಜಾಪ್ರಭುತ್ವದ ದೃಷ್ಟಿಯಿಂದ ಬಹುಮಂದಿ ಇದರ ಪರವಾಗಿ ಇರುವ ಸನ್ನಿವೇಶದಲ್ಲಿ ಬಹುಮತಾಭಿಪ್ರಾಯಕ್ಕೆ ತಲೆಬಾಗುವುದು ಸೂಕ್ತವೆಂದು ಅನೇಕರು ವಾದ ಮಾಡಿದ್ದಾರೆ. ಈ ನಿರ್ಣಯವನ್ನು ವಿರೋಧ ಮಾಡಿರುವವರು ಅಲ್ಪ ಸಂಖ್ಯಾತರಾದರೂ ಅವರ ಮನಸ್ಸಿಗೆ ಇದು ನೋವಾಗುತ್ತದೆ. ಅದರಿಂದ ಒಂದು ಕೆಟ್ಟ ಪರಿಣಾಮವಾಗುತ್ತದೆ. ಇದನ್ನು ಬಹುಮತದ ಸದಸ್ಯರು ಅರಿತುಕೊಂಡು ಈ ನಿರ್ಣಯವನ್ನು ಮುಂದೂಡುವುದಕ್ಕೆ ಏರ್ಪಾಡು ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

7-00 P.M.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).–ಸ್ವಾಮಿ, ಈಗ ಕರ್ಣಾಟಕವೆಂಬ ಹೆಸರಿನ ನಿರ್ಣಯ ನಮ್ಮ ಮುಂದಿದೆ. ಇನ್ನು ಈ ಪ್ರಶ್ನೆಮೇಲೆ ವಿಚಾರ ಮಾಡುವ ಹೊತ್ತಿಗೆ ಕೆಲವರು ಈ ರಾಜ್ಯವನ್ನು ಹಳೆಯ ಮೈಸೂರು ಮತ್ತು ಹೊಸ ಮೈಸೂರಿನವರ ವಾದವೆಂಬ ಒಂದು ಅಭಿಪ್ರಾಯವನ್ನು ತಾಳಿದ್ದಾರೆ. ಈ ವಾದ ಖಂಡಿತವಾಗಿ ಸರಿಯಲ್ಲ. ಅದು ತಪ್ಪು ವಾದವೆಂದು ನಾನು ಹೇಳುತ್ತೇನೆ. ಇದಕ್ಕಿಂತ ಹೆಚ್ಚಿನ ಆಘಾತ ದೇಶಕ್ಕೆ ಉಂಟುಮಾಡುವುದು ಮತ್ತೊಂದು ಬೇರೆ ಯಾವುದೂ ಇಲ್ಲ. ಈಗ ನಾವೆಲ್ಲಾ ಒಂದೇ ರಾಜ್ಯದಲ್ಲಿ ಕೂಡಿದ್ದೇವೆ. ಆದ್ದರಿಂದ ಈ ರಾಜ್ಯಕ್ಕೆ ಏನು ಹೆಸರು ಇಡಬೇಕೆಂಬುದನ್ನು ಈಗಲೇ ಆಲೋಚನೆ ಮಾಡಬೇಕಾಗಿದೆ. ಈ ವಿಷಯವನ್ನು ನಾನು ಈ ಸಭೆಯಲ್ಲಿ ಮೇಲಿಂದಮೇಲೆ ಒತ್ತಾಯ ಮಾಡಿ ಹೇಳುತ್ತಲೇ ಇದ್ದೇನೆ. ನನ್ನ ಅನೇಕ ಹಿರಿಯ ಮಿತ್ರರು, ಕರ್ಣಾಟಕವೆಂಬ ಹೆಸರನ್ನು ಈ ರಾಜ್ಯಕ್ಕೆ ಇಡುವುದೇ ಒಳ್ಳೆಯದೆಂದು ಒಪ್ಪಿಕೊಂಡಿದ್ದಾರೆ. ಪಾರ್ಲಿಮೆಂಟಿನೊಳಗೆ ಹಿಂದೆ ಕಾನೂನು ಸಹ ಆಗಿದೆ ಎಂದು ನಾನು ಹೇಳುತ್ತೇನೆ. ಮೊದಲೇ ಇದನ್ನು ಯಾವ ರೀತಿ ಅವರು ಒಪ್ಪಿಕೊಂಡಿದ್ದಾರೆ ಎಂಬುದನ್ನು ಯೋಚನೆ ಮಾಡಬೇಕು. ಹಿಂದೆ ಕರ್ಣಾಟಕವೆಂಬ ಹೆಸರು ನಮ್ಮ ಕನ್ನಡ ನಾಡಿಗೆ ಇದ್ದದ್ದು ಅದು ಯಾವ ಒಂದು ಪರಿಸ್ಥಿತಿಯಿಂದ ಈಗಿನ ರೀತಿ ಬದಲಾವಣೆಯಾಯಿತೋ ನನಗೆ ಗೊತ್ತಿಲ್ಲ. ಈಗ ಸಭೆಯು ತನ್ನ ಅಭಿಪ್ರಾಯವನ್ನು ವ್ಯಕ್ತಮಾಡುತ್ತಿದೆ. '' ಈಗಿನ ಅಭಿಪ್ರಾಯ ಹಿಂದೆ ಮಾಡಿದಂಥ ಕರಾರಿಗೆ ವಿರೋಧವಿದೆ. ಆ ರೀತಿ ನಿರ್ಣಯ ಹೋಗಬೇಕಾಗಿತ್ತು.'' ಒಂದು ಅಭಿಪ್ರಾಯ ಆದ್ದರಿಂದ ಕೇಂದ್ರಸರ್ಕಾರಕ್ಕೆ ಹೋಗಿ ಅವರು ಇವರು ಒಂದುಕಡೆ ಸೇರಿ ಒಂದು ತೀರ್ಮಾನಕ್ಕೆ ಬಂದು ನಮಗೆ ಸರ್ವಸಮ್ಮತವಾದ ಒಂದು ರಾಜೀ ಸೂತ್ರವನ್ನು ಏರ್ಪಡಿಸುವುದು ಸರಿಯೆಂದು ನನಗೆ ಕಾಣುತ್ತದೆ. ನಮ್ಮ ಅಭಿಪ್ರಾಯವನ್ನು ಅಲ್ಲಿ ಹೇಳಲಿಕ್ಕೇನು ತೊಂದರೆ? ಬೇರೆಕಾನೂನು ಮಾಡುವ ಹಾಗಿಲ್ಲ. ಪ್ರಾಯಃ ಈ ರೀತಿಯೇ ಇದೆ ಎಂಬುದಾಗಿ ಕೇಂದ್ರ ಸರ್ಕಾರಕ್ಕೆ ತಿಳಿಸುವುದಕ್ಕೆ ಅಡ್ಡಿಮಾಡುವುದು ಸರಿಯಲ್ಲ. ಅದರಿಂದ ಏನು ಪ್ರಯೋಜನವಾಗುತ್ತದೋ ಗೊತ್ತಿಲ್ಲ. ಪ್ರಜಾಪ್ರಭುತ್ವದ ಜವಾಬ್ದಾರಿಯನ್ನು ಹೊತ್ತಿರುವ ಪ್ರಜಾ ಪ್ರತಿನಿಧಿಗಳಾದ ನಮ್ಮ ಅಭಿಪ್ರಾಯವನ್ನು ತಿಳಿಸುವ ಬಗ್ಗೆ ಕುಂಠಿತಮಾಡುವುದು ನ್ಯಾಯವಾದುದಲ್ಲ. ಆ ರೀತಿ ಮಾಡಬೇಡಿ. ಯಾರ್ಯಾರು ಏನೇನು ಅಭಿಪ್ರಾಯಗಳನ್ನು ಈ ಬಗ್ಗೆ ವ್ಯಕ್ತಮಾಡಬೇಕೆಂದು ಬಯಸುತ್ತಾರೋ ಅವರಿಗೆಲ್ಲರಿಗೂ ಸಾಕಷ್ಟು ಅವಕಾಶ ಕೊಡಿ. ವಿಧಾನಸಭೆಗೆ ಹೆಚ್ಚಿನ ಸಂಸತ್ ಇತ್ಯಾದಿ ಇರುವುದರಿಂದ ಅಂತಿಮ ನಿರ್ಧಾರವನ್ನು ಕೈಗೊಳ್ಳುವಾಗ ಮತ್ತು ತನ್ನ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವ ಬಗ್ಗೆ ಇಷ್ಟೊಂದು ಆಟಾಟೋಪಗಳನ್ನು ಕೆಲವು ಸದಸ್ಯರು ತಾಳಿರುವುದು ಖಂಡಿತವಾಗಿ ಸರಿಯಾದುವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಶ್ರೀ ಎ. ಜೆ. ದೊಡ್ಡಮೇಟಿ)

ಅಂತ್ಯ ತೀರ್ಮಾನದ ಬಗ್ಗೆ ಒಂದು ಕರಾರು ಆಗಬೇಕಾಗಿದೆ. ಆ ಮಾತಿನ ಬಗ್ಗೆ ನಾವು ಇಲ್ಲಿ ಚರ್ಚೆಮಾಡಬಹುದು. ಆದರೆ ಕೇಂದ್ರ ಸರ್ಕಾರದಲ್ಲಿ ಇದನ್ನು ಒಪ್ಪದೇ ಹೋದರೆ ನಾವು ಏನು ಮಾಡುವುದಕ್ಕೂ ಆಗುವುದಿಲ್ಲ. ಇಲ್ಲಿ ಒಂದು ಸಾರಿ ತೀರ್ಮಾನವಾದ ಕೂಡಲೇ ಆಮೇಲೆ ನಮ್ಮ ಪಕ್ಷದ ನಾಯಕರು ದಹಲಿಗೆ ಹೋಗಿ ಅಲ್ಲಿ ಅದನ್ನು ಅಸ್ತು ಎಂದನ್ನಿಸಿಕೊಂಡು ಬಂದಮೇಲೆ ನಂತರ ಯಾವ ಒಂದು ರೀತಿಯ ಆಕ್ಷೇಪಣೆಯೂ ಇಲ್ಲಿ ಬರಲಾರದು ಎಂದು ನಾನು ಹೇಳುತ್ತೇನೆ.

ಎರಡನೆಯದಾಗಿ, ಶ್ರೀಮಾನ್ ವಿ. ಎಸ್. ಪಾಟೀಲ್ ರವರು ಇತ್ತೀಚೆಗೆ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಈ ಒಂದು ಧೋರಣೆಯನ್ನು ಬದಲಾವಣೆ ಮಾಡಿದ್ದಾರೆಂದು ಹೇಳಿದರು. ನಾನು ಅದಕ್ಕೆ ಉತ್ತರ ಹೇಳುವುದಿಲ್ಲ. ಇನ್ನು ಕೆಲವರು ಮೈಸೂರು ಹೆಸರೇ ಇರಬೇಕೆಂದು ಹೇಳಿದರು. ಈ ವಿಷಯದಲ್ಲಿ ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ನಮ್ಮ ಭಾಗದೊಳಗೆ ಒಂದು ದೊಡ್ಡ ಮನೆತನವಿದೆ. ಆ ಮನೆತನದಲ್ಲಿ ಒಬ್ಬಳೇ ಹೆಣ್ಣುಮಗಳು. ಆ ಮಗುವನ್ನು ಬಿ.ಎ. ಪಾಸ್ ಆಗುವವರೆಗೂ ಮತ್ತು ಸುಮಾರು 18-20 ವರ್ಷ ವಯಸ್ಸಿನವರೆಗೂ ಆ ಮಗುವಿನ ಅಪ್ಪ, ಅಮ್ಮ, ಒಂದು ಮಮತೆಯಿಂದ ಬೇಬಿ, ಬೇಬಿ ಎಂದು ಕರೆಯುತ್ತಿದ್ದರು. ಆಕೆಯ ನಿಜವಾದ ಹೆಸರು ಚಂದ್ರಮುಖಿಯೆಂದು. ಕೆಲವು ವರ್ಷಗಳ ನಂತರ ಆಕೆಯನ್ನು ಲಗ್ನ ಮಾಡಿಕೊಟ್ಟರು. ಆಕೆ ಗಂಡನ ಮನೆಗೆ ಹೋದಮೇಲೆ ಆಕೆಯನ್ನು ಗಂಡನಾದವನು ಚಂದ್ರಮುಖಿ, ಚಂದ್ರಮುಖಿ ಎಂದು ಕರೆಯಲಾರಂಭಿಸಿದನು. ಕೂಡಲೇ ಆ ಹೆಣ್ಣುಮಗು ಗಾಬರಿಯಿಂದ ನಾನು ಚಂದ್ರಮುಖಿಯಲ್ಲ, ನನ್ನ ಹೆಸರು ಬೇಬಿ ಎಂದು ಹೇಳುವುದಕ್ಕೆ ಷುರು ಮಾಡಿದಳು. ಆಗ ಗಂಡನು ನೀನು ಇಷ್ಟು ಎತ್ತರವಾಗಿ ಬೆಳೆದಿದ್ದೀಯೆ, ನಿನ್ನನ್ನು ಯಾರು ಬೇಬಿ ಎಂದು ಕರೆಯುತ್ತಾರೆಂದು ಕೇಳಿದನು. ಅಲ್ಲದೆ ನಿನ್ನ ಹೆಸರು ಲಗ್ನವಾದಾಗ ಚಂದ್ರಮುಖಿಯೆಂದು ಹೇಳಿದರು. ಈಗ ನೀನು ಬೇಬಿ ಎಂದು ಸುಳ್ಳು ಹೇಳುತ್ತಿದ್ದೀಯೆ, ನಿನ್ನ ನಿಜವಾದ ಹೆಸರು ಸರಿಯಾಗಿ ಹೇಳು ಎಂದು ಕೇಳಿದ. ಆಗ ಅವಳು ನನ್ನ ಹೆಸರು ಬೇಬಿನೇ, ಬೇಕಾದರೆ ನನ್ನ ಅಪ್ಪ, ಅಮ್ಮನನ್ನು ಕರೆದು ಕೇಳಿರಿ ಎಂದು ಹೇಳಿದಳು. ಆಗ ಆ ಹೆಣ್ಣುಮಗುವಿನ ತಂದೆ ತಾಯಿಯರನ್ನು ಕರೆಸಿ ಈ ವಿಷಯ ಕೇಳಿದಾಗ ತಂದೆ ತಾಯಿಗಳು ಆ ಮಗುವಿಗೆ ನಿನ್ನ ನಿಜವಾದ ಹೆಸರೇನೋ ಚಂದ್ರಮುಖಿ ಎಂಬುದು ಸರಿ. ಆದರೆ ನಿನ್ನ ಮೇಲಿನ ವಾತ್ಸಲ್ಯ, ಪ್ರೀತಿ, ಮಮತೆಯಿಂದ ನಾವು ನಿನ್ನನ್ನ ಚಿಕ್ಕವಯಸ್ಸಿನಿಂದ ಬೇಬಿ ಎಂದು ಕರೆಯುತ್ತಿದ್ದೆವು ಅಷ್ಟೆ. ಮತ್ತೇನೂ ಇಲ್ಲ ಎಂದು ಅವರು ಆ ಹೆಣ್ಣುಮಗುವಿಗೂ, ಅವಳ ಗಂಡನಿಗೂ ತಿಳಿಸಿದರು. ಹಾಗೆ ಹಿಂದಿನ ಕಾಲದಲ್ಲಿ ಇಲ್ಲಿನ ವೈಶಿಷ್ಟ್ಯವನ್ನು ನೋಡಿ ಏನೋ ಒಂದು ಮಮತೆಯಿಂದ, ದೇಶವಾತ್ಸಲ್ಯದಿಂದ ಮೈಸೂರು ಎಂಬುದಾಗಿ ನಾಮಕರಣ ಮಾಡಿದ್ದಾರೆಯೇ ವಿನಹ ಮತ್ತೇನೂ ಬೇರೆ ಇದರಲ್ಲಿ ಹೆಚ್ಚಿನದೇನೂ ಇಲ್ಲ. ಈಗಲೂ ಮೈಸೂರು ಎನ್ನುವುದು ಹಲವಾರು ಕರ್ಣಾಟಕ ಪ್ರದೇಶಗಳಲ್ಲಿ ಒಂದು ಸಣ್ಣ ಪ್ರದೇಶವಾಗಿ ಉಳಿದಿದೆ. ಈ ಸಣ್ಣ ಒಂದು ಪ್ರದೇಶವನ್ನೇ ಕರ್ಣಾಟಕವೆಂದು ಹಿಂದೆ ಕರೆಯಲಿಕ್ಕಾಗಲಿಲ್ಲ. ಅದಕ್ಕೋಸ್ಕರವಾಗಿಯೇ ಮೈಸೂರು ಎಂಬುದಾಗಿ ಇಡುವರೆಗೂ ಕರೆಯುತ್ತಿದ್ದರು. ಆದರೆ ಮೈಸೂರಿನ ಹೆಸರಿನ ಬಗ್ಗೆ ನಿಮಗಿಂತಲೂ ಹೆಚ್ಚಿನ ಮಮತೆ ನಮಗೆ ಇದೆ. ಕೆಲವು ಜಿಲ್ಲಾ ಅಥವಾ ತಾಲ್ಲೂಕ್‌ಗಳಿಗೆ ಇದ್ದ ಹೆಸರನ್ನೇ ಹತ್ತೊಂಬತ್ತು ಜಿಲ್ಲೆಗಳ ಮೇಲೆ ಹೇರುವುದು ಸರಿಯಲ್ಲ. ಇದನ್ನು ಯಾರು ಒಪ್ಪುತ್ತಾರೆ? ಯಾರೂ ಒಪ್ಪುವುದಿಲ್ಲ. ಈ 19 ಜಿಲ್ಲೆಗಳಲ್ಲಿ ನಾನಾ ವಿಧವಾದ ಜಾತಿ ಪಂಗಡ ಕೋಮುಗಳಿರುತ್ತವೆ, ನಾನಾ ಭಾಷೆಗಳ ಜನಗಳೂ ಇರುತ್ತಾರೆ, ಅಂದ ಮೇಲೆ ಆಯಾ ಜಿಲ್ಲೆಯ ಹೆಸರುಗಳನ್ನು ಈ ರಾಜ್ಯಕ್ಕೆ ಇಡುವುದೂ ಸರಿಯಲ್ಲ. ಅಲ್ಲದೆ ಈ ರಾಜ್ಯಕ್ಕೆ ಎರಡು ಸಾವಿರ ವರ್ಷಗಳಿಂದಲೂ ಈ ಭಾರತ ದೇಶದಲ್ಲಿ ಕರ್ಣಾಟಕವೆಂಬ ಹೆಸರು ಇದ್ದೇ ಇದೆ. ಆ ಕಾಲದಿಂದಲೂ ಈ ಹೆಸರನ್ನು ಅಳಿಸಿಲ್ಲ. ಕರ್ಣಾಟಕ ರಾಜ್ಯವೆಂದು ಆ ಕಾಲದಲ್ಲಿ ಬರೆದಿದ್ದಾರೆಯೇ ಹೊರತು ಮೈಸೂರು ಎಂಬುದಾಗಿ ಬರೆದಿಲ್ಲ. ಎಲ್ಲಾ ಪ್ರದೇಶಗಳೂ ಈಗ ಕೂಡಿ ಒಂದು "ಅಖಂಡ ಕರ್ಣಾಟಕವಾಗುತ್ತಿರುವಾಗ" ಇದಕ್ಕೆ ಕರ್ಣಾಟಕವೆಂದು ಹೆಸರಿಡುವುದು ಬಹು ಸೂಕ್ತವೆಂದು ನಾನು ಹೇಳುತ್ತೇನೆ. ಕವಿ ಕುವೆಂಪು ಅವರು "ಅಖಂಡ ಕರ್ಣಾಟಕವಾಗಲಿ" ಎಂದು ಹಿಂದೆ ಹೇಳಿದ್ದಾರೆ. ನಾನು ಇದನ್ನು ಪ್ರತಿಭಟಿಸಿ ಕೇಳುತ್ತಿಲ್ಲ. ನನ್ನ ಈ ಕೋರಿಕೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಸಮುದ್ರದೊಳಗೆ ಹೊಳೆ ಸೇರುತ್ತದೆಯೇ ಹೊರತು ಹೊಳೆಯೊಳಗೆ ಸಮುದ್ರ ಸೇರುವುದಿಲ್ಲ ಎಂಬುದನ್ನು ಮಾನ್ಯ ಸದಸ್ಯರೆಲ್ಲರೂ ಗಮನಿಸಬೇಕಾಗಿದೆ. ಕರ್ಣಾಟಕ ರಾಜ್ಯವೆಂಬುದಾಗಿ ಈ ಮೈಸೂರನ್ನು ಕರೆಯುವುದಕ್ಕಾಗಿ ಸುಮಾರು 30 ಪುಟಗಳನ್ನುಳ್ಳ ಒಂದು ಪುಸ್ತಕವನ್ನೇ ಮೈಸೂರಿನ ಅರಸರ ಹಿನ್ನೆಲೆ ಬಗ್ಗೆ ಬರೆದಿದ್ದೇನೆ. ಅದರೊಳಗೆ ಇದಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳೂ ಅಡಕವಾಗಿವೆ. ಬೇಕಾದರೆ ಇಲ್ಲಿ ಕೆಲವು ವಾಕ್ಯಗಳನ್ನು ಓದಿ ಹೇಳುತ್ತೇನೆ.

ಅಧ್ಯಕ್ಷರು.— ಆ ಪುಸ್ತಕವನ್ನು ಸದಸ್ಯರಿಗೆಲ್ಲಾ ಕೊಡಲಾಗಿದೆಯೇ?

ಶ್ರೀ ಎ. ಜೆ. ದೊಡ್ಡಮೇಟಿ.—ಹೌದು. ಈಗ ಬೇಕಾದರೂ ಕೊಡುತ್ತೇನೆ. ಆದರೆ ಎಲ್ಲವನ್ನೂ ಓದುವುದು ಬೇಡ. ವರ್ತಮಾನ ಪತ್ರಿಕೆಯಲ್ಲಿ ಎಲ್ಲವೂ ಬಂದಿದೆ, ಎಲ್ಲರೂ ಓದಿದ್ದಾರೆ. ಒಂದೇ ಒಂದು ಮಾತನ್ನು ಹೇಳುತ್ತೇನೆ. 1698ರಲ್ಲಿ........

ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಅವರು ಯಾವುದೋ ಪುಸ್ತಕವನ್ನು ಓದುತ್ತೇನೆಂದು ಅವರೇ ಬರೆದಿರತಕ್ಕ ಪುಸ್ತಕವನ್ನು ಅವರೇ ಓದುತ್ತಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ಬರೆದಿದ್ದೇ ಅಲ್ಲ. ಇದು 1698ರಲ್ಲಿ ಚಿಕ್ಕದೇವರಾಜ ಒಡೆಯರು ಮತ್ತು ಅವರ ಆಸ್ಥಾನದಲ್ಲಿದ್ದ ತಿರುಮಲಾರ್ಯ ಎಂಬ ಮಂತ್ರಿಗಳು ಬರೆದ ಮೈಸೂರು ರಾಜ ಒಡೆಯರ ವಂಶಾವಳಿಯ ಪುಸ್ತಕ. ಅದರಲ್ಲಿ ಕರ್ಣಾಟಕವೆಂಬ ಬಗ್ಗೆ ಯಾವ ರೀತಿ ಉಲ್ಲೇಖಿಸಿದ್ದಾರೆ ಮತ್ತು ಅವರ ಜಾತಕ, ಇತ್ಯಾದಿಗಳನ್ನೊಳಗೊಂಡಿದೆ. ಅಲ್ಲದೆ ಅದರಲ್ಲಿ ಕರ್ಣಾಟಕ ರಾಜ್ಯ ಕಾವೇರಿಯಿಂದ ಗೋದಾವರಿನದಿಯವರೆಗೂ ಹರಡಿತ್ತು ಎಂದು ಹೇಳಿದ್ದಾರೆ.

ಶ್ರೀ ಬಿ. ಚನ್ನಬೈರೇಗೌಡ.—ಇದು ಕರ್ಣಾಟಕ ದೇಶಕ್ಕೆ ಸಂಬಧಪಟ್ಟದ್ದು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆಯೇ ಹೊರತು ಈ ಪುಸ್ತಕ ಯಾವುದೇ ಇತಿಹಾಸವೂ ಅಲ್ಲ; ಪುರಾಣದ ಕಥೆಯೂ ಅಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಅವರಿಗೇನೋ ಬಹಳ ಗಾಬರಿಯಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಚಿಕ್ಕದೇವರಾಜ ಒಡೆಯರ ಜಾತಕಕ್ಕೂ ಮತ್ತು ಶ್ರೀಮಾನ್ ದೊಡ್ಡ ಮೇಟಿಯವರ ಈ ವಾದಕ್ಕೂ ಏನು ಸಂಬಂಧ ?

ಶ್ರೀ ಎ. ಜೆ. ದೊಡ್ಡಮೇಟಿ.—ಕಾವೇರಿ ತೀರದಲ್ಲಿ ಹಿಂದೆ ಮೈಸೂರಿನ ಅರಮನೆಯಿತ್ತೆಂದು ಹೇಳುತ್ತಿದ್ದರು. ಈ ಮೈಸೂರು ಕರ್ಣಾಟಕದ ಒಂದು ಭಾಗ ವೆಂದು ಹಿಂದೆಯೇ ಅವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಹಿಂದೆಯೇ ಕರ್ಣಾಟಕವೆಂಬುದಾಗಿ ಒಂದು ಹೆಸರು ಈ ರಾಜ್ಯಕ್ಕೆ ಇತ್ತೆಂಬುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ.

ಶ್ರೀ ಡಿ. ವೆಂಕಟರಾಮಯ್ಯ (ರಾಬರ್ಟ್‌ಸನ್ ಪೇಟೆ).—ಪುಸ್ತಕಕ್ಕೆ ಹೆಸರೇ ಇಲ್ಲ. ಅದೇನು ವರದಿಯೋ ಗೊತ್ತಿಲ್ಲ. ಅದಿಲ್ಲದೆಯೇ he simply reads it.

ಶ್ರೀ ಎ. ಜೆ. ದೊಡ್ಡಮೇಟಿ.—ಇದು ಚಿಕ್ಕದೇವ ರಾಜ ಒಡೆಯರ ವಂಶಾವಳಿಯ ಪುಸ್ತಕ.

Mr. SPEAKER.—The Hon'ble Member must remember that he is not reading the whole Book. He must be brief to the point.

ಶ್ರೀ ಎ. ಜೆ. ದೊಡ್ಡಮೇಟಿ.—ಮೈಸೂರಿನ ಅರಸರಾಗಿದ್ದ ಚಿಕ್ಕದೇವರಾಯ ವಂಶಾವಳಿಯಲ್ಲಿ ಇದು ಉಲ್ಲೇಖಿಸಲ್ಪಟ್ಟಿದೆ. ಆಮೇಲೆ ಮುಂದೆ "ಶ್ರೀರಂಗ ಪಟ್ಟಣ ಕರ್ಣಾಟಕವೆಂಬ ನಾರಿಯ ನೊಸಲೊಳು ಮೆರವ ಚಾರುರನ್ನದ ಬಟ್ಟನಂತಿಹುದು" ಎಂದು ಬರೆದಿದ್ದಾರೆ. ಮೈಸೂರು ಎನ್ನುವ ಹೆಸರು ಕರ್ನಾಟಕದೊಳಗಿತ್ತು ಎನ್ನುವುದನ್ನು ತಾವುಗಳು ತಿಳಿದುಕೊಳ್ಳಬೇಕು. ನಾಳೆಯ ದಿವಸ ಕರ್ನಾಟಕ ಆಗಿ ಹೋಗುತ್ತದೆ, ಆಗ ಅದು ನಿಜವಾಗಿಯೂ ಹಳೆಯ ಮೈಸೂರಿನವರಿಗೆ ಹೆಚ್ಚಿನ ಅಭಿಮಾನ. ಈ ಕರ್ನಾಟಕ ಚಳವಳಿಯನ್ನು ಹಳೆಯ ಮೈಸೂರಿನವರೇ ಹುಟ್ಟಿಸಿದ್ದಾರೆ. ನಾಳೆಯ ದಿವಸ ಕರ್ನಾಟಕ ಆದರೆ ಅದರ ಕೀರ್ತಿ ಕರ್ನಾಟಕದ ರತ್ನ ಸಿಂಹಾಸನಕ್ಕೆ ಹೋಗುತ್ತದೆ. ಕರ್ನಾಟಕದ ಕವಿಗಳ ಚರಿತ್ರೆಗೆ ಕೀರ್ತಿ ಬರುತ್ತದೆ. ಕೋಲಾರ ಜಿಲ್ಲೆಯಲ್ಲಿದ್ದ ಶ್ರೀ ಕುಮುದೇಂದು ಮುನಿಯೆಂಬ ಜೈನ ಋಷಿಗಳು ಮೈಸೂರಿಗೆ ಕರ್ನಾಟಕವೆಂದು ಹೆಸರಿಡಬೇಕೆಂದು ಹೇಳಿದ್ದಾರೆ. ಅದರ ಕೀರ್ತಿ ಕೋಲಾರ ಜಿಲ್ಲೆಯ ವರಿಗೂ ಹೋಗುತ್ತದೆ. ನಿಮಗೆ ಕನ್ವಿನ್ಸ್ ಮಾಡ ಬೇಕಾದರೆ ನೀವು ಒಂದು ಮೀಟಿಂಗ್‌ಮಾಡಿ, ನಾನು ಅಲ್ಲಿಗೆ ಬಂದು ತಮ್ಮ ಮನಸ್ಸು ಬದಲಾವಣೆ ಆಗುವ ಹಾಗೆ ಮಾಡುತ್ತೇನೆ. ಆ ಸಾಮರ್ಥ್ಯ ನನಗೆ ಇದೆ. ಕುವೆಂಪು ಅವರು ಏನು ಪ್ರಾರ್ಥನೆ ಮಾಡಿಕೊಂಡಿದ್ದಾರೆಂದರೆ "ಕರ್ನಾಟಕವಾದದ್ದು ಇಂದು ಬಂದು ನಾಳೆ ಸಂದುಹೋಗುವ ಮಂತ್ರಿ ಮಂಡಲಕ್ಕಲ್ಲ, ಅದು ಸರಸ್ವತಿಯು ರಚಿಸಿದೊಂದು ರುಚಿರ ಕುಂಡಲ. ಅಲ್ಲಿ ರನ್ನ ಪಂಪರೇ ನಿತ್ಯ ಸಚಿವರು ನಿಮ್ಮನ್ನು ನೀವೇ ಅಲಕ್ಷ್ಯ ಮಾಡಿಕೊಳ್ಳಬಾರದು. ಬೇರೆ ಯಾರನ್ನು ಮರೆತರೂ ಕುವೆಂಪುವನ್ನು ಮರೆಯುತ್ತಾರೆಯೇ ? ಸಾವಿರಾರು ಮಂತ್ರಿಗಳ ಹೆಸರನ್ನು ಹೇಳುವುದಿಲ್ಲ. ಇದ . ಕರ್ನಾಟಕ ಹೆಸರು ಸೂರ್ಯಚಂದ್ರರು ಇರುವ ತನಕ ಇರುತ್ತದೆ. ಹಿಡಿದ ತೀರ್ಮಾನವನ್ನು ಬದಲಾಯಿಸಿರಿ ಎಂದು ನಾನು ಪ್ರಾರ್ಥನೆಮಾಡಿ ಕೊಳ್ಳುತ್ತೇನೆ.

Sri ANGADI CHANNABASAPPA (Hadagalli).—I am inclined to raise a point of order.

Mr. SPEAKER.—Yes, make up your mind.

Sri ANGADI CHANNABASAPPA.—The other day when the debate was about to commence I had raised a kind of objection which was almost with regard to the form of resolution and not a point of order with regard to the whole resolution. Now as I read article 3 of the Constitution......

Mr. SPEAKER.—Is it to the form of the resolution ?

Sri ANGADI CHANNABASAPPA.—It is not in regard to the form of resolution. My submission is that this House cannot express its view before it comes to the Bill stage and the matter is referred to this House.

Mr SPEAKER.—So, the resolution is not maintainable ?

Sri ANGADI CHANNABASAPPA.—It can be discussed, but it cannot be voted.

Mr. SPEAKER.—When that stage comes, you rai-se it. I cannot disturb the discussion now.

†ಶ್ರೀ ಅಂದಾನಯ್ಯ (ಕುಣಿಗಲ್).—ಸ್ವಾಮಿ, ಈ ದಿವಸ ಈ ಸಭೆಯ ಮುಂದೆ ಮಂಡಿಸಿರುವ ನಿರ್ಣಯದ ಮೇಲೆ ಈಗಾಗಲೇ ಎರಡು ದಿವಸಗಳಿಂದಲೂ ಚರ್ಚೆ ನಡೆದಿದೆ. ನನಗಾದರೂ ಅನಿಸುತ್ತದೆ, ಈ ಒಂದು ಸಣ್ಣ ವಿಷಯಕ್ಕೋಸ್ಕರ ನಮ್ಮ ಅಮೂಲ್ಯವಾದ ವೇಳೆಯನ್ನು ವ್ಯರ್ಥವಾಗಿ ಕಳೆಯುತ್ತಿದ್ದೇವಲ್ಲ ಎಂದು ನನ್ನ ಮನಸ್ಸಿಗೆ ವ್ಯಥೆಯಾಗುತ್ತದೆ. ಈ ಸಂದರ್ಭದಲ್ಲಿ ನನಗೆ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ, "ಗಂಜೀಕು ಗೆತ್‌ನೈ ನಂಜೀಕು ಬುಲಾವ್" ಎಂದು. ದೇಶದಲ್ಲಿ ಸಕಾಲದಲ್ಲಿ ಮಳೆ ಬೆಳೆಗಳಾಗದೆ ಅಭಾವ ಪರಿಸ್ಥಿತಿಯುಂಟಾಗಿ ಜನಗಳು ತೊಂದರೆಯನ್ನು ಅನುಭವಿಸುತ್ತಿರುವಾಗ, ದೇಶದಲ್ಲಿ ಅವಿದ್ಯಾವಂತರ ಸಂಖ್ಯೆ ಜಾಸ್ತಿಯಾಗುತ್ತಿರುವಾಗ ನಾವು ಜವಾಬ್ದಾರಿಯುತವಾಗಿ ಇಲ್ಲಿ ಗಂಟೆಗಟ್ಟಲೆ ಕುಳಿತುಕೊಂಡು ಈ ಒಂದು ಸಣ್ಣ ವಿಷಯವನ್ನು ನಾವು ಚರ್ಚೆಮಾಡುತ್ತಿರುವುದು ಬಹಳ ಶೋಚನೀಯವಾಗಿದೆ. "ಮೈಸೂರು" ಎನ್ನುವ ಹೆಸರನ್ನು ಅಳಿಸಿ "ಕರ್ನಾಟಕ" ಎಂದು ಇಡುವುದಕ್ಕೆ "ಮೈಸೂರು" ಎನ್ನುವ ಹೆಸರಿನಲ್ಲಿ ಏನು ಕೆಟ್ಟಿದೆ? ಈ ಹೆಸರು ಬಹಳ ಹಿಂದಿನಿಂದ ಬಂದಿದೆ ಮತ್ತು ಚರಿತ್ರಾರ್ಹವಾಗಿದೆ, ಹಿತವಾಗಿದೆ. ಇಂಥಾ ಹೆಸರನ್ನು ಬದಲಾಯಿಸುವ ಪ್ರಮೇಯ ಏನು ಬಂದಿದೆಯೋ ನನಗಂತೂ ಅರ್ಥವಾಗುವುದಿಲ್ಲ. ಹಿಂದೆ ಕೆಲವು ಹಳ್ಳಿಗಳಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ತಮ್ಮ ಮನೆತನದ ದೇವರ ಹೆಸರನ್ನು ಕೆಂಪಮ್ಮ ಎಂದು ಇಟ್ಟು ಅದ್ದ ಹೆಸರನ್ನು ಮೀನಾಕ್ಷಿ, ವಿಶಾಲಾಕ್ಷಿ

(ಶ್ರೀ ಅಂದಾನಯ್ಯ)

ಎಂದು ಕರೆಯುತ್ತಿದ್ದರು. ನಮಗೇನೋ ಮೈಸೂರು ಎನ್ನುವ ಹೆಸರು ಬಹಳ ಹಿತವಾಗಿ ಕಾಣುತ್ತದೆ. ಈ ನಿರ್ಣಯವನ್ನು ತಂದಿರತಕ್ಕ ನಮ್ಮ ಮಾನ್ಯ ಮಿತ್ರರು ಗಳಿಗೆ ಮೈಸೂರು ಎನ್ನುವ ಹೆಸರು ಚೆನ್ನಾಗಿ ಕಾಣದೆ ಹೋದರೆ ಬೇರೆ ಒಂದು ಹೆಸರು ಕರೆದುಕೊಳ್ಳಲಿ. ನಮಗೆ ಮಾತ್ರ ಮೈಸೂರೆಂದೇ ಉಳಿಯಬೇಕು. ಅದು ಹಿತವಾಗಿದೆ ಮತ್ತು ಬಹಳ ಪುರಾತನ ಕಾಲ ದಿಂದ ಬಂದ ಹೆಸರು. ಅದಕ್ಕೋಸ್ಕರ ನಾವು ಮೊದಲಿನಿಂದಲೂ ಹೋರಾಟ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ಒಂದು ವಿಷಯ ನನಗೆ ಜ್ಞಾಪಕಕ್ಕೆಬರುತ್ತದೆ. ಅದೇನೆಂದರೆ ಉತ್ತರದವರು ದಕ್ಷಿಣದವರಮೇಲೆ ಧಾಳಿ ಮಾಡಿದ್ದು. ಈಗ ಹೆಸರಿನ ಮೇಲೆ ಇನ್ನೊಂದು ಧಾಳಿ ನಡೆಯುತ್ತಿದೆ. ನಾವೆಲ್ಲಾ ಒಗ್ಗಟ್ಟಾಗೋಣ ಕರ್ಣಾಟಕವೆಂದು ಹೇಳಿ ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಇಂಡಿಯಾ ಮತ್ತು ಚೈನಾದವರ ಒಂದು ವಾದ ನನಗೆ ಜ್ಞಾಪಕಕ್ಕೆ ಬರುತ್ತದೆ. ಚೈನಾದವರು ಇಂಡಿಯಾದ ಗಡಿಯೊಳಗೆ ನಾವು ಬರುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಪ್ರತಿ ಹೆಜ್ಜೆ ಹೆಜ್ಜೆಗೂ ಇಂಡಿಯಾದ ಗಡಿಯೊಳಗೆ ಕಾಲಿಡುತ್ತಿದ್ದಾರೆ. ಈ ನಿರ್ಣಯವನ್ನು ತಂದಿರತಕ್ಕ ನಮ್ಮ ಮಾನ್ಯ ಮಿತ್ರರೆಲ್ಲರೂ ಏನು ಹೇಳುತ್ತಾರೆಂದರೆ ನಾವೆಲ್ಲರೂ ಒಗ್ಗಟ್ಟಾಗೋಣ ಕರ್ಣಾಟಕಕ್ಕೆ ಬೆಂಬಲವನ್ನು ಕೊಡೋಣ, ನಾವೆಲ್ಲರೂ ಒಂದೇ ತಾಯಿಯ ಮಕ್ಕಳಲ್ಲವೇ ಎಂದು ಹೇಳುತ್ತಾರೆ. ಹೆಸರು ಬದಲಾಯಿಸಿದರೆ ಏನು ಉದ್ಧಾರವಾಗುತ್ತದೆ? ಕರ್ನಾಟಕ ಎಂದು ಕರೆದರೆ ದೇಶ ಉದ್ಧಾರವಾಗುತ್ತದೆ, ಮೈಸೂರು ಎಂದು ಇದ್ದರೆ ದೇಶ ಉದ್ಧಾರವಾಗುವುದಿಲ್ಲವೆ? ಮುಂದು ವರಿಯುವುದಿಲ್ಲವೇ? ಕನ್ನಡ ಮುಂದುವರಿಯುವುದಿಲ್ಲವೇ? ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಈ ಒಂದು ಸಮಸ್ಯೆಯನ್ನು ಈ ಸಭೆಯ ಮುಂದೆ ತಂದು ನಮ್ಮ ಮನಸ್ಸನ್ನು ನಿಜವಾಗಿ ಕೆರಳಿಸುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಕನ್ನಡಿಗರೆಲ್ಲಾ ಒಂದಾಗಿ ಇನ್ನೂ ಒಂದು ತಹಬಂದಿಗೆ ಬಾರದೆ ಇರುವಾಗ, ಈಗ ತಾನೆ ನಾವೆಲ್ಲರೂ ಒಂದಾಗಿ ರಾಜ್ಯದ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕ ಸಂದರ್ಭದಲ್ಲಿ ಈ ಒಂದು ಸಮಸ್ಯೆಯನ್ನು ಈ ಸಭೆಯ ಮುಂದಿಟ್ಟು ದೇಶವನ್ನು ಇಭ್ಭಾಗ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡದೆ ನಮ್ಮ ದೇಶ ಚಿರಾಯುವಾಗಿ ಉಳಿಯಲಿ. ಯಾವುದರಿಂದ ದೇಶದ ಹಿತಕ್ಕೆ ಧಕ್ಕೆ ಬರುತ್ತದೆಯೆಂದು ಹೇಳುತ್ತಾರೆಯೋ ಅದಕ್ಕೆ ಅವಕಾಶವನ್ನು ಕೊಡದೆ ನಮ್ಮ ಮಾನ್ಯ ಮಿತ್ರರಾದ ಶ್ರೀ ಆರ್. ಎಸ್. ಪಾಟೀಲ್ ಅವರು ದೇಶದ ಹಿತದೃಷ್ಟಿಯಿಂದ, ಮತ್ತು ದೇಶದ ಉನ್ನತಿಗಾಗಿ ಎಲ್ಲರೂ ಒಗ್ಗಟ್ಟಾಗಿ ಬಾಳಬೇಕಾದರೆ ಅವರು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr SPEAKER.—One suggestion has been thrown out that the time may be extended. Is that the opinion of the House?

Hon'ble MEMBERS.—No, no.

Mr. SPEAKER.—I have given the mover of resolution the right of reply I would like to know what time he will take for reply. There is a point of order raised by Sri Channabasappa. I have to deal with it before I put it to the vote.

Sri R. S. PATIL (Ramdrug).—Not even 10 minutes.

†ಶ್ರೀ ಎಂ. ಸಿ. ಆಂಜನೇಯರೆಡ್ಡಿ (ಚಿಂತಾಮಣಿ). ಸ್ವಾಮಿ, ಈ ದಿನ ಮೈಸೂರು ಇತಿಹಾಸದ ಒಂದು ಚರಮ ಗೀತೆಯನ್ನು ಹಾಡತಕ್ಕ ಒಂದು ಸಂಕಟವಾದ ದಿನ ಸ್ವಾಮಿ. ನಾವು ಯಾವ ಬಾಯಿಂದ ಈ ಮೈಸೂರು ದೇಶದ ಇತಿಹಾಸ ಹಾಗೂ ಒಳ್ಳೆಯ ಕೀರ್ತಿಯನ್ನು ಪಡೆದಿರತಕ್ಕ..............

(Interruption)

ಮಾದರಿ ಮೈಸೂರು ಎಂದು ಏನು ಹೇಳುತ್ತಿದ್ದೇವೆಯೋ ಈ ಮೈಸೂರಿನ ಚರಿತ್ರೆಯನ್ನು ಇವತ್ತು ಅಳಿಸಿ ಕರ್ನಾಟಕ ಎಂಬ ಮಗುವನ್ನು ಲಾಲಿಸಿ ಲಾಲಿ ಹಾಡನ್ನು ಹಾಡತಕ್ಕ ಒಂದು ಮಹಾ ಸಂಕಟದ ದಿನ ಈ ದಿನ ಸ್ವಾಮಿ. ಮೈಸೂರು ದೇಶ ಎಂಬ ಹೆಸರನ್ನು ಅಳಿಸಿ ಕರ್ನಾಟಕ ಎಂದು ಹೆಸರಿಡಬೇಕೆಂದು ಸ್ನೇಹಿತರು ಹೊರಟಿದ್ದಾರೆ. ಅವರು ಬಹಳ ಸಂಕ್ಷೇಪವಾಗಿ ಹೇಳುತ್ತಾರೆ, ಇದು ಸಣ್ಣ ವಿಚಾರ ಇದಕ್ಕೆ ನೀವೇಕೆ ಇಷ್ಟು ಒತ್ತಾಯ ಪಡಿಸುತ್ತೀರಿ ಎಂದು. ನಮಗೆ ಇದ್ದಿರತಕ್ಕ, ನಮ್ಮ ಹಣೆ ಮೇಲೆ ಬರೆದಿರತಕ್ಕ ಅಕ್ಷರ ಅಳಿದು ಬೇರೆ ಅಕ್ಷರ ಬರೆಯುವುದಕ್ಕೆ ಪ್ರಯತ್ನ ಪಡತಕ್ಕ ಸ್ನೇಹಿತರು ಸಹನೆ ಇಲ್ಲದೆ ನಮ್ಮ ರಕ್ತವನ್ನು ಕುಡಿಸುತ್ತಾ ಇದ್ದಾರೆ. ಎಷ್ಟೋ ವರ್ಷಗಳಿಂದ ಇದ್ದ ಹೆಸರನ್ನು ನಾವು ಉಳಿಸಿಕೊಂಡು ಬಂದಿದ್ದೇವೆ. ಒಳ್ಳೆಯ ಚರಿತ್ರೆ, ಖ್ಯಾತಿ, ಆದರ್ಶ ಇದಕ್ಕೆ ಇದೆ. ಇಂಥಾ ಆದರ್ಶವಾಗಿರತಕ್ಕ ಹೆಸರನ್ನು ತೆಗೆಯುವುದಕ್ಕೆ ಮೈಸೂರು ದೇಶದ ಜನ ಯಾರೂ ಒಪ್ಪುವುದಿಲ್ಲ. ಭಾಷಾವಾರು ಪ್ರಾಂತ ರಚನೆ ಆದಾಗ 1956 ರಲ್ಲಿ ನಾನು ಎಂ. ಎಲ್. ಎ ಆಗಿದ್ದೆ. ಇದಕ್ಕೆ ವಿರೋಧವಾಗಿ ಓಟು ಮಾಡಿರುವವರ ಪೈಕಿ ನಾನೂ ಒಬ್ಬ. ಈಗ ಅನೇಕ ಸ್ನೇಹಿತರು ಹೇಳುತ್ತಾ ಇದ್ದಾರೆ, ಬಹುಮತ ಇದೆ, ಬಹುಮತದಂತೆ ಪ್ರಜಾಪ್ರಭುತ್ವದಲ್ಲಿ ಒಪ್ಪಬೇಕಾದದ್ದು ನ್ಯಾಯ ಎಂದು. ಆಗ ಮೈಸೂರಿನ ಅಸೆಂಬ್ಲಿಯಲ್ಲಿ 108 ಜನ ಮೆಂಬರುಗಳಿದ್ದರೂ, 57 ಜನ ಇದಕ್ಕೆ ಪರವಾಗಿ ಓಟು ಮಾಡಿದ್ದಾರೆ. ಮಿಕ್ಕ 50 ಜನರು ವಿರೋಧವಾಗಿ ಓಟು ಮಾಡಿದ್ದಾರೆ. ಆಗ ಕಾಂಗ್ರೆಸ್ ಹೈಕಮಾಂಡ್‌ನಿಂದ ಮ್ಯಾಂಡೇಟ್ ಬಂತು ಆದ್ದರಿಂದ 48 ಜನ ಸುಮ್ಮನೆ ಕುಳಿತುಕೊಂಡರು. 3 ಜನ ಮಾತ್ರ ಓಟು ಮಾಡಿದ್ದಾರೆ. 51 ಜನ ಕರ್ನಾಟಕ ಅಂತ ಆಗಕೂಡದು ಮೈಸೂರು ಅಂತಲೇ ಆಗಲೀ ಎಂದು ಪುಷ್ಟೀಕರಿಸಿದ್ದೇವೆ. 1957 ರಲ್ಲಿ ಇದಕ್ಕೆ ಬಳ್ಳಾರಿ ಸೇರಿದ ಮೇಲೆ 8 ಜನ ಮೆಂಬರುಗಳು ಬಂದು ಸೇರಿದರು. ಅವರನ್ನು ಕೇಳಿದರೆ, ಇದಕ್ಕೆ ಮೆಜಾರಿಟಿ ಇಲ್ಲ ಎಂದು ಹೇಳಬಹುದು. ತಾವು ಪ್ರೊಸೀಡಿಂಗ್ಸ್ ನೋಡಿದರೆ ಗೊತ್ತಾಗುತ್ತದೆ. ಮೆಜಾರಿಟಿ ಇಲ್ಲದೇ ಇದ್ದರೂ ಕೂಡ ಆ ದಿನ ಕರ್ನಾಟಕದ ಎಲ್ಲಾ ಜನ ಸೇರಿ ಗ್ರೇಟರ್ ಮೈಸೂರು ಆಗಬೇಕೆಂದು ಪಾರ್ಲಿಮೆಂಟಿನವರು ಒಂದು ತೀರ್ಮಾನ ಕೊಟ್ಟಿದ್ದಾರೆ. ಹಾಗೂ ಹೈಕಮ್ಯಾಂಡ್‌ನವರು ಒಪ್ಪಿದ್ದಾರೆ. ಒಪ್ಪುವಾಗ ಮೈಸೂರು ಮೈಸೂರಾಗಿಯೇ ಉಳಿಯಲಿ

ಎಂದವರು ಗ್ರೇಟರ್ ಮೈಸೂರು ಎಂಬುದನ್ನು ಒಪ್ಪಿ ಮಾಡಿದ್ದು ನಿಜ. ಆದರೆ ಮೈಸೂರಿನ ಜನತೆ ಆಗಲೀ, ಅಥವಾ ಪ್ರತಿನಿಧಿಗಳಾಗಲೀ ಖಂಡಿತ ಸಮ್ಮತಿ ಕೊಟ್ಟಿದ್ದಿಲ್ಲ. ನಮ್ಮ ಮಾನ್ಯ ಸ್ನೇಹಿತರು ಯಾರೋ ಹೇಳಿದರು. ಸಾಬೀನೇ ಹೋದ ಗಡ್ಡಕ್ಕೆ ಏಕೆ ಅಳುತ್ತೀರಿ ಅಂತ. ನಾನು ಹೇಳುತ್ತೇನೆ. ಸಾಬೀ ಹೋದರೂ ಕೂಡ ಸಾಬೀ ಎನ್ನತಕ್ಕ ಗುರುತನ್ನು ಸೂಚಿಸಿರತಕ್ಕ ಗಡ್ಡ ಹೋಗ ಕೂಡದು. ಮನುಷ್ಯ ಏನೇ ದಾನ ಮಾಡಿದರೂ ತನ್ನ ಗೌರವವನ್ನು ದಾನ ಮಾಡುವುದಿಲ್ಲ. ನಮ್ಮ ಇತಿಹಾಸ ನೋಡಿದರೆ ಇದು ನಮ್ಮ ಒಂದು ಗೌರವದ ಚಿನ್ಹೆ. ಅನೇಕ ವರ್ಷಗಳಿಂದ ಬಹಳ ಚನ್ನಾಗಿ ಇದನ್ನು ಸಮರ್ಥನೆ ಮಾಡಿಕೊಂಡು ಬಂದಿದ್ದೇವೆ. ಆದ್ದರಿಂದ ಈ ಮೈಸೂರಿನ ಹೆಸರು ಮಾತ್ರ ಅಳಿಯ ಕೂಡದು. ಇನ್ನೊಬ್ಬ ಸ್ನೇಹಿತರು ಹೇಳಿದರು. ಒಬ್ಬ ರಾಕ್ಷಸ ಸತ್ತು ಹೋದ ಅವನ ಹೆಸರಿನಲ್ಲಿ ಮೈಸೂರು ಅಂತ ಇಟ್ಟಿದ್ದೀರಿ ಎಂದು. ಇದು ಒಂದು ಕೃತ್ರಿಮದಿಂದ ಹೇಳಿರ ಬಹುದೇ ಹೊರತು ಈ ರಾಕ್ಷಸ ಬಹಳ ಸತ್ಯವಂತ ಬಹಳ ಪರಾಕ್ರಮಿ, ಬಹಳ ಧೀರ. ಇಂಥಾ ಒಬ್ಬ ಧೀರನನ್ನು ....

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ ಶ್ರೀ ದೊಡ್ಡಮೇಟಿಯವರು ಸಭೆಯಲ್ಲಿ ತಿರುಗಾಡುತ್ತಾ ಸದಸ್ಯರೊಡನೆ ಮಾತನಾಡುತ್ತಿದ್ದಾರೆ; ಅವರು ಈ ರೀತಿ ಕ್ಯಾನ್‌ವಾಸ್ ಮಾಡಬಹುದೇ.

ಅಧ್ಯಕ್ಷರು.—ಅವರೇನು ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಅವರು ಕ್ಯಾನ್‌ವಾಸ್ ಮಾಡುತ್ತಿದ್ದರೆ ಅದು ಸರಿಯಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—(ಕೈಯನ್ನು ಅಲ್ಲಾಡಿಸುತ್ತಾ) ಸ್ವಾಮಿ, ನಾನು ಅಂತಹ ಕ್ಯಾನ್‌ವಾಸ್ ಏನೂ ಮಾಡುತ್ತಿಲ್ಲ. (ಸಭೆಯಲ್ಲಿ ನಗು)

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ಒಳ್ಳೆಯ ದೈವಭಕ್ತ ಅಂತಹವನನ್ನು ಕೊಂದ ಶಕ್ತಿ ತಾನು ಕೊಂದದ್ದು ತಪ್ಪು ಅಂತ ತಿಳಿದುಕೊಂಡು ಆಮೇಲೆ ಅದೇ ಶಕ್ತಿಯೇ ಇದಕ್ಕೆ ಮೈಸೂರು ಎಂದು ನಾಮಕರಣ ಮಾಡಿರುವುದು ಇತಿಹಾಸ. ಯಾರನ್ನು ಪೂಜೆ ಮಾಡುತ್ತೇವೆಯೋ ಅಂಥ ಪಾರ್ವತಿಯಿಂದ ನಾಮಕರಣವಾಗಿರತಕ್ಕ ಹೆಸರು ಇದು. ಕೋಲಾರ ಜಿಲ್ಲೆಯವರು—ತೆಲಗು ಮಾತನಾಡತಕ್ಕ ಜನ—ಮೈಸೂರು ಮೈಸೂರಾಗಿಯೇ ಉಳಿಯುತ್ತದೆ ಎಂದು ಇವತ್ತಿನ ವರೆಗೂ ಸಮ್ಮನೆ ಇದ್ದಾರೆ. ಬದಲಾವಣೆ ಮಾಡುವುದಾದರೆ ಖಂಡಿತವಾಗಿಯೂ ಕೋಲಾರ ಜನರು ಇಂದಲ್ಲ, ನಾಳೆ ಆದರೂ ಆಂಧ್ರಕ್ಕೆ ಹೋಗಲು ಪ್ರಯತ್ನ ಪಡಲೇ ಬೇಕಾಗುತ್ತದೆ. ಏಕೆಂದರೆ, ನಮ್ಮ ಜನಾಂಗಕ್ಕೆ ಸೇರಿದವರು ಬಹು ಸಂಖ್ಯಾತರು ಅಲ್ಲಿದ್ದಾರೆ, 25 ಲಕ್ಷ ಜನ ಇದ್ದೇವೆ. ಅನೇಕಲ್‌ನಲ್ಲಿ 70% ತೆಲಗು ಮಾತನಾಡುತ್ತಾರೆ. ಪಾವಗಡ, ಸಿರಾ, ಮಧುಗಿರಿ, ಚಿತ್ರದುರ್ಗ, ಬಳ್ಳಾರಿಯಿಂದ ಬೆಂಗಳೂರಿನವರೆಗೂ ಕೂಡ ನಮಗೇ ಸೇರಬೇಕಾಗುತ್ತದೆ. ಬೆಂಗಳೂರಿನಲ್ಲಿ ಕೂಡ ಕನ್ನಡಿಗರು ಮೆಜಾರಿಟಿ ಇಲ್ಲ. 23% ಮಾತ್ರ ಕನ್ನಡಿಗರು ಇದ್ದಾರೆ. ತೆಲಗು ಮಾತನಾಡ ತಕ್ಕವರು 19% ಇದ್ದಾರೆ. ಆದ್ದರಿಂದ ನಾವು ಆಂಧ್ರಕ್ಕೆ ಹೋಗತಕ್ಕ ಸನ್ನಿವೇಶ ಬರಬಹುದು. ಆದ್ದರಿಂದ ಏನೋಂದ ಉದ್ದೇಶದಿಂದ ಇದರಲ್ಲಿ ಸೇರಿದ್ದೇವೆಯೋ ಆ ಉದ್ದೇಶವನ್ನು ಕಡೆಗಾಣಿಸಿ ಕಹಿವಾತಾವರಣವನ್ನು ಕಲ್ಪನೆ ಮಾಡದೇ, ಮೈಸೂರು ಎಂಬ ಹೆಸರನ್ನು ಅಳಿಸದೇ ಎಲ್ಲರ ಮನಸ್ಸೂ ಒಂದಾಗುವಂತೆ ಮಾಡಬೇಕೆಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

ಇವತ್ತಿನ ದಿವಸ ಈ ರಾಜ್ಯವನ್ನು ಎರಡು ರಾಜ್ಯಗಳನ್ನಾಗಿ ಮಾಡಬೇಕೆಂದು ಅನೇಕರು ಹೇಳಿದ್ದಾರೆ. ಆಡಳಿತ ಹಿತದೃಷ್ಟಿಯಿಂದ ಚಿಕ್ಕ ಚಿಕ್ಕ ಯೂನಿಟ್ಟುಗಳಾಗಿರ ಬೇಕಾಗುತ್ತದೆ. 500 ಮೈಲಿ ದೂರದಿಂದ ಬೆಂಗಳೂರಿನಲ್ಲಿರುವ ಹೈಕೋರ್ಟಿಗೆ ಬರಬೇಕೆಂದರೆ ಬಹಳ ಕಷ್ಟವಾಗುತ್ತದೆ. ಅದೇ ರೀತಿ ಅಧಿಕಾರಿಗಳು ಮತ್ತು ನೌಕರರನ್ನು ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ನೂರಾರು ಮೈಲಿ ದೂರದ ಪ್ರದೇಶಗಳಿಗೆ ವರ್ಗಾವಣೆ ಮಾಡಿದರೂ ಕಷ್ಟವಾಗುತ್ತದೆ. ಆದ್ದರಿಂದ ಅವರೇ ಒಂದು ಚಿಕ್ಕ ಕನ್ನಡ ರಾಜ್ಯ ಕರ್ನಾಟದ ಅಂತ ಮಾಡಿಕೊಳ್ಳಲಿ, ನಾವು ಮೈಸೂರು ಅಂತ ಮಾಡಿಕೊಳ್ಳುತ್ತೇವೆ ಎಂದು ಹಿಂದೆಯೇ ಹೇಳಿದ್ದೆವು. ಇಂದೂ ಕೂಡ ಆ ಜನ ಮೆಜಾರಿಟಿಯಲ್ಲಿದ್ದರೂ ಸಹ ಮೈಸೂರಾಗಿ-ಬೇಕೆನ್ನುವವರೂ ಹೆಚ್ಚು ಜನರಿದ್ದಾರೆಂಬುದನ್ನು ಗಮನಿಸಿ ಕಾಂಗ್ರೆಸ್‌ನ ಹಿತದೃಷ್ಟಿಯಿಂದ ಹೈ ಕಮಾಂಡಿನವರು ಈ ನಿರ್ಣಯವನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಿ ತಳ್ಳಿಹಾಕಬೇಕೆಂದು ಕೇಂದ್ರ ಸರ್ಕಾರದವರಿಗೆ ತಿಳಿಸುವಂತೆ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.- Is the hon'ble Member serious about the point of order ?

Sri ANGADI CHANNABASAPPA.—Yes, Sir. Here, my submission is, this House can express its views only when the matter is referred to by he President. While amending Art. 3 of the Constitution, before the President recommends a Bill to be discussed or initiated in the Parliament, it is mandatory on the part of the President to ascertain the views of the Legislature. Now no Bill is before the Parliament. So, when there is no Bill what is the use of our giving views ? So, at best, this House can discuss this matter. But it cannot express its opinion by means of voting on the Resolution.

7-30 P.M.

Sri G. V. GOWDA.—Rule 144 prohibits any resolution that has been moved and voted already to be br ught again. Suppose the President of India sends a Bill to this House to ascertain its views within one year of the discussion of this Resolution. Then according to this rule is it permissible to express our opinion on the same subject matter ?

Mr. SPEAKER.—What is that rule ? Is it 144 ?

Sri G. V. GOWDA.—Before that I would bring to the kind attention of the Hon'ble Speaker article 3 (c) of the Constitution.

"......on the recommendation of the President and unless, where the proposal contained in the Bill affects the area, boundaries or name of any of the States the Bill has been referred by the President to the Legislature of that State for expressing its views........"

Supposing on the recommendation of this Resolution, the President of India sends a Bill to ascertain the views of the Legislature within one year, then is it within our jurisdiction to entertain such a Bill? Because the subject matter would be the same, under Rule 144, we cannot discuss that Bill. And the article further say:

"......for expressing its views thereon within such period as may be specified in the reference or within such further period as the President may allow and the period so specified or allowed has expired."

So when a Bill has been referred by the President, it is our duty to express our views. Supposing such a thing happens within one year, we cannot express our views. That is why I am supporting the point of order. Though we may be allowed to discuss on the Resolution, no opinion can be expressed in view of my submission. That is my argument.

Sri S. NIJALINGAPPA (Chief Minister).—This resolution cannot be brushed aside. This is not a resolution under article 3 of the Constitution. When a motion is made we can give our opinion. Here the resolution is not against law. We can discuss. It is a recommendatory resolution. This House has got authority to discuss and pass any resolution and can give its opinion.

Sri G. V. GOWDA.—But supposing the recommendation is referred back to us through a Bill by the President within one year, can we......

Mr. SPEAKER.—You have already mentioned the point. Repetition does not add to efficacy.

Sri G. V. GOWDA—Sometimes it does.

Mr. SPEAKER.—For those who have not understood fully, repetition will be useful.

Sri D. PARAMESWARAPPA.—I rise to a point of order........

Mr. SPEAKER.—Are you stressing the same point or are you contributing something more?

Sri D. PARAMESWARAPPA.—Something more, Sir. Dr, Ambedkar moved an ammendment to the proviso under article 3 of the Constitution in the Constituent Assembly that "no Bill for the purpose shall be introducad in either House of Parliament cxcept on the recommendation of the President and unless......"While rcplying to an amendment moved to the amendment introduced by hime, the Hon'ble Law Member has stated that " the discussion shall be initiated in the State Sub-clause (a) of the proviso also provides that the States shall be consulted I have not the least doubt about it that the method of consulting with the President will adopt... ..' The method of consulting which the President will adopt presupposes that a Bill should be introduced in either House of the Parliament and it should be recommended for the consultation of the Legislature of the State. Therefore, there is no provision under the Constitution for any member to initiate a resolution here and sending it for the recommendation of the President. Therefore, I say that we need not express our opinion—we may be having a right to express our opinion—but we do not have the right to vote.

Mr. SPEAKER.—I do not think there is anybody else to contribute new ideas on this. First I will deal with rule 144. "When a resolution has been moved and voted upon, no resolution or amendment raising substantially the same question shall be moved within one year from the date of moving of the earlier resolution." I suppose this is crystal clear. How Sri Venkatai Gowda fell into an error in reasoning....

Sri G. V. GOWDA.—Though it is not a resolution that has been

recommended, the subject matter would be the same.

Mr. SPEAKER.—That is rule 144. I suppose the Hon'ble Member was also a member of the committee when rule 144 was approved.

Sri G. V. GOWDA.—I was a party.

Mr. SPEAKER.—At that time it did not strike the Hon'ble Member that there should be an amendment to that rule. Why was it put in the form " no resolution or amendment "?

Sri G. V. GOWDA.—Supposing I send a resolution tomorrow on the same subject, are you entertaining it? That is my opinion.

Mr. SPEAKER.—Everybody is entitled to have his own opinion. In view of the wording, I am unable to accept the Hon. Member's contention, because, it says " when a resolution has been moved and voted upon, on resolution or amendment raising substantially the same question shall be made......" The efftect of accepting his argument will be to omit the words " resolution or amendment." These words have to be moitted ".. no resolution or amendment raising substantially the same question shall be moved within one year......" Is it not more comprehensive? One refers to a resolution on the same subject and the other is an amendment on the same subject. There is no resolution of a Bill in this Rule. A resolution is something totally different from a Bill. Therefore the subject - matter may be approached from a different line all together. It may be a resolution; may be an amendment or it may be a Bill. Therefore rule 144... ...

Sri G. V. GOWDA.—But the intention......

Mr. SPEAKER.—We are now going from the wording of the Rule to intention, and the Hon'ble Member knows how intention is defined—not even the devil knows.

Next, with regard to the objection of Sri Parameswarappa, I would like to reply in the shape of a question Was not the Hon'ble Member aware before the resolution was moved? And, this is not the first time......

Sri ANGADI CHANNABASAPPA.—Sri Parameswarappa wanted to raise it, Sir.

Mr. SPEAKER.—I am sorry. He wanted to raise it. That is not going to change the merits of the case. How was it discussed on prior occasions is also a point of which I have to take note This is not the first time May be, all collectively knowing it to be wrong have discussed it. Is this a new discovery?

Sri C. J. MUCKANNAPPA.—It was not voted upon.

Mr. SPEAKER.—Admissibil ty is there. For voting no objection was raised at all at any time. It was voted. Why did not Sri Muckannappa who was also a Member raise the objection?

Sri C. J. MUCKANNAPPA.—The resolution was only talked out.

Mr. SPEAKER.—He anticipated that it would be talked out " Parliament may by law "—I go directly to article 3 of the Constitution—"alter the name of any State: provided that no Bill for the purpose shall be introduced......"What is prohibited is introduction in the Parliament "..........in either House of Parliament except on the recommendation of the President." To whom is the disability attached? To either House of Parliament. Is there anything more in this? " And unless, where the proposal contained in the Bill affects the area, boundaries or name of any of the States, the Bill has been referred by the President to the Legislature of that State for expressing its views thereon......" Now, the initiative lies with the President The Hon'ble President may so choose to give his consent and ask the Bill to be referred to

Supposing he does not do it, what is to happen? The Hon'ble Member is anticipating that if this is once done, then a Resolution on the same subject will be in direct conflict with it. It is not like that. Now we do not know whether the President will do it or not I cannot rule this out on the ground that something is going to happen. Simply in anticipation that something may or may not happen, I cannot say that th

(MR. SPEAKER)

is out of order or it cannot be entertained, cannot be de ated upon and cannot be voted upon. Suppose it never comes, then I would have infringed upon the right of the House to discuss this by ruling it out of order now.

Sri ANGADI CHANNABASAPPA.—The President would make use of the powers vested in him by the Constitution.

Mr. SPEAKER.—That is a different matter and that has nothing to do with taking vote upon this resslution now. At least the hon'ble member now agrees with me that this can be voted upon. We may request the President not to pay heed to this Resolution. That is a different spect and I am not concerned with that. I am immediately concerned with whether the House is competent to vote upon this or not. I am not concerned with what the President is going to do and whether this will lead to a direct conflict then. It is as though we are afraid of a tiger somewhere in the forest. Absolutely not. If the President of the Indian Republic wants a change in the name then it is up to him to see that a Bill for the same is introduced in Parliament and that it is referred to thisHouse with a direction to express our views. If we are called upon to express our views, where is the question of conflict? We have expressed our opinion. Why should we think that we will not be able to express the same opinion? How do you anticipate that there will be conflict? Therefore, I rule out the objection.

Sri D. PARAMESWARAPPA.—This resolution is recommendatory and it will have to be sent to the President. That will involve a circuitous method.

Mr. SPEAKER.—I am not concerned with what action is to be taken. I am concerned with conducting the deliberations of the House in a manner which is legal. This resolution does not give me any direction.

Sri D. PARAMESWARAPPA.—I am not questioning the legality of the deliberations. What I submit is that this is a resolution for changing the name to Karnatak. If this is passed, it is going to be sent in the form of a recommendation to the President.

Mr SPEAKER.—How do you anticipate it? Is it said in the resolution that it should be submitted to the President for necessary action?

Sri D. PARAMESWARAPPA.—That is the purport of the resolution though it may not be said in the resolution in so many words.

Mr. SPEAKER.—I cannot anticipate something which is not before me. Moreover, rule 145 only says that resolutions passed by the Assembly shall be forwarded to the Minister concerned.

Sri S. SIVAPPA (Sravanabelgola).—This House has got power to discuss anything. There is no doubt about that. But from the wording of the resolution, we are making a recommendation. This resolution seeks to send a recommendation to the Government of India So we are discussing a subject which requires amendment of the Constitution. This resolution has got some special characteristic in the sense that if this resolution is given effect to.........

Mr. SPEAKER.—Am I concerned with the effect?

Sri S. SIVAPPA.—What I want to submit is that this resolution has some special characteristic and it cannot be equated with other subjects which the House has got a right to discuss. This resolution deals with amendment of the Constitution. For amending the Constitution the President has to direct a Bill for the same to be introduced in Parliament and refer it to this House for expression of views. Then only the Constitution can be amended. Before such a Bill comes before the House this resolution seeks to take the vote of the House on the subject which has not been referred by the President to this House for expression of views. Of course, we have discussed the subject, but that is different from taking vote. So my submission is that the latter portion, namely, taking vote need not be done because that would amount to a breach of the Constitution.

Sri S. M. KRISHNA (Maddur).—This resolution has a special characteristic as the Leader of the Opposition pointed

out because here the Government of India also comes in to the picture. How far would we be in order in making a recommendation which certainly is not binding on the Government of India because a Bill for the same has not been referred to us by the President? Here the Government of Mysore is not a party to this and so the Government of Mysore is helpless. Any vote taken today becomes superfluous because it cannot be acted upon.

Mr. SPEAKER.—I am not concerned with fluity or superfluity. I am concerned only with seeing that nothing wrong happens in the House. If any matter is likely to bring about superfluity, is it wrong?

Sri S. M. KRISHNA.—It becomes wrong on our part to take vote on this resolution. I think the Speaker can take time and then give a considered ruling on this matter.

Sri S. SIVAPPA.—I appeal to the Speaker to give a considered ruling because this is a very important matter.

Mr. SPEAKER.—I think I have taken enough time. My thinking is clear. I am not going to be taken away by an appeal.

Sri G. V. GOWDA.—If no purpose is going to be served by this resolution, what is the use of expressing our opinion on it?

Sri S. M. KRISHNA.—The subject matter of the resolution is such that we cannot in any way help it. Could such a matter be the subject matter of a resolution here?

Mr. SPEAKER.—A fresh aspect has been raised by the Hon. Leader of the Opposition. He says that if this resolution is to be given effect to, it has to go to the Government of India and the Government of India has to move the President, and the President has to apply his mind and say "I want a change in the name" and then he has to direct a Bill to be introduced in Parliament and refer it to this House. How many steps are there? Are we anticipating all these steps? For all that, the President may not take any action on this resolution because it is only recommendatory and it is not binding upon the Government of India. If the Government of India begins to think otherwise, there is nothing that is going to happen. Therefore, to say that if this resolution is discussed and voted upon here, it would be a breach of the Constitution and so it should not be voted upon, is something which, I am sorry, I am unable to uphold. If any further consideration was necessary the hon'ble member should have told me earlier. I had no doubts in my mind. If I had had any, I would have given expression to it earlier.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಇದು ಬಹಳ ಮುಖ್ಯವಾದ ವಿಷಯ. ಈ ನಿರ್ಣಯದ ಮೇಲೆ freedom of vote ಇದೆಯೆಂದು ಹೇಳಿದ್ದಾರೆ. ಈಗ ನಮ್ಮ ಕಡೆ ಕೃಷ್ಣರವರು ಮಾತ್ರ ಮಾತನಾಡಿದ್ದಾರೆ. ನಾವೆಲ್ಲರೂ ಮಾತನಾಡಿ ಎಲ್ಲರಲ್ಲೂ ನಮ್ಮ ಅಭಿಪ್ರಾಯವನ್ನು ಹೇಳಿ convince ಮಾಡಬೇಕು. ಅದಕ್ಕಾಗಿ ಹೆಚ್ಚು ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಾನ್ಯಸದಸ್ಯರಾದ ಹುಚ್ಚೇಗೌಡರು ಒಂದಂಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಮೊನ್ನೆಯೇ ಗೊತ್ತಿತ್ತು ಇದರ ಮೇಲೆ ಚರ್ಚೆ 5 ಗಂಟೆಗೆ ಮುಗಿಯುತ್ತದೆ ಎಂದು. ಈಗ 31 ಜನ ಒಟ್ಟು ಮಾತನಾಡಿದ್ದಾರೆ. ಎಲ್ಲರಿಗೂ ಮಾತನಾಡಲು ಹೇಗೆ ಸಾಧ್ಯ?

Sri B. HUTCHE GOWDA.—That is not proper.

Mr. SPEAKER.—Unless the House wants to extend the time I cannot do anything.

Sri B. HUTCHE GOWDA.—That can be ascertained by the Chair.

Mr. SPEAKER.—I have ascertained and the House has said 'No'.

Sri B. HUTCHE GOWDA.—It is the privilege of the minority to seek the protection of the Chair.

ತಾವು ಈ ವಿಷಯ ಪೂರ್ತಿಯಾಗಿ ಚರ್ಚೆಯಾಗಿದೆಯೋ ಇಲ್ಲವೇ ಎಂಬುದನ್ನು ಹೇಳಬೇಕು. ಎಲ್ಲಾ ಭಾಗಗಳಿಂದಲೂ ಅಭಿಪ್ರಾಯಗಳು ಬಂದಿವೆಯೇ ಇಲ್ಲವೇ ಎಂಬುದನ್ನು ತಾವು ನಿರ್ಧರಿಸಬೇಕಾಗಿದೆ. ಹಾಗಿಲ್ಲದೆ ಈ ಹೊತ್ತು ಓಟಿಗೆ ಹಾಕುತ್ತೇನೆಂದು ಹೊರಟು ಮೆಜಾರಿಟಿಯ ಅಭಿಪ್ರಾಯದ ಮೇಲೆ ಹೋಗುತ್ತೇನೆಂದರೆ ನಮಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈಗ ದಯವಿಟ್ಟು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು, ಇಲ್ಲದಿದ್ದರೆ ಒಂದು ದಿವಸ ಮುಂದುವರಿಸಿ ಇದರ ಚರ್ಚೆಗೆ ಅವಕಾಶ ಕೊಡಬೇಕು.

Mr. SPEAKER.—We will have to decide now itself.

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಈಗ ಎರಡು ದಿವಸಗಳವರೆಗೂ ಈ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ. ಇದೇ ಮೊದಲನೆಯ ಸಲವಲ್ಲ, ಈ ಪ್ರಶ್ನೆ ಈ ಸಭೆಯ ಮುಂದೆ ಬಂದಿರುವುದು. ಬಹುಶಃ ಇದು ಮೂರನೆಯ ಸಲ. ಆದರೂ I know that there are still a large number of members who

(ಶ್ರೀ ಎಸ್. ನಿಜಲಿಂಗಪ್ಪ)

want to speak on this subject. I do not want to hustle and thus suppress the opinion of the House.

ಈ ವಿಚಾರದಲ್ಲಿ ನನ್ನ ಸ್ವಂತ ಅಭಿಪ್ರಾಯ ಬಹುಶಃ ಲೆಕ್ಕಕ್ಕಿದೆಯೆಂಬುದು ನನಗೆ ಗೊತ್ತಿದೆ. ಅದೇನೆಂಬುದನ್ನು ಮುಂದೆಯಾದರೂ ಹೇಳತಕ್ಕ ಕಾಲ ಬಂದೀತು. ಅದನ್ನು ಹೇಳುತ್ತೇನೆ. ಆದರೂ, ಈಗ ಇನ್ನೂ ಕೆಲವು ಸದಸ್ಯರು ಮಾತನಾಡಬೇಕೆಂದಿದ್ದಾರೆಂದು ಕಂಡುಬರುತ್ತಿದೆ. ಅದನ್ನು ಮೊಟಕು ಮಾಡಬೇಕೆಂಬ ಅಪೇಕ್ಷೆ ನನಗಿಲ್ಲ. ಯಾವುದೇ ಒಂದು ತತ್ವವೇ ಆಗಲಿ, ಸಮಾಜವನ್ನು ಹೊಸದಾಗಿ ನಿರ್ಮಾಣ ಮಾಡಬೇಕೆಂಬುದೇ ಆಗಲಿ—ಅಂಥಾ ವಿಚಾರವೇನೂ ಇದರಲ್ಲಿ ಅಡಗಿಲ್ಲ; ಇದು ಭಾವನಾ ಪ್ರಪಂಚಕ್ಕೆ ಒಳಗಾದದ್ದು. ಹೆಸರನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತಿದ್ದೇವೆ. ಆದರೂ ಭಾವನೆಗಳಿಗೂ ಬೆಲೆಯುಂಟು. ಅವುಗಳನ್ನು ಹೇಳುವುದಕ್ಕೆ ಅವಕಾಶ ಕೊಡುವುದು ಸೂಕ್ತ. ಮೈಸೂರೆಂದೇ ಹೆಸರಿಡಬೇಕೆಂದು ಅನೇಕ ಸದಸ್ಯರು ಅಪೇಕ್ಷೆ ಪಡುವುದು ಸ್ವಾಭಾವಿಕ. ಅದೇ ರೀತಿ 'ಕರ್ನಾಟಕ' ಎಂದೇ ಆಗಬೇಕೆಂದು ಅಪೇಕ್ಷೆ ಪಡುವುದೂ ಉಂಟು. ಈ ವಿಷಯಗಳಲ್ಲಿ ಭಾವನಾ ಪರವಶರಾಗಿ ಮಾತನಾಡುವುದೂ ಸ್ವಾಭಾವಿಕವೇ. ಇವೆರಡಕ್ಕೂ ಸಾಕಷ್ಟು ಕಾರಣಗಳೂ ಇವೆ. ಈಗ ಅನೇಕ ಸದಸ್ಯರು ಮಾತನಾಡಿದ್ದರೂ, ಇನ್ನೂ ಮಾತನಾಡುವ ಅನೇಕ ಸದಸ್ಯರಿದ್ದಾರೆಂದು ನನಗೂ ಅನ್ನಿಸುತ್ತದೆ. ಸದಸ್ಯರೊಡನೆ ಮಾತನಾಡುವುದು ಅವಶ್ಯಕವೆಂದು ನನಗೂ ಅನ್ನಿಸುತ್ತದೆ. ಆದ್ದರಿಂದ ಈ ವಿಷಯದಲ್ಲಿ ಯಾವ ಕಡೆಯೂ 'ಹೊಟ್ಟೆ ತುಂಬಿತು' ಎಂದಾಗಿಲ್ಲ; ಬಿಟ್ಟುಬಿಡುವಂಥಾದ್ದೂ ಆಗಿಲ್ಲ. ಎಷ್ಟು ಬೇಕಾದರೂ ಮಾತನಾಡಲು ಅವಕಾಶಕೊಡಬಹುದು. ಆದಾಗ್ಯೂ ಈ ಪ್ರಶ್ನೆ ತೀರ್ಮಾನ ಆಗಲೇ ಬೇಕು. ಏಕೆಂದರೆ ದೇಶದಲ್ಲಿ ಅನೇಕರು ಮಾತನಾಡಿಕೊಳ್ಳುತ್ತಿದ್ದಾರೆ—ನನ್ನಮೇಲೆ ಅನೇಕ ತರದ ಒತ್ತಾಯಗಳು ಬರುತ್ತಿವೆ. ಅವಕಾಶ ಸಿಕ್ಕಿದಾಗ ಸುಮ್ಮನಿದ್ದರು ಎಂದು ಜನರು ಹೇಳುತ್ತಿದ್ದಾರೆ. ಈ ಹೊತ್ತಿನ ವಾತಾವರಣ ನೋಡಿದರೆ 'ಕರ್ನಾಟಕ' ಎಂಬುದಕ್ಕೆ ಓಟು ಬಂದೀತು ಎಂದು ತೋರುತ್ತೆ. ಆದಾಗ್ಯೂ ಅವರ (ವಿರೋಧದವರ) ಮನಸ್ಸನ್ನೂ ಒಲಿಸಿಕೊಂಡು ಯಾವುದಾದರೂ ಒಂದು ಒಮ್ಮತದ ತೀರ್ಮಾನಕ್ಕೆ ಬರಬೇಕೆಂಬ ಮನಸ್ಸುಳ್ಳವರಾಗಿದ್ದೇವೆ. ಈ ವಿಚಾರದಲ್ಲಿ ಇನ್ನೂ ಸ್ವಲ್ಪ ಅವಕಾಶ ಕೊಟ್ಟರೆ ಒಮ್ಮತವನ್ನು ತರುವುದು ಸಾಧ್ಯವೆಂದು ಕಾಣುತ್ತೆ. ಒಂದು ವೇಳೆ ಅದಾಗದಿದ್ದರೆ, ಬಹು ಜನರಿಗೆ ಏನು ಹೆಸರಿಡಬೇಕೆಂದು ಅಭಿಪ್ರಾಯ ಬರುತ್ತದೋ ಅದು ಬರಲಿ, ಅದು ಕೇಂದ್ರಕ್ಕೇ ಹೋಗುತ್ತದೆ. ಅಲ್ಲಿ ರಾಷ್ಟ್ರಾಧ್ಯಕ್ಷರು ಬಿಲ್ ಆಗಲೆಂದು ಅಭಿಪ್ರಾಯ ಪಟ್ಟರೆ, ಬಿಲ್ ಆಗಿ ನಮ್ಮ ಮುಂದೆ ಬರುತ್ತದೆಂಬುದು ಎಲ್ಲರಿಗೂ ಗೊತ್ತಿದೆ. ಈ ಸಂದರ್ಭದಲ್ಲಿ ಮಾತನಾಡುತ್ತಾ ಒಬ್ಬ ಮಾನ್ಯ ಸದಸ್ಯರು ಹೇಳಿದರು, ಈ ವಿಷಯದಲ್ಲಿ ಸರಕಾರದವರು ಹಿಂದು ಮುಂದು ನೋಡಿಕೊಂಡಿದ್ದಾರೆ; ಮುಖಂಡತ್ವ ಶೂನ್ಯವಾಗಿದೆ ಎಂದು. ದೇಶ ಕಟ್ಟುವ ವಿಚಾರದಲ್ಲೀಗ ಮುಖಂಡತ್ವ ಎನ್ನುವುದು ಬೇಕು. ಹೆಸರಿಡುವ ವಿಚಾರದಲ್ಲಿ ಎಲ್ಲವನ್ನೂ ತಮ್ಮ ಜೊತೆಗೆ ತೆಗೆದುಕೊಂಡು ಹೋಗಬೇಕೆಂಬುದು ವಿಹಿತ. ಈ ದೃಷ್ಟಿಯಿಂದ ನಾನು ಈ ವಿಚಾರದಲ್ಲಿ ಇನ್ನೂ ಚರ್ಚೆ ನಡೆಯಲಿ ಎಂದು ಅಪೇಕ್ಷೆ ಪಡುತ್ತೇನೆ. ಆದ್ದರಿಂದ ಮುಂದಿನ ಸಲ ಈ ಸಭೆ ಸೇರಿದಾಗ ನಾನ್-ಅಫಿಷಿಯಲ್ ದಿವಸಗಳಲ್ಲಿ ಒಂದು ದಿವಸ ಇದಕ್ಕೆ ಕೊಡಬಹುದೆಂದು ಮಾನ್ಯ ಸದಸ್ಯರೆಲ್ಲರೂ ಒಪ್ಪಿದರೆ ಮತ್ತು ಅದರಂತೆ ತಮ್ಮ ಅಪ್ಪಣೆಯಾದರೆ, ಅದರಂತೆ ಮಾಡಬಹುದು. ಆ ದಿವಸ 3½ ಗಂಟೆ ಇದಕ್ಕೆ ಕೊಡಬಹುದು, ಆ ದಿವಸ ಇದರ ಮೇಲೆ ಸಾಕಷ್ಟು ಚರ್ಚೆಯಾಗಿ ಒಂದು ನಿರ್ಣಯಕ್ಕೆ ಬರುವುದಕ್ಕೆ ಅವಕಾಶಮಾಡಿಕೊಳ್ಳಬಹುದು. ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿರಬೇಕಾದ್ದಿಲ್ಲ. ರಾಜ್ಯ ಕಟ್ಟಿದ್ದಾಗಿ, ಹೆಸರಿಗಾಗಿ ಯಾರ ಮನಸ್ಸನ್ನೂ ಕೆಡಿಸಬೇಕಾಗಿಲ್ಲ. ಕರ್ನಾಟಕವೇ ಆಗಲಿ, ಮೈಸೂರೆಂದೇ ಆಗಲಿ ಯಾವುದಾದರೊಂದು ಹೆಸರಿಡಬೇಕೆನ್ನುವ ವಿಷಯದ ಮೇಲೆ ಪ್ರತಿಯೊಬ್ಬರೂ ತಮ್ಮತಮ್ಮ ಅಭಿಪ್ರಾಯ ಹೇಳುವುದಕ್ಕೆ ಒಂದು ಸ್ವಾತಂತ್ರ್ಯವಿದ್ದು ಚರ್ಚೆ ನಡೆಯುತ್ತಿದೆ. ಆದ್ದರಿಂದ ಈ ವಿಷಯದಲ್ಲಿ ತಾವು ಒಪ್ಪಿಗೆ ಕೊಡುವುದಾದರೆ ಮುಂದೆ ಒಂದು ದಿವಸ ಚರ್ಚೆ ಮಾಡಿ ತೀರ್ಮಾನ ಮಾಡಬಹುದೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

8-00 P.M.

Sri S. SIVAPPA.—Sir,......

Mr. SPEAKER.—The hon. member must remember that he is asking me to put this to vote after the period fixed for it has lapsed, which I cannot do. If he has anything to say, I will hear him before I adjourn the House.

I am very happy that the Leader of the House has said something which is satisfactory to everybody. I am in entire agreement with him that no member should feel that he has not been given a chance to express his views either for or against the resolution before the resolution is voted upon.

Sri S. SIVAPPA.—I am very happy that the Leader of the House has agreed to extend the time for debate on this resolution. But he made it imperative that the discussion should be extended only by one day. That attitude I do not appreciate. This House must be given time to discuss the resolution as long as it requires. He must leave it to the House.

Mr. SPEAKER.—I am trying to read what is passing in the mind of the Leader of the Opposition, but he must remember that according to rules there cannot be any indefinite extension of time. When we adjourn the discussion today we must make it a definite adjournment. At the end of that time if we feel like extending the time further, we can do it.

The House will now adjourn *sine die.*

The House adjourned sine die *at Five Minutes past Eight of the Clock.*